THE BOOK WAS DRENCHED

# Noise Book

UNIVERSAL LIBRARY
OU_198667
UNIVERSAL LIBRARY

**OSMANIA UNIVERSITY LIBRARY**

Call No. K923.2 N72 S Accession No. K1333

Author ಸುರೇಂದ್ರ ಶಿವರಾವ ದೇಸಾಯಿ

Title ಜೋಸೆಫ್ ಸ್ಟ್ಯಾಲಿನ.

This book should be returned on or before the date last marked below.

ಶ್ರೀ.

ಸರಸ್ವತೀ ಭಾರತ ಭಕ್ತ ಗ್ರಂಥಮಾಲಾ.

ಪುಷ್ಪ ೪.

( ಆರಂಭಿತ ವರ್ಷ ೧೯೨೨ )

॥ ಶ್ರೀ: ಓಂ ॥

[illegible]

# ಜೋಸೆಫ್ ಮ್ಯಾಝಿನಿ.

(ಹದಿನಾರನೇ ಪುಷ್ಪ.)



सरस्वति नमस्तुभ्यं वरदे कामरूपिणि ।
विद्यारंभं करिष्यामि सिद्धिर्भवतु मे सदा ॥

ಕ್ರಯ:--ರೂ. ೦. ಆ:ಣೆ ] ೧೯೨೪ [ ಪ್ರತಿ: ೧—೯ ೦ ೦೦.

॥ श्री ॥

"न हि ज्ञानेन सदृशं पवित्रमिह विद्यते" भगवद्गीता.

# ಶ್ರೀ ಸರಸ್ವತೀ ಭಾರತಭಕ್ತ ಗ್ರಂಥಮಾಲೆಯ

## ವಿಜ್ಞಾಪನಾ ಪತ್ರಿಕೆಯು.

ಈ ಮಾಲೆಯ ಉದ್ದೇಶವು:—(೧) ಸುಪ್ರಸಿದ್ಧ ಸಾಧುಸತ್ಪುರುಷರ ಹಾಗೂ ರಾಷ್ಟ್ರಭಕ್ತರ ಚರಿತ್ರೆಗಳನ್ನು ಹೃದಯಂಗಮವೂ, ಸ್ಫೂರ್ತಿದಾಯಕವೂ ಆಗುವಂತೆ ರಚಿಸಿ, ತನ್ಮೂಲಕ ಜನತೆಯಲ್ಲಿ ಸ್ವಧರ್ಮ, ಸ್ವಾಭಿಮಾನಾದಿ ಗುಣಗಳು ಅಭಿವೃದ್ಧಿಯಾಗುವಂತೆ ಪ್ರಯತ್ನಿಸುವದು.

(೨) ಸ್ವತಂತ್ರ ವಿಚಾರಗಳಿಂದ ಪೂರಿತವಾದ ಪುಟ್ಟ ಪ್ರಬಂಧಗಳನ್ನು ಪ್ರಕಟಗೊಳಿಸಿ ಕನ್ನಡ ವಾಙ್ಮಯೋಪವನಶ್ರೀಯನ್ನು ಯಥಾಮತಿ ಹೆಚ್ಚಿಸುವದು.

ನಿಯಮಾವಲಿಗಳು:-(೧) ಈ ಮಾಲೆಯ ವರ್ಷಾರಂಭವು ಜ್ಯಾನ್ಯುವರಿ ೧೯೩೨. (೨) ಪ್ರತಿ ಷಣ್ಮಾಸಕ್ಕೊಮ್ಮೆ ೫ ಅಥವಾ ೬ ಪುಟ್ಟ ಪ್ರಬಂಧಗಳಂತೆ ವರ್ಷಕ್ಕೆ ಎರಡು ಸಾರೆ ಪುಸ್ತಕಗಳನ್ನು ಪ್ರಸಿದ್ಧಗೊಳಿಸುವದು. (೩) ಪುಸ್ತಕವು ಪ್ರಸಿದ್ಧಿಸಲ್ಪಡತಕ್ಕ ಮಾಸಗಳು, ಜ್ಯಾನ್ಯುವರಿ ಮತ್ತು ಜುಲೈ. (೪) ಪ್ರತಿ ಪ್ರಬಂಧದ ಬೆಲೆಯು ನಾಲ್ಕು ಆಣೆಗಿಂತ ಹೆಚ್ಚಿಗಿರದು. (೫) ಪ್ರತಿ ಷಣ್ಮಾಸದಲ್ಲಿ ಗ್ರಂಥಗಳು ಪ್ರಚುರಗೊಂಡನಂತರ ಎಲ್ಲ ಪುಸ್ತಕಗಳನ್ನು ಒಮ್ಮೆಲೆ, ಸಮಕ್ಷಮ ಅಥವಾ ವ್ಹಿ. ಪೀ. ಯಿಂದ ಗ್ರಾಹಕರಿಗೆ ಮುಟ್ಟಿಸುವ ವ್ಯವಸ್ಥೆ ದಾತೃಗಳಂತೆ ಭಾವಿಸಿ ಅವರಿಗೆ ಪ್ರತಿ ಆರು ತಿಂಗಳಿಗೆ ನಮ್ಮ ಮಾಲೆಯ ಎಲ್ಲ ಗ್ರಂಥಗಳನ್ನು ಕಳಿಸುತ್ತ ಹೋಗುವದು. (ಆದರೆ ಎರಡನೇ ಸಾರೆ ಗ್ರಾಹಕರಾಗಲಿಚ್ಛಿಸುವವರು ಮೊದಲೇ ನಮಗೆ ತಿಳಿಸತಕ್ಕದ್ದು.) (೭) ಈ ಪ್ರಯತ್ನಕ್ಕೆ ಪೂರ್ಣಾಶ್ರಯವು ದೊರೆತರೆ ಮುಂದೆ ಪ್ರತಿಮಾಸಕ್ಕೆ ಒಂದರಂತೆ ಹೊರಡಿಸುವದು (೮) ಈ ಮಾಲೆಯಲ್ಲಿ ಸುಪ್ರಸಿದ್ಧ ವಿದ್ವಾಂಸರಿಂದ ಗ್ರಂಥಗಳು ರಚಿಸಲ್ಪಡುವವು. (೯) ಈ ಮಾಲೆಯಲ್ಲಿ ಹೊಸದಾಗಿ ಲೇಖನಕಾರ್ಯವನ್ನು ಕೈಕೊಳ್ಳಲಿಚ್ಛಿಸುವ ಕೇವಲ ಸಂಸ್ಥೆಯ ಆಶ್ರಯದಾತೃಗಳು ತಮ್ಮ ಪ್ರಬಂಧಗಳನ್ನು ಸಂಪಾದಕರ ಕಡೆಗೆ ಕಳುಹಿಸಬಹುದು. ಅವುಗಳು ನಮ್ಮ ಮಂಡಲಕ್ಕೆ ಸಮ್ಮತವಾದಲ್ಲಿ ಮುದ್ರಿಸಲ್ಪಡುವವು. ಹಾಗಾಗದ ಪಕ್ಷದಲ್ಲಿ ರಜಿಸ್ಟರಕ್ಕೆ ತಗಲಬಹುದಾದ ಹಣಕ್ಕೆ ತಿರುಗಿ ಗ್ರಂಥಕಾರರಿಗೆ ವ್ಹಿ. ಪಿ. ಮಾಡಲಾದೀತು. (೧೦) ಈ ನವ ಲೇಖಕರು ನಮ್ಮ ಮಾಲೆಗೆ ಕನಿಷ್ಠ ಪಕ್ಷಕ್ಕೆ ೨೫ ಆಶ್ರಯದಾತೃಗಳನ್ನು ಮಾಡಿಕೊಡಬೇಕು.

# ರಾಜಹಂಸ.

ಇವರಲ್ಲಿ ಶೈಕ್ಷಣಿಕ, ನೈತಿಕ, ಸಾಮಾಜಿಕ, ಔದ್ಯೋಗಿಕ, ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಸರಸ ಲೇಖಗಳೂ, ವ್ಯಾಪಾರಿ ಸುದ್ದಿಗಳೂ ಬರುವವು; ಇದಲ್ಲದೆ ಪತ್ರವ್ಯವಹಾರಗಳು ಕಾಯದೇಸೀರಿದ್ದಲ್ಲಿ ಸ್ಥಳದ ಅನುಕೂಲತೆಯ ಪ್ರಕಾರ ಹಾಕಲ್ಪಡುವವು.

## ವರ್ಗಣೀ ದರಗಳು.

| ದೈನಿಕ ರಾಜಹಂಸ | ವಾರಪತ್ರಿಕೆ |
|---|---|
| ೧ ವರ್ಷಕ್ಕೆ ೧೨ ರು. | ೧ ವರ್ಷಕ್ಕೆ ೩ ರೂ. |
| ೬ ತಿಂಗಳಿಗೆ ೭ ರು. | ೬ ತಿಂಗಳಿಗೆ ೧ ರೂ. ೧೨ ಆಣೆ. |
| ೩ ತಿಂಗಳಿಗೆ ೪ ರೂ. | ೩ ತಿಂಗಳಿಗೆ ೧ ರೂ. |
| ೧ ತಿಂಗಳಿಗೆ ೧॥ ರೂ. | ೧ ತಿಂಗಳಿಗೆ ೬ ಆಣೆ. |
| ಬಿಡಿ ಪತ್ರ ೧ ಕ್ಕೆ ೬ ಪೈ. | ಬಿಡಿ ಪತ್ರ ೧ ಆಣೆ. |

ಇದರಲ್ಲಿ ಟಪಾಲು ಖರ್ಚ ಸಹ ಸೇರಿರುತ್ತದೆ.

## ನೋಟೀಸಿನ ದರಗಳು.

೧ ರಾಜಹಂಸದ ಸಿಂಗಲ್ ಕಾಲಮಿನ ಪ್ರತಿ ಕನ್ನಡ ಹತ್ತುವಳಿಗಳಿಗೆ ೧ ರೂ. ೨ ಮರಾಠಿ ಸಿಂಗಲ್ ಕಾಲಮಿನ ಪ್ರತಿ ಒಂದು ಸಾಲಿಗೆ ೩ ಆಣೆಯಂತೆ. ೩ ಇಂಗ್ಲಿಷ ಸಿಂಗಲ್ ಕಾಲಮಿನ ಪ್ರತಿ ಒಂದು ಸಾಲಿಗೆ ೫ ಆಣೆಯಂತೆ. ೪ ನೋಟೀಸನ್ನು ಎರಡಾವರ್ತಿ ಛಾಪಿಸುವದಾದರೆ ಮೊದಲಿನ ಸಾರೆಗಿಂತ ಕಡಿಮೆ ದರ. ೪–೫ ಸಾರೆ ಛಾಪಿಸುವದಾದರೆ ಮೊದಲನೇ ಸಾರೆಯ ಅರ್ಧ ದರ ಬೀಳುವದು. ಕಾಯಮ ಜಾಹೀರಾತ ಇಡುವವರು ಸಮಕ್ಷಮ ಅಥವಾ ಟಪಾಲ ದ್ವಾರದಿಂದ ತಿಳುಕೊಳ್ಳಬಹುದು.

ರಾಜಹಂಸ, ಮ್ಯಾನೇಜರ, ಧಾರವಾಡ.

## ನೋಡಿದರೆ ಬಿಡಲಾಗದಿರುವ

# ಹೊಸ ಧಾರ್ಮಿಕ ಮತ್ತು ರಾಜಕೀಯ ಗ್ರಂಥಗಳು.

ಹಲವು ಪತ್ರಿಕೆಗಳಿಂದ ಪ್ರಶಂಸಿತವಾದವು.

(೧) ಹಿಂದೀಸ್ವರಾಜ್ಯ. (ಎರಡನೇಯ ತಿದ್ದಿದ ಮುದ್ರಣ) ಅಚ್ಚಿನಲ್ಲಿದೆ.

(೨) ನೀತಿಧರ್ಮ. ( ಸಚಿತ್ರ ) ಇದು ಮಹಾತ್ಮಾ ಗಾಂಧಿಯವರ ಗ್ರಂಥದ ಭಾಷಾಂತರ. ಪ್ರತಿಯೊಬ್ಬ ಆಸ್ತಿಕನೂ ಓದತಕ್ಕದ್ದು ೬ ಆ.

(೩) ತಿಲಕ ಮಹಾರಾಜರು. ಇದನ್ನು ಪ್ರತಿಯೊಬ್ಬ ದೇಶಾಭಿಮಾನಿಯೂ ಓದಬೇಕು. ಇದರಲ್ಲಿ ಅಂದವಾದ ೭ ಚಿತ್ರಗಳಿವೆ. ೮ ಆ.

(೪) ಹಿಂದೀಭಾಷಾಸಾರ. ಇದರಿಂದ ೧-೨ ತಿಂಗಳಲ್ಲಿ ಹಿಂದೀಭಾಷೆಯನ್ನು ಶೀಘ್ರವಾಗಿಯೇ ಕಲಿಯಬಹುದು. ೦—೫—೦

(೫) ಶ್ರೀಕೃಷ್ಣಜನ್ಮಾಷ್ಟಮಿಯ ಹಬ್ಬದ ಮೂಲ ಉದ್ದೇಶ, ಶ್ರೀಕೃಷ್ಣಜನ್ಮದ ರಹಸ್ಯ ಇತ್ಯಾದಿ ಐತಿಹಾಸಿಕ ವಿಷಯಗಳನ್ನು ಇದರಿಂದ ಸುಲಭವಾಗಿ ತಿಳಿಯಬಹುದು. ೦—೧—೬ (೬) ಆಂಡ್ರ್ಯೂಜರ ಅಸಹಕಾರ ಪತ್ರಗಳು. (ಸಚಿತ್ರ) ಅಸಹಕಾರದ ಅವಶ್ಯಕತೆಯನ್ನು ತಿಳಿದುಕೊಳ್ಳಲಪೇಕ್ಷಿಸುವವರು ಓದಲೇಬೇಕು ೦-೬-೦, ಚತುರ್ಕೋಟಿ ಭಾಗವತರ ಚರಿತ್ರ. ಸಚಿತ್ರ. ೦—೪—೦, ಶ್ರೀಮಧ್ವಾಚಾರ್ಯರ ಚರಿತ್ರ. ಸಚಿತ್ರ. ೨ ಆ. Swaraj Cyclopedia Part I 0–8–0, ಎಂಟು ಮಂದಿ ಸಾಧುಗಳ ಚರಿತ್ರ. ( ಸಚಿತ್ರ ) ಅಚ್ಚಿನಲ್ಲಿದೆ. ವ್ಯಾಪಾರಿಗಳಿಗೆ ಧಾರಾಳವಾದ ದಳ್ಳಾಳಿ ಸಿಕ್ಕುವುದು. ಹೆಚ್ಚಿನ ಮಾಹಿತಿಗೆ ಸ್ಟಾಂಪಿಟ್ಟು ಬರೆಯಿರಿ:—

ತಿಲಕಸಂದೇಶ ಕಾರ್ಯಾಲಯ, ಮಂಗಳೂರು, ದ ಕನ್ನಡ.

---

# ಎಲ್ಲಿ ದೊರೆಯುವದು?

ಪ್ಲೇಗ, ಕಾಲರಾ ಮೊದಲಾದ ರೋಗಗಳ ನಿವಾರಣಾರ್ಥವಾಗಿ ಅತ್ಯಂತ ಗುಣಕಾರಕ ಔಷಧಗಳೂ, ಬೇರೆ ತರತರದ ಔಷಧಗಳೂ ಸುಲಭ ಕ್ರಯಕ್ಕೆ ದೊರೆಯುವ ಸ್ಥಳವು ಇದಲ್ಲದೆ ಮತ್ತಾವುದು ?

## ಕನಕಾದಿತ್ಯ ಮೆಡಿಕಲ್ ಸ್ಟೋರ್ಸ್

ಕೆಮಿಸ್ಟ್ಸ್ ಆ್ಯಂಡ್ ಡ್ರಗಿಸ್ಟ್ಸ, ಸ್ಟೇಶನ್ ರೋಡ್,

ಹುಬ್ಬಳ್ಳಿ.

# ಶ್ರೀ ವಿದ್ಯಾರಣ್ಯ
# ಗ್ರಂಥಮಾಲಾ, ಅಗಡಿ.

ಮೂರನೇ ವರ್ಷದ ಸಚಿತ್ರ ನೂತನ ಪುಸ್ತಗಳು. ವಿಕ್ರಿಗೆ ಸಿದ್ಧ!

೧. ವಿಂಧ್ಯಾಚಲ (ಸಚಿತ್ರ ಕಾದಂಬರಿ ಭಾ- ೧.):— ಬೆಲೆ ೧೨ ಆಣೆ.

೨. ಭಾರತೀಯ ಶ್ರೀಪುಷ್ಪ:— ಬೆಲೆ ೧೦ ಆಣೆ.

೩. ಕೇವಲ ಮಾತೃಭೂಮಿಗಾಗಿ:— ಕಾದಂಬರಿ ಸಚಿತ್ರ ಬೆಲೆ ೪ ಆಣೆ.

೪. ಶ್ರೀರಾಮ ಹೃದಯ:— ಬೆಲೆ ೩ ಆಣೆ.

—:ಮಾಲೆಯ ಹಿಂದಿನ ಪುಸ್ತಗಳು:—

ಸ್ವರಾಜ್ಯವಿಯೋಗ ನಾಟಕ ಬೆಲೆ ೧೨ ಆಣೆ. ಗೃಹಲಕ್ಷ್ಮೀ ಕಾದಂಬರಿ ಬೆಲೆ ೮ ಆಣೆ. ರಾಕ್ಷಸೀ ಸರಕಾರ ಬೆಲೆ ೧೦ ಆಣೆ. ಸೀ. ಆರ್ ದಾಸರ ಚರಿತ್ರ ೮ ಆಣೆ, ಕರ್ಮಯೋಗ ಕಾದಂಬರಿ ೬ ಆಣೆ. ಸೌ|| ವಾಸಂತೀದೇವೀ ದಾಸ ಬೆಲೆ ೧ ಆಣೆ. ಹಿಂದೂ [illegible] ಅಸಹಕಾರಿತೆ. ಬೆಲೆ ೬ ಆಣೆ.

ವಿ. ಸೂಚನೆ:— ೮ ಆಣೆ ಪ್ರವೇಶ ಫೀ ತುಂಬಿ ಮಾಲೆಯ ಚಂದಾದಾರರಾದರೆ ಹಿಂದು ಮುಂದಿನ ಪುಸ್ತಗಳೆಲ್ಲ ಮೂರುನಾಲ್ಕಾಂಶ ಬೆಲೆಗೆ ದೊರೆಯುವವು. ಅಲ್ಪಾವಧಿಯಲ್ಲಿಯೇ ಅಖಿಲ ಕರ್ನಾಟಕದ ಆದರಕ್ಕೆ ಪಾತ್ರವಾಗಿ ಮಾಲೆಯು ಮೆರೆಯುತ್ತಲಿದೆ. ಗ್ರಾಹಕರು ತ್ವರೆಮಾಡಿರಿ.

ಪತ್ತೆ:—ಮ್ಯಾನೇಜರ, ವಿದ್ಯಾರಣ್ಯ ಗ್ರಂಥಮಾಲಾ ಆಫೀಸ,

ಪೋಸ್ಟ ಅಗಡಿ.

---

# ಮೈಸೂರು ಕ್ರಾನಿಕಲ್.

ಪ್ರತಿಭಾನುವಾರವೂ ಪ್ರಕಟವಾಗುವ ಇಂಗ್ಲೀಷ ಮತ್ತು ಕನ್ನಡ ವಾರಪತ್ರಿಕೆ.

ಸರಕಾರದ ಜಾಹೀರಾತುಗಳಿಗೆ ರಜಿಸ್ಟರಾಗಿರುತ್ತೆ.

ಸಂಪಾದಕ ಕೇ. ರಂಗೈಯಂಗಾರ B. A. LL. B.

| | | |
|---|---|---|
| | ಇಂಗ್ಲೀಷ ಭಾಗ. | ಕನ್ನಡ ಭಾಗ. |
| ವರ್ಷಕ್ಕೆ | ರೂ ೬—೦—೦ (ಅಂಚೆವೆಚ್ಚಬೇರೆ) | ರೂ. ೩—೮—೦ |
| ಅರ್ಧ ,, | ೪—೮—೦ .. | ,, ೨—೦—೦ |

ಮ್ಯಾನೇಜರ, ಮೈಸೂರ ಕ್ರಾನಿಕಲ್, ತುಮಕೂರ (ಮೈಸೂರ)

ಕನ್ನಡಿಗರ ಕಂಠೀಸರಕ್ಕೆ ಒಪ್ಪುವ

ಗ್ರಂಥರೂಪವಾದ **ನವರತ್ನಗಳು.** ಬೆಲೆ ಸುಲಭ!

ಲೇಖಕ:—ಹೊಸಕೆರೆ ಚಿದಂಬರಯ್ಯನವರು.

| | | | |
|---|---|---|---|
| ಭರತನ ಬಂಧು ಪ್ರೇಮ | ೦—೧೦—೦ | ನವೀನಕಲ್ಪ | ೦—೮—೦ |
| ಸುಧನ್ವ ಪ್ರಭಾವ | ೦—೮—೦ | ರಾಸಕ್ರೀಡೆ | ೦—೬—೦ |
| ರಾಮನಾಮ ಮಹಿಮೆ | ೦—೫—೦ | ಗಣಪತಿ ಸ್ವಯಂವರ | ೦—೪—೦ |
| ಧ್ರುವಾಖ್ಯಾನ | ೦—೪—೦ | ಅನಸೂಯಾಖ್ಯಾನ | ೦—೪—೦ |

ಭರತಖಂಡದ ಜೀವಜ್ಯೋತಿಗಳು ೧—೪—೦

ಕೆ. ನಾರಾಯಣಪ್ಪ, ಆಧ್ಯಾತ್ಮಪುಸ್ತಕಾಲಯ, ಅರಸೀಕೆರೆ (ಮೈಸೂರದೇಶ.)

---

## ಪಂ. ತಾರಾನಾಥರ ವನಸ್ಪತೀ ಸಂಗ್ರಹಾಲಯ.

ನಮ್ಮಲ್ಲಿ ದೊರೆಯುತಕ್ಕ ವನಸ್ಪತಿಗಳು:—

(೧) ಸರ್ವತರದ ಕೇಶ ತೈಲಗಳು
(೨) ಬಲಭೀಮ ಆಹಾರ.
(೩) ಅಮೃತ.
(೪) ರಾಮಕೃಷ್ಣ ಸುಧಾ.
(೫) ಮಾರಿಕಾ ನಿವಾರಣೋಪಾಯ.
(೬) ಮಾರ್ತಾಂಡ ಭೈರವ.
(೭) ದಂತಮಂಜನ.
(೮) ಗಾಂಧೀ ಕೋಕೊ.

ತ್ವರೆ ಮಾಡಿರಿ! ತೀರಸ್ವಲ್ಪ ಸಂಗ್ರಹವು!! ಅತ್ಯಂತ ಗುಣಕಾರಕಗಳು!!!

ನಮ್ಮವಿಳಾಸ:— (೧) ಸುಬ್ರಹ್ಮಣ್ಯಾಚಾರ್ಯ ಅಧ್ವರ್ಯ.
ಮೋತೀತಲಾವ, ಧಾರವಾಡ.
(೨) ರಾಮಚಂದ್ರ ಜೋಸಿ, ಕಿಲ್ಲೆ, ಹುಬ್ಬಳ್ಳಿ.

---

# ಕರ್ಮವೀರ

ಇದು ರಾಷ್ಟ್ರೀಯ ಪಕ್ಷದ ಉತ್ತಮವಾರ ಪತ್ರಿಕೆ.

ಸಂಪಾದಕರು:—ರಂಗರಾವ ದಿವಾಕರ.

ವಾರ್ಷಿಕ ವರ್ಗಣಿ ೩—೮—೦.

ವಂದೇ ಮಾತರಂ

ಕರ್ನಾಟಕೋ ವಿಜಯತೇ

ಶ್ರೀ

ಸರಸ್ವತೀ ಭಾರತಸ್ಥ ಗ್ರಂಥಮಾಲಾ,

( [illegible] ಮಾಸಿಕ )

ಹುಬ್ಬಳ್ಳಿ.

ಕನ್ನಗಿರಿಯವರ

# ಜೋಸೆಫ್ ಮ್ಯಾಝಿನಿ.

( ಹನ್ನೊಂದನೇ ಕುಸುಮ. )

ಲೇಖಕ:— ಸುರೇಂದ್ರ ಶಿವರಾವ ದೇಸಾಯಿ, ಎಮ್. ಎ. ಪ್ರಿನ್ಸಿಪಾಲ, ನ್ಯಾಶನಲ ಸ್ಕೂಲ, ಧಾರವಾಡ.

ಸಂಪಾದಕ:— ಕೃಷ್ಣ ಗುರು ಸಂಗಮ.

[illegible]

ಮೊದಲನೇ ಆವೃತ್ತಿ, ೧೦೦೦ ಪ್ರತಿಗಳು

[ ಈ ಪುಸ್ತಕದ ಎಲ್ಲ ಹಕ್ಕುಗಳು ಸಂಪಾದಕರಿಂದ ಕಾಯ್ದಿಟ್ಟಿವೆ ]

ತಾ॥ ೨೦-೧೧-೩೩. ] ವರ್ಷ ೨. [ ಬೆಲೆ ೦ ೪ ೦.

ವಾರ್ಷಿಕ ಚಂದಾ ರೂ. ೩॥ ; ಅಂಚೆ ವೆಚ್ಚ ಬೇರೆ.

Printed by M. K. Joshi, at the Karnatak Printing Works,
Dharwar, and published by Krishna Guru Sangam,
the editor, at the office of Shree Saraswati
Bharat Bhakta Granthamala,
Hubli.

# ಪ್ರಸ್ತಾವನೆ.

ಪರದಾಸ್ಯವೆಂಬ ಹೆಬ್ಬಾವಿನಿಂದ ಬಿಗಿಯಲ್ಪಟ್ಟ ದೇಶದೊಳಗಿನ ಸದ್ಗುಣಗಳೆಲ್ಲವೂ ಹೇಗೆ ಲೋಪಹೊಂದುತ್ತವೆಂಬುದನ್ನು ತಿಳಿದುಕೊಳ್ಳಬೇಕಾದರೆ ಹಿಂದುಸ್ಥಾನ, ಇಟಲಿ ಮತ್ತು ಈಗಿನ ಜರ್ಮನಿ ಇವುಗಳ ಇತಿಹಾಸವನ್ನೋದಬೇಕು. ೧೯ನೆಯ ಶತಮಾನದ ಆದಿಭಾಗದಲ್ಲಿ ಇಟಲಿಯ ದೇಶಸ್ಥಿತಿಯೂ ಹಿಂದುಸ್ಥಾನದ ಈಗಿನ ಸ್ಥಿತಿಯಂತೆಯೇ ಇತ್ತು. ಪಾರತಂತ್ರ್ಯದ ಮೂಲಕ ದೇಶದಲ್ಲಿ ನೂರೆಂಟು ಭಾಗಗಳು, ಪರಸ್ಪರರಲ್ಲಿ ಕಲಹ, ಸ್ವಾಭಿಮಾನಶೂನ್ಯತೆ ಇವೇ ಮುಂತಾದವುಗಳು ಇಟಲಿಯ ಜನರಲ್ಲಿ ಮನೆಮಾಡಿಕೊಂಡಿದ್ದವು. ಇಂಥ ಕಂಗೆಟ್ಟಸ್ಥಿತಿಯಲ್ಲಿದ್ದ ದೇಶವನ್ನುದ್ಧರಿಸುವದು ಸಾಮಾನ್ಯ ದೇಶಭಕ್ತರಿಗೆ ಸಾಧ್ಯವಲ್ಲ. ಅಗಕ್ಕೆ ಮಹಾತ್ಮರೇ ಬೇಕು. ಮ್ಯಾಝಿನಿಯು ಅಂಥ ಮಹಾತ್ಮರಲ್ಲೊಬ್ಬನು ಈತನು ಸ್ವಭಾವತಃ ಶಾಂತಸ್ವಭಾವದವನು, ತತ್ತ್ವಜ್ಞಾನಿಯು. ರಾಜಕಾರಣಪುರುಷನಲ್ಲ. ಆದರೆ, ಪಾರತಂತ್ರ್ಯಪಂಕದಲ್ಲಿ ತೊಳಲಾಡುವ ರಾಷ್ಟ್ರದೊಳಗಿನ ಪುರುಷರಿಗೆ ತಮ್ಮ ಸ್ವಭಾವದಂತೆ ಆಚರಿಸುವದಕ್ಕೆ ಅವಕಾಶವೆಲ್ಲಿರುವದು? ಆದುದರಿಂದಲೇ, ಆಪದ್ಧರ್ಮವೆಂದು ತತ್ತ್ವಜ್ಞಾನಿಗಳಿಗೂ ಧಾರ್ಮಿಕಭಾವನೆಯುಳ್ಳವರಿಗೂ ಕೂಡ ದೇಶೋದ್ಧಾರ ಕೃತ್ಯವನ್ನೆಸಗಬೇಕಾಗುತ್ತದೆ. ಕರ್ನಾಟಕದಲ್ಲಿ ವಿದ್ಯಾರಣ್ಯರೂ ಮಹಾರಾಷ್ಟ್ರದಲ್ಲಿ ರಾಮದಾಸರೂ ಇದೇ ಬಗೆಯಾಗಿ ಮೂಲತಃ ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದರು. ಆದರೆ ನಿರುಪಾಯವಾಗಿ ಅವರಿಗೆ ರಾಜಕಾರಣದಲ್ಲಿ ಮನಸ್ಸನ್ನು ತೊಡಕಿಸಬೇಕಾಯಿತು. ಅದೇ ಮೇರೆಗೆ ಮ್ಯಾಝಿನಿಗೂ ಮಾಡಬೇಕಾಯಿತು. ಆದರೆ ಅವರೊಳಗಿನ ಭೇದವಿಷ್ಟೇ. ಶ್ರೀ ವಿದ್ಯಾರಣ್ಯರೂ ಶ್ರೀ ರಾಮದಾಸರೂ ತಮ್ಮ ಮೂಲ ಸ್ವಧರ್ಮವನ್ನು ರಾಜಕಾರಣದಲ್ಲಿಯೂ ಬಿಡದೆ, ಅಲ್ಲಿ ಕೂಡ ಅವರು ಕೇವಲ ಸೂತ್ರಚಾಲಕರಾಗಿಯೇ ಕೆಲಸಮಾಡಿದರಲ್ಲದೆ ಪ್ರತ್ಯಕ್ಷವಾಗಿ ರಣಾಂಗಣದಲ್ಲಿ ನಿಲ್ಲಲಿಲ್ಲ. ಮ್ಯಾಝಿನಿಯು ಮಾತ್ರ ಹಾಗೆ ಮಾಡದೆ, ತಾನೇ ರಣಾಂಗಣದಲ್ಲಿ ನಿಲ್ಲಲಿಕ್ಕೆ ಪ್ರಯತ್ನಿಸಿದನು. ಮ್ಯಾಝಿನಿಗೆ ಆತನ ಆಯುಷ್ಯದಲ್ಲಿ ಅನೇಕಬಗೆಯ ಸಂಕಟಗಳೂ ಅಪಜಯಗಳೂ ಒದಗಿದ್ದಕ್ಕೆ ಇದೂ ಒಂದು ಬಲವಾದ ಕಾರಣವೆಂದು ನಮಗೆ ತೋರುತ್ತದೆ. ಮ್ಯಾಝಿನಿಯ ವಿಶ್ವಬಂಧುಪ್ರೇಮ, ಜನತೆಯ ಸಾಮರ್ಥ್ಯದಲ್ಲಿಯ ಅಚಲಶ್ರದ್ಧೆ ಇವು ಮೃತಪ್ರಾಯವಾದ ಇಟಲಿ ದೇಶದ ಅಮೃತಧಾರೆಯನ್ನು ಸುರಿಸಿ ಆ ದೇಶದಲ್ಲಿ ಚೈತನ್ಯವನ್ನೇನೋ ತುಂಬಿಸಿದವು. ಆದರೆ, ಪ್ರತ್ಯಕ್ಷ ಕೃತಿಯಲ್ಲಿ ಮಾತ್ರ ಆತನಿಗೆ ಕೊನೆಯವರೆಗೆ ಯಶಸ್ಸು ಪ್ರಾಪ್ತವಾಗಲಿಲ್ಲ. ಆತನು ತನ್ನ ಆಯುಷ್ಯದಲ್ಲಿಯೇ ಇಟಲಿಯು ಸ್ವತಂ

ಶ್ರಮಪದ್ದೇನೋ ನೋಡಿದನು. ಆದರೆ ಆತನಿಗೆ ಬೇಕಾದದ್ದು ಪ್ರಜಾಸತ್ತಾತ್ಮಕ ಸ್ವರಾಜ್ಯ, ಕೇವಲ ಸ್ವಾತಂತ್ರ್ಯವಲ್ಲ. ಪ್ರಜೆಗಳಿಗೆ ತಮ್ಮಲ್ಲಿ ಆತ್ಮವಿಶ್ವಾಸವಿದ್ದಿಲ್ಲವಾದುದರಿಂದ, ಅವರೇ ಆತನನ್ನು ಆಗ ಲಕ್ಷಿಸಲಿಲ್ಲ. ಆದುದರಿಂದ ಇತ್ತ ವೈರಿಗಳಿಗೂ ಆತನು ಬೇಡಾದವನು, ಇತ್ತ ತನ್ನ ಜನರಿಂದಲೂ ಆತನಿಗೆ ಸಹಾಯವಾಗಲಿಲ್ಲ. ಮ್ಯಾಝಿನಿಯನ್ನು ಹಿಂಬಾಲಿಸುವ ಧೈರ್ಯವು ಜನತೆಯಲ್ಲಿ ಇಲ್ಲದಿದ್ದರೂ, ಆತನ ವಾಣಿಯಿಂದಲೇ ಜನತೆಯ ಹೃದಯಸಿಂಹಾಸನದಲ್ಲಿ ಸ್ವಾತಂತ್ರ್ಯದೇವಿಯ ಪ್ರಾಣಪ್ರತಿಷ್ಠಾಪನೆಯಾಯಿತೆಂಬುದು ನಿರ್ವಿವಾದವು. ಆದುದರಿಂದ ಇಂಥ ಮಹನೀಯನ ಚರಿತ್ರೆಯನ್ನು ಹೀನಸ್ಥಿತಿಯಲ್ಲಿರುವ ಹಿಂದುಸ್ಥಾನದ ಜನರು ಅವಶ್ಯವಾಗಿ ಓದಿ ಮನನಮಾಡತಕ್ಕದ್ದು.

ಧಾರವಾಡ.<br>೨೬ – ೧೨ – ೨೩.

ವೆಂಕಟೇಶ ಭೀಮರಾವ ಆಲೂರ,<br>ಬಿ. ಎ, ಎಲ್ ಎಲ್. ಬಿ.<br>ಸಂಪಾದಕ ಜಯಕರ್ನಾಟಕ.

---

# ಅನುಕ್ರಮಣಿಕೆ.


| ಪ್ರಕರಣಗಳು. | | ಪುಟಗಳು. | | | |
|---|---|---|---|---|---|
| ೧. ವಿದ್ಯಾಭ್ಯಾಸವೂ, ಕಾರ್ಬೊನಾರೀ ಸಂಘಪ್ರವೇಶವೂ | ೧೮೦೫—೩೧ | ೧ | ರಿಂದ | ೫ | ವರೆಗೆ |
| ೨. ತರುಣ ಇಟಲೀ ಸಂಘವು. | ೧೮೩೧—೩೩ | ೫ | ,, | ೮ | ,, |
| ೩. ಮಾರ್ಸಿಲೆಸ್. | ೧೮೩೧—೩೪ | ೯ | ,, | ೧೨ | ,, |
| ೪. ಸ್ವಿಡ್ಝರಲಂಡ. | ೧೮೩೪—೩೬ | ೧೨ | ,, | ೧೫ | ,, |
| ೫. ಲಂಡನ್. | ೧೮೩೬—೪೩ | ೧೬ | ,, | ೨೧ | ,, |
| ೬. ರಾಜ್ಯಕ್ರಾಂತಿಯ ಪ್ರಯತ್ನವು | ೧೮೪೩—೪೮ | ೨೧ | ,, | ೨೬ | ,, |
| ೭. ರೋಮದ ಲೋಕತತ್ತಾತ್ಮಕ ರಾಜ್ಯವು. | ೧೮೪೯—೧೮೪೯ | ೨೬ | ,, | ೩೦ | ,, |
| ೮. ಪುನಃ ಲಂಡನ್ | ೧೮೪೯—೫೯ | ೩೦ | ,, | ೩೨ | ,, |
| ೯. ಇಟಲಿಯ ಸ್ವಾತಂತ್ರ್ಯಯುದ್ಧವು. | ೧೮೫೮—೬೦ | ೩೨ | ,, | ೩೫ | ,, |
| ೧೦. ಏಕೀಕರಣದ ಪೂರ್ಣತೆಯು. | ೧೮೬೧—೭೦ | ೩೫ | ,, | ೩೯ | ,, |
| ೧೧. ಅಂತ್ಯಕಾಲವು. | ೧೮೭೧—೭೨ | ೩೯ | ,, | ೪೧ | ,, |
| ೧೨. ಜೋಸೆಫ್ ಮ್ಯಾಝಿನಿಯ ವಿಚಾರಗಳು. | | ೪೧ | ,, | ೪೬ | ,, |



ಜೋಸೆಫ್ ಮ್ಯಾಜಿನಿ.

ಕ್ಯಾವೂರ್.


ಗ್ಯಾರಿಬಾಲ್ಡಿ.

## ಕಡುಗಲಿಯಾದ

# ಜೋಸೆಫ್ ಮ್ಯಾಝಿನಿಯ ಚರಿತ್ರೆಯು.

### ೧ನೇ ಪ್ರಕರಣ

### ವಿದ್ಯಾಭ್ಯಾಸವೂ, ಕಾರ್ಬೊನಾರೀಸಂಘ ಪ್ರವೇಶವೂ.



ಕಳೆದ ಶತಮಾನದಲ್ಲಿ ಇಟಲೀ ದೇಶದೊಳಗೆ ಒಬ್ಬ ಪುಣ್ಯಶ್ಲೋಕನಾದ ಕರ್ಮವೀರನು ಆಗಿಹೋದನು. ಇವನ ಜೀವನಯಾತ್ರೆಯೆಂದರೆ ಇಟಲೀ ದೇಶದ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮತ್ತೆ ಜಗತ್ತಿನಲ್ಲಿ ಲೋಕಸತ್ತಾವಾದದ ತತ್ವವನ್ನು ಹರಡುವದಕ್ಕಾಗಿ ಮಾಡಿದ ಅಖಂಡ ಆತ್ಮಯಜ್ಞವೆಂದು ಹೇಳಬಹುದು. ಇವನು ಸ್ವಾತಂತ್ರ್ಯದ ಮತ್ತು ರಾಷ್ಟ್ರೀಯತ್ವದ ದೇವತೆಯು; ಮತ್ತು ಸ್ವಾತಂತ್ರ್ಯಕ್ಕಾಗಿ ಹೆಣಗುವ ಜನಾಂಗಗಳ ತಂದೆತಾಯಿಯು. ಇವನ ಹೆಸರು ಜೋಸೆಫ್ ಮ್ಯಾಝಿನಿ.

ಜೋಸೆಫ್ ಮ್ಯಾಝಿನಿಯು ಇಟಲೀದೇಶದ ಜಿನೋವಾ ಶಹರದಲ್ಲಿ ಕ್ರಿ. ಶ. ೧೮೦೫ ನೇ ಇಸ್ವಿ ಜೂನ ೨೨ನೇ ತಾರೀಖಿನ ದಿವಸ ಜನ್ಮ ತಾಳಿದನು. ಇವನ ತಂದೆಯು ಡಾಕ್ಟರನಿದ್ದು ವಿಶ್ವವಿದ್ಯಾಲಯದಲ್ಲಿ ಶರೀರಶಾಸ್ತ್ರದ ಪಂಡಿತನಾಗಿದ್ದನು. ಇವನು ಆಚಾರವಿಚಾರಗಳಲ್ಲಿ ಪ್ರಜಾಸತ್ತಾವಾದಿಯಾಗಿ ಬಡ ಬಗ್ಗರಿಗೆ ಪ್ರೇಮದಿಂದ ಸಹಾಯಮಾಡುತ್ತಿದ್ದನು. ಮ್ಯಾಝಿನಿಯ ತಾಯಿಯು ಬಹು ಬುದ್ಧಿವಂತಳೂ ಪ್ರೇಮಳ ಸ್ವಭಾವದವಳೂ ಆಗಿದ್ದಳು. ಈ ದಂಪತಿಗಳು ತಮ್ಮ

ಸುತ್ತಲಿನ ರಾಜಕೀಯ ವಾತಾವರಣವನ್ನು ತುಂಬಾ ಅರಿತವರಾಗಿ ಅದರ ಬಗ್ಗೆ ಮೇಲಿಂದ ಮೇಲೆ ಮಾತುಕಥೆಗಳನ್ನು ಆಡುತ್ತಿದ್ದರು. ಅವರ ಪ್ರಜಾಪಕ್ಷದ ಮಾತುಗಳು ಚಿಕ್ಕ ವಯಸ್ಸಿನ ಮ್ಯಾಝಿನಿಯ ಅಂತಃಕರಣದ ಮೇಲೆ ಪ್ರಬಲವಾಗಿ ಪರಿಣಮಿಸಿದವು. ಅವರು ಬಡವರು ಶ್ರೀಮಂತರು ಹೀಗೆ ಭೇದಮಾಡದೆ ಎಲ್ಲರ ಕೂಡ ಸಮತೆಯಿಂದಲೂ ಸಭ್ಯತನದಿಂದಲೂ ನಡೆಯುತ್ತಿದ್ದರು.

ಮ್ಯಾಝಿನಿಯು ಚಿಕ್ಕಂದಿನಲ್ಲಿ ಲ್ಯಾಟಿನ್ ಭಾಷೆಯನ್ನು ಕಲಿಯುವಾಗ ಮತ್ತು ಗ್ರೀಸ ರೋಮುಗಳ ಇತಿಹಾಸಗಳನ್ನು ಓದುವಾಗ ಪ್ರಜಾಸತ್ತೆಯ ಮೇಲೆ ಪ್ರೀತಿಯುಳ್ಳವನಾದನು. ಇವನ ತಂದೆಯು ಸರಕಾರದಿಂದ ನಿಷಿದ್ಧವಾದ ಕೆಲವು ಲೋಕಸತ್ತಾಪ್ರತಿಪಾದಕ ವರ್ತಮಾನಪತ್ರದ ಅಂಕುಗಳನ್ನು ತನ್ನ ವೈದ್ಯಕಪುಸ್ತಕಗಳ ಬುಡದಲ್ಲಿ ಮುಚ್ಚಿಟ್ಟಿದ್ದನು. ಇವು ಮ್ಯಾಝಿನಿಯ ಕೈಗೆ ಸಿಗಲು ಅವನು ಅವುಗಳನ್ನು ಬಹಳ ಆಸ್ಥೆಯಿಂದ ಓದಿಕೊಳ್ಳುತ್ತಿದ್ದನು.

ಮ್ಯಾಝಿನಿಯು ಹದಿನಾರು ವರ್ಷದವನಿದ್ದಾಗ ಆದ ಒಂದು ಸಂಗತಿಯು ಅವನ ಮನಸ್ಸಿಗೆ ಒಂದು ವಿಶಿಷ್ಟವಾದ ಒಲುವನ್ನು ಕೊಟ್ಟಿತು. ಒಂದು ದಿವಸ ಇವನೂ, ಇವನ ತಾಯಿಯೂ, ಇವರ ಮನೆತನದ ಒಬ್ಬ ಸ್ನೇಹಿತನೂ ಕೂಡಿ ಊರೊಳಗೆ ಅಡ್ಡಾಡಲಿಕ್ಕೆ ಹೋಗಿದ್ದರು. ಆಗ ಎತ್ತರವಾದ ನಿಲುವಿಕೆಯುಳ್ಳವನೂ, ಬಲವಂತನೂ, ತೇಜಸ್ವಿಯೂ ಆದ ಒಬ್ಬ ಗೃಹಸ್ಥನು ಇವರ ಹತ್ತರ ಬಂದು ತನ್ನ ಕರವಸ್ತ್ರವನ್ನು ಇವರ ಮುಂದೆ ಒಡ್ಡಿ "ಇಟಲಿಯ ನಿರಾಶ್ರಿತರಿಗಾಗಿ ಸಹಾಯ ಮಾಡಬೇಕು," ಎಂದು ಅಂದನು. ಮ್ಯಾಝಿನಿಯ ತಾಯಿಯೂ, ಸ್ನೇಹಿತರೂ ಸ್ವಲ್ಪ ದುಡ್ಡು ಕೊಡಲು ಅವನು ಮತ್ತೆ ಎರಡನೇ ಜನರ ಕಡೆಗೆ ಸಾಗಿದನು. ಈ ಗೃಹಸ್ಥನು ಅದೇ ಇಟಲಿಯಲ್ಲಿ ಆಗಿಹೋದ ಒಂದು ಬಂಡಿನಲ್ಲಿ ಸೇರಿದವನಾಗಿದ್ದನು. ಬಂಡು ಮುರಿದದ್ದರಿಂದ, ಅವನು ಹ್ಯಾಗಾದರೂ ಪಾರಾಗಿ ತನ್ನ ಜೊತೆಗಾರರೊಂದಿಗೆ ಸ್ಪೇನಕ್ಕೆ ಹೋಗುವವನಿದ್ದನು. ಮುಂದೆ ಆದ ಮಾತುಕಥೆಯಿಂದ, ಮ್ಯಾಝಿನಿಯ ಮನಸ್ಸು ಕರಿಗಿ ಇಟಲಿಯ ಪಾರತಂತ್ರ್ಯದ ಅಪಮಾನವನ್ನು ಹೇಗೆ ನೀಗಬೇಕೆಂಬ ಘನವಾದ ಆಲೋಚನೆಯು ಅವನನ್ನು ಕಟಿಯುಹತ್ತಿತು. ಅಂದಿನಿಂದ ಅವನು ತನ್ನ ದೇಶವು ಸೂತಕದಲ್ಲಿರುವದೆಂಬದನ್ನು ತೋರಿಸಲಿಕ್ಕೆ ಕರ್ರೆ ವಸ್ತ್ರಗಳನ್ನು ಧರಿಸುವ ಪ್ರತಿಜ್ಞೆಮಾಡಿ ಸಾಯುವತನಕ ಅದರಂತೆ ನಡೆದನು.

ಮ್ಯಾಝಿನಿಯು ಹದಿನಾಲ್ಕು ವರ್ಷವಯಸ್ಸಿನವನಾಗಲೇ ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ವಿಶ್ವವಿದ್ಯಾಲಯವನ್ನು ಸೇರಿದ್ದನು. ತಂದೆಯಂತೆ ಇವನೂ ಡಾಕ್ಟರನಾಗಬೇಕೆಂದು ಗೊತ್ತಾಗಿತ್ತು. ಆದರೆ ಶಲ್ಯಶಾಸ್ತ್ರದ ಪ್ರಯೋಗ ಶಾಲೆಯಲ್ಲಿ ಹೋದ ಕೂಡಲೆ ಇವನಿಗೆ ಮೂರ್ಛೆಬಂದದ್ದರಿಂದ ಇವನು ವೈದ್ಯಕವನ್ನು ಬಿಟ್ಟುಕೊಟ್ಟು ಕಾಯದೆಯ ಅಭ್ಯಾಸಕ್ಕೆ ನಿಂತನು. ಆ ಕಾಲದ ವಿದ್ಯಾಲಯಗಳಲ್ಲಿ ಕಲಿಸುವ ಪದ್ಧತಿಯು ಬಹು ನಿಸರ್ಗವಿರುದ್ಧವಾದದ್ದೂ, ಅವರ ಕಠೋರವಾದ ಕ್ರಮದಿಂದ ಹುಡುಗರಿಗೆ ಬಹು ತ್ರಾಸದಾಯಕವಾದದ್ದೂ ಆಗಿತ್ತು. ಮ್ಯಾಝಿನಿಯು ಮೇಲಿಂದ ಮೇಲೆ ತನ್ನ ವಿದ್ಯಾಲಯದ ಕ್ರಮವನ್ನು ಮುರಿದು ತನ್ನ ಅಂತಃಪ್ರವೃತ್ತಿಯಂತೆ ನಡೆಯುತ್ತಿದ್ದನು. ವಿದ್ಯಾಲಯದ ಅಧಿಕಾರಿಗಳು ಇವನೊಬ್ಬ ಅಸಾಧ್ಯನಾದ ಹಟಮಾರಿಯೆಂದು ಇವನ ಗೊಡವೆಯನ್ನು ಬಿಟ್ಟರು.

ಸ್ವಲ್ಪ ದಿವಸಗಳಲ್ಲಿ ಶುದ್ಧಾಚರಣೆಯೂ ಉತಾವಳೀಸ್ವಭಾವವೂ ಉಳ್ಳ ವಿದ್ಯಾರ್ಥಿಗಳಿಗೆ ಮ್ಯಾಝಿನಿಯು ಮುಖಂಡನಾದನು. ಇವನು ಬಹಳೇ ವಾಚನಪ್ರಿಯನೂ ಏಕಾಂತಪ್ರಿಯನೂ ಆಗಿ ಅಂಗಸಾಧನೆಗೆ ಮೆಚ್ಚಿದವನಾಗಿದ್ದನು. ಕಾಫಿ ಮತ್ತು ಸಿಗಾರ ಇವುಗಳ ಹೊರತಾಗಿ ಮತ್ತಾವ ವಿಲಾಸಗಳೂ ಇವನಿಗೆ ಬೇಕಾಗಿದ್ದಿಲ್ಲ. ಇವನಿಗೆ ವೀಣೆಯನ್ನು ಬಾರಿಸಲಿಕ್ಕೂ ಹಾಡಲಿಕ್ಕೂ ಚನ್ನಾಗಿ ಬರುತ್ತಿತ್ತು. ಗಾಯನಪಟುತ್ವದಿಂದ ಇವನು ಶ್ರೀಮಂತ ವಿದ್ಯಾರ್ಥಿಗಳಿಗೂ ಬೇಕಾಗಿದ್ದನು. ಇವನ ಮಾತಿನ ಶೈಲಿಯು ಬಹು ಪರಿಣಾಮಕಾರಕವಾಗಿತ್ತು. ಇವನ ಮನಸ್ಸು ಬಹಳೇ ಉದಾರವಾಗಿತ್ತು. ಬಡವಿದ್ಯಾರ್ಥಿಗಳಿಗೆ ಇವನು ತನ್ನ ಪುಸ್ತಕ, ದುಡ್ಡು, ವಸ್ತ್ರ ಮೊದಲಾದವುಗಳನ್ನು ಕೊಡುತ್ತಿದ್ದನು. ಈ ವಯಸ್ಸಿನಲ್ಲಿಯೇ ಇವನ ನ್ಯಾಯಪ್ರಿಯತೆಯೂ, ಸ್ವಾಭಿಮಾನವೂ, ಧೈರ್ಯವೂ ವ್ಯಕ್ತವಾಗುತ್ತಿದ್ದವು.

ಮ್ಯಾಝಿನಿಗೆ ವಾಙ್ಮಯದ ಮೇಲೆಯೂ ಇತಿಹಾಸದ ಮೇಲೆಯೂ ಬಹು ಪ್ರೀತಿಯಿತ್ತು. ಇಟಾಲಿಯನ್ ಭಾಷೆಯಲ್ಲದೆ ಫ್ರೆಂಚ ಮತ್ತು ಇಂಗ್ಲಿಷ ಭಾಷೆಗಳೂ ಇವನಿಗೆ ತಕ್ಕಮಟ್ಟಿಗೆ ಬರುತ್ತಿದ್ದವು. ಇವನ ಪ್ರೀತಿಯ ಗ್ರಂಥಗಳೆಂದರೆ—ಬಾಯಬಲ್ ಮತ್ತು ಡಾಂಟೆ, ಶೇಕ್ಸಪಿಯರ್, ಬಾಯರನ್ ಇವರ ಗ್ರಂಥಗಳು. ಇವನು ತನ್ನ ಜೀವನಕ್ರಮದಲ್ಲಿ ಪ್ರತಿಪಾದಿಸಿದ ಎಲ್ಲ ಮುಖ್ಯ

ತತ್ವಗಳನ್ನು ಡಾಂಟೆ ಕವಿಯಿಂದ ಕಲಿತನು. ನಿಜವಾಗಿ ವಾಙ್ಮಯದಲ್ಲಿ ಇದ್ದಷ್ಟು ಅಭಿರುಚಿಯು ಇವನಿಗೆ ರಾಜಕಾರಣದಲ್ಲಿ ಇದ್ದಿಲ್ಲ. ನಾಟಕಗಳನ್ನೂ ಐತಿಹಾಸಿಕ ಕಾಂದಬರಿಗಳನ್ನೂ ಬರೆಯುವ ಉದ್ಯೋಗವನ್ನು ಮಾಡಬೇಕೆಂದು ಇವನಿಗೆ ಮೊದಮೊದಲು ಅನಿಸುತ್ತಿತ್ತು. ಆದರೆ ರಾಷ್ಟ್ರವು ಪಾರತಂತ್ರ್ಯವಲ್ಲಿ ಸಿಲುಕಿ ನರಳುತ್ತಿರುವಾಗ ಸುಖವಾಗಿ ಮನೆಯಲ್ಲಿ ಕುಳಿತುಕೊಂಡು ಕೇವಲ ಗ್ರಂಥಗಳನ್ನು ಬರೆಯುತ್ತ ಆಯುಷ್ಯವನ್ನು ಹಾಕುವದು ಹೀನತನವೆಂದು ಇವನು ಭಾವಿಸಿದ್ದನು. ಪುಸ್ತಕಗಳನ್ನು ಬರೆದರೂ ಯಾವ ಪುಸ್ತಕಗಳನ್ನು ಓದುವದರಿಂದ ಜನರ ಸ್ವದೇಶಾಭಿಮಾನವೂ, ಬಂಧುಪ್ರೀತಿಯೂ ಉಕ್ಕೇರಿ, ತದನುಸಾರವಾದ ಕೃತಿಗಳನ್ನು ಹುಟ್ಟಿಸುವವೋ ಅಂಥ ಪುಸ್ತಕಗಳನ್ನು ಮಾತ್ರ ಬರೆಯುವದು ಸದ್ಯಕ್ಕೆ ಅವಶ್ಯವೆಂದು ಇವನು ತಿಳಿದನು. ಪುರಾಣ ರಚನಾಪದ್ಧತಿಯು ಪುರಸ್ಕರ್ತರು ಸಾವಿರಾರು ವರ್ಷಗಳಿಂದ ನಡೆದು ಬಂದ ಅನೇಕ ನಿಯಮಗಳನ್ನು ಅನುಸರಿಸಿ ಗ್ರಂಥಗಳನ್ನು ಬರೆಯಬೇಕೆಂದು ಪ್ರತಿಪಾದಿಸುತ್ತಿದ್ದರು, ಇದು ಮ್ಯಾಝಿನಿಗೆ ಸೇರಲಿಲ್ಲ. ಜನರ ಹೃದಯದಲ್ಲಿ ಸ್ಫುರಿಸುತ್ತಿರುವ ಸ್ವಾತಂತ್ರ್ಯದ ವಿಚಾರಗಳನ್ನೂ, ಆಕಾಂಕ್ಷೆಗಳನ್ನೂ ವೃದ್ಧಿಗೊಳಿಸುವಂತೆ ಅಂತಃಸ್ಫೂರ್ತಿಯಿಂದ ಬರೆಯುವ ನೂತನ ರಚನಾಪದ್ಧತಿಗೆ ಇವನು ತನ್ನ ಪೂರ್ಣವಾದ ಬೆಂಬಲವನ್ನು ಕೊಟ್ಟನು.

ಕ್ರಮೇಣ ಇವನು ವೃತ್ತಪತ್ರಗಳಿಗೂ ಮಾಸಿಕಗಳಿಗೂ ಲೇಖಗಳನ್ನು ಬರೆಯಹತ್ತಿದನು- ಅವು ವಾಙ್ಮಯಾತ್ಮಕಗಳಾಗಿದ್ದರೂ ಅಲ್ಲಿಗೆ ಪ್ರಚಲಿತ ರಾಜಕಾರಣದ ಬಗ್ಗೆ ವಿಚಾರಗಳು ಗುಪ್ತವಾಗಿ ಬರುತ್ತಿದ್ದವು. ಓ ಬರುತ್ತ ಸರಕಾರದ ಕಟಾಕ್ಷವು ಆ ಲೇಖಗಳ ಕಡೆಗೆ ತಿರುಗಿ, ಆ ವರ್ತಮಾನಪತ್ರಗಳಿಗೆ ಬೆದರಿಕೆಯನ್ನು ಹಾಕಿ ಅಂಥ ಲೇಖಗಳಿಗೆ ಪ್ರತಿಬಂಧವನ್ನುಂಟುಮಾಡಿತು.

ಈ ಕಾಲದಲ್ಲಿ ಇವನು ತನ್ನ ವಕೀಲಿಯ ಕೆಲಸಕ್ಕೂ ಮನಸ್ಸು ಬಂದಾಗ ಹೋಗುತ್ತಿದ್ದನು. ಇವನು ನಾದಾರೀ ಖಟ್ಲೆಗಳನ್ನು ಬಹಳವಾಗಿ ನಡಿಸಿದನು. ಬರಬರುತ್ತ ಇವನ ಮನಸ್ಸು ರಾಜಕಾರಣದ ಕಡೆಗೆ ವೇಗದಿಂದ ಹರಿಯಹತ್ತಿತು. ೧೮೨೭ರಲ್ಲಿ ಇವನು 'ಕಾರ್ಬೊನಾರೀ' ಎಂಬ ಗುಪ್ತ ಸಂಘವನ್ನು ಸೇರಿದನು. ಈ ಸಂಘವು ಬಹಳ ಹಳೇದಾಗಿದ್ದು ಬಂಡುಹೂಡಿ ರಾಜ್ಯಕ್ರಾಂತಿಯನ್ನು ಮಾಡುವದೇ ಇದರ ಉದ್ದೇಶವಾಗಿತ್ತು. ಆದರೆ ಇವರಲ್ಲಿ ವ್ಯವಸ್ಥೆಯೂ

ಸಂಘಟನೆಯೂ ಇಲ್ಲದ್ದರಿಂದಲೂ, ಎಲ್ಲ ಮತಗಳ ಜನರು ಇದರಲ್ಲಿದ್ದದ್ದರಿಂದಲೂ ಈ ಸಂಘದಿಂದ ಯಾವ ಫಲನಿಷ್ಪತ್ತಿಯೂ ಆಗಬರಲಿಲ್ಲ. ಈ ಸಂಘದಲ್ಲಿ ಹೊಸದಾಗಿ ಸೇರುವವನು ಅನೇಕ ಆಣೆಗಳನ್ನೂ, ಅರ್ಥವಿಲ್ಲದ ಕೆಲವು ವಿಧಿಗಳನ್ನೂ ಮಾಡಬೇಕಾಗುತ್ತಿತ್ತು. ಹೊಸದಾಗಿ ಸೇರಿದವನಿಗೆ ಸಂಸ್ಥೆಯ ಮುಖ್ಯ ಜನರ ಹೆಸರುಗಳನ್ನೂ ಉದ್ದೇಶಗಳನ್ನೂ ಹೇಳುತ್ತಿರಲಿಲ್ಲ. ಇದೆಲ್ಲ ಮ್ಯಾಝಿನಿಗೆ ಸರಿಬೀಳಲಿಲ್ಲ. ಆದರೂ ಎರಡನೇ ರಾಜಕೀಯ ಸಂಘವೇ ಇಲ್ಲದ್ದರಿಂದ ಕೆಲವು ದಿವಸ ಇಲ್ಲಿಯೇ ಕೆಲಸಮಾಡಿದನು. ೧೮೩೦ರಲ್ಲಿ ಫ್ರಾನ್ಸದಲ್ಲಿ ರಾಜ್ಯಕ್ರಾಂತಿಯಾಗಲು ಅದೇ ವೇಳೆಯಲ್ಲಿ ಇಟಲಿಯಲ್ಲಿಯೂ ಬಂಡು ಹೂಡಲಿಕ್ಕೆ ಮ್ಯಾಝಿನಿಯು ಪ್ರಯತ್ನ ನಡೆಸಿದನು. ಸರಕಾರಕ್ಕೆ ಈ ಸುದ್ದಿಯು ಹತ್ತಲು ಅವರು ಮ್ಯಾಝಿನಿಯನ್ನು ಹಿಡಿದು ಸಾವೋನಾ ಕಿಲ್ಲೆಯಲ್ಲಿ ಇಟ್ಟರು. ಒಬ್ಬ ಸ್ವಹಸ್ತನನ್ನು ಅಧಿಕಾರಿಗಳಿಗೆ ಸೇರಿಸುವ ಪ್ರಯತ್ನ ಮಾಡಿದನೆಂದು ಮ್ಯಾಝಿನಿಯ ಮೇಲೆ ಆರೋಪಿಸಿತ್ತು. ಮುಂದೆ ವಿಚಾರಣೆಯು ನಡೆಯಲು ಸಾಕಷ್ಟು ಪ್ರಮಾಣಗಳು ಸಿಗದ್ದರಿಂದ ಮ್ಯಾಝಿನಿಯು ನಿರ್ದೋಷಿಯೆಂದು ನಿರ್ಣಯಿಸಿದರು. ಆದರೆ ಸರಕಾರದವರು ಅವನನ್ನು ಹಾಗೆಯೇ ಬಿಡಲಿಲ್ಲ. ಒಂದೇ ಊರಲ್ಲಿ ಸ್ಥಾನಬದ್ಧನಾಗಬೇಕು, ಇಲ್ಲವೆ ದೇಶವನ್ನು ಬಿಟ್ಟು ಹೋಗಬೇಕೆಂದು ಅವನಿಗೆ ಅಪ್ಪಣೆಯಾಯಿತು. ತನ್ನ ಮುಂದಿನ ಕೆಲಸಕ್ಕೆ ಎರಡನೇ ಮಾರ್ಗವೇ ಒಳ್ಳೇದೆಂದು ನೆನಿಸಿ ತನ್ನ ಕುಟುಂಬದ ಎಲ್ಲ ಜನರ ಭೆಟ್ಟಿಯನ್ನು ತೆಗೆದುಕೊಂಡು ೧೮೩೧ರಲ್ಲಿ ಫ್ರಾನ್ಸಕ್ಕೆ ಹೋಗಿ ಅಲ್ಲಿ ಮಾರ್ಸೇಲಿಸದಲ್ಲಿರುವ ಇತರ ದೇಶಭ್ರಷ್ಟ ಬಾಂಧವರನ್ನು ಕೂಡಿಕೊಂಡನು.

## ೨ನೇ ಪ್ರಕರಣ.

## ತರುಣ ಇಟಲೀ ಸಂಘವು.

ಮ್ಯಾಝಿನಿಯು ಸೇವೋನಾ ಜೇಲಿನಲ್ಲಿದ್ದಾಗ ಅವನಿಗೆ ತನ್ನ ಮಾತೃಭೂಮಿಯ ಸ್ಥಿತಿ ಮತ್ತು ಅದನ್ನು ಉದ್ಧಾರಮಾಡುವ ಉಪಾಯಗಳು ಇವುಗಳ ಹೊರತು ಎರಡನೇ ವಿಚಾರವೇ ಇದ್ದಿಲ್ಲ. ಇವನು ತನ್ನ ಮುಂದಿನ ಕಾರ್ಯಕ್ರಮದ ಎಲ್ಲ ತತ್ವಗಳನ್ನು ಇಲ್ಲಿಯೇ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು.

ಮುಂದೆ ಇಡೀ ಯುರೋಪಖಂಡದಲ್ಲಿ ಪ್ರಸಿದ್ಧಿ ಹೊಂದಿದ 'ತರುಣ ಇಟಲಿಯು' ಇಲ್ಲಿಯೇ ಇವನ ಮನೋಭೂಮಿಯಲ್ಲಿ ಜನ್ಮತಾಳಿತು.

ಈ ವೇಳೆಯಲ್ಲಿ ಇಟಲಿಯ ಸ್ಥಿತಿಯು ಬಹಳ ದುಃಖಮಯವಾಗಿತ್ತು. ಅದರಲ್ಲಿ ಅನೇಕ ಸಂಸ್ಥಾನಗಳಿದ್ದು ಅವು ಬೇರೆಬೇರೆ ಅರಸರ ಅಥವಾ ಡ್ಯೂಕರ ಸ್ವಾಧೀನದಲ್ಲಿದ್ದವು. ಲೊಂಬಾರ್ಡಿ ಮತ್ತು ವ್ಹೆನಿಶಿಯಾ ಇವೆರಡು ಪ್ರಾಂತಗಳು ಆಸ್ಟ್ರಿಯಾದ ವಶದಲ್ಲಿದ್ದವು. ಉಳಿದ ಎಲ್ಲ ಇಟಲಿಯಲ್ಲಿ ಆಸ್ಟ್ರಿಯಾದ ವರ್ಚಸ್ಸು ಬಹಳವಾಗಿತ್ತು. ಪಿಡ್‌ಮೊಂಟದ ಅರಸನು ಇಟಲಿಯ ವಾಯವ್ಯ ಪ್ರದೇಶವನ್ನೂ, ಸಾರ್ಡಿನಿಯಾ ಮತ್ತು ಸೇವ್ಹಾಯ್ ಪ್ರಾಂತಗಳನ್ನೂ ಆಳುತ್ತಿದ್ದನು. ದಕ್ಷಿಣ ಇಟಲಿಯು ನೇಪಲ್ಸದ ಅರಸನ ವಶದಲ್ಲಿತ್ತು. ಮಧ್ಯ ಇಟಲಿಯಲ್ಲಿ ಪೋಪನ ಸಂಸ್ಥಾನವೂ, ಟಸ್ಕನಿ, ಮಾಡೆನಾ ಮೊದಲಾದ ಡ್ಯೂಕರು ಆಳುವ ಸಣ್ಣ ಪುಟ್ಟ ರಾಜ್ಯಗಳೂ ಇದ್ದವು. ಒಂದು ರಾಜ್ಯದೊಳಗಿಂದ ಮತ್ತೊಂದು ರಾಜ್ಯದೊಳಗೆ ಹೋಗಬೇಕಾದರೆ ಅನೇಕ ಜಕಾತಿಗಳಿದ್ದ ಮೂಲಕ ವ್ಯಾಪಾರವು ಬಹಳ ಮಂದವಾಗಿತ್ತು. ಸರಕಾರದ ನಿರ್ಬಂಧಕ್ಕೋಸ್ಕರ ಒಂದು ರಾಜ್ಯದಲ್ಲಿ ಬರೆದ ಗ್ರಂಥಗಳು ಎರಡನೇ ರಾಜ್ಯದವರಿಗೆ ಸಿಗುತ್ತಿದ್ದಿಲ್ಲ. ಆಸ್ಟ್ರಿಯಾದ ಬೆಂಬಲದಿಂದ ಎಲ್ಲ ಅರಸರೂ ನಿರಂಕುಶರಾಗಿ ಆಳುತ್ತಿದ್ದರು. ಪ್ರಜೆಗಳಿಗೆ ಕಾಯಿದೆಗಳ ರಚನೆಯಲ್ಲಿಯೂ ಕರಕೂಡ್ರಿಸುವದರಲ್ಲಿಯೂ ಮತಾಧಿಕಾರವಿದ್ದಿಲ್ಲ. ಜನರಿಗೆ ಸಾರ್ವಜನಿಕ ಸಭೆಗಳನ್ನು ಮಾಡಲಿಕ್ಕೂ, ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸುವದಕ್ಕೂ ಹಕ್ಕುಗಳಿದ್ದಿಲ್ಲ. ಶಿಕ್ಷಣವು ಕೆಟ್ಟುಹೋಗಿತ್ತು. ಧರ್ಮಾಧಿಕಾರಿಗಳು ಜನರನ್ನು ಉರಿಸುತ್ತಿದ್ದರು. ನ್ಯಾಯವಿಚಾರಣೆಯು ಪಕ್ಷಪಾತಮಯವಾಗಿತ್ತು. ಪೋಲೀಸರ ಸುಳಿದಾಟವಂತೂ ಎಲ್ಲೆಲ್ಲಿಯೂ ವಿಶೇಷವಾಗಿತ್ತು. ಓಣಿಗಳಲ್ಲಿ, ಪೇಟೆಗಳಲ್ಲಿ, ವಿದ್ಯಾಲಯಗಳಲ್ಲಿ, ಪ್ರಾರ್ಥನಾಲಯಗಳಲ್ಲಿ, ಮನೆಗಳಲ್ಲಿ ಸಹ ಗುಪ್ತ ಪೋಲೀಸರು ಸುಳಿದಾಡಿ ಸರಕಾರದ ವಿರುದ್ಧ ಟೀಕೆಯ ಮಾಡುವ ಜನರನ್ನು ಕಂಡು ಹಿಡಿಯುತ್ತಿದ್ದರು. ಫ್ರಾನ್ಸದಲ್ಲಿ ರಾಜ್ಯಕ್ರಾಂತಿಯಾದಂದಿನಿಂದ ಸರಕಾರಗಳಾದರೂ ಕ್ರಾಂತಿಯ ಭೀತಿಯಲ್ಲಿಯೇ ಯಾವಾಗಲೂ ಇದ್ದುಕೊಂಡು, ಜನರಿಗೆ ಉಗ್ರತರವಾದ ಶಿಕ್ಷೆಗಳಿಂದ ಅಂಜಿಕೆಹಾಕುತ್ತಲೇ ಇದ್ದವು.

ಇಂಥ ಪರಿಸ್ಥಿತಿಯಲ್ಲಿ ದೇಶಭ್ರಷ್ಟನಾದ ಮ್ಯಾಝಿನಿಯು ತರುಣ ಇಟಲಿಯ ಸ್ಥಾಪನೆಯನ್ನು ಮಾಡಿದನು. ಪೂರ್ವದ ಸಂಘಗಳು ಜನರಿಗೆ ಹಕ್ಕುಗಳ

ಸಲುವಾಗಿಯೂ ಸುಖದ ಸಲುವಾಗಿಯೂ ಚಳವಳಿಮಾಡಿರೆಂದು ಹೇಳುತ್ತಿದ್ದವು. ಆದರೆ ಮ್ಯಾಝಿನಿಯು "ಕರ್ತವ್ಯ, ಧರ್ಮ, ಈಶ್ವರಸಂಕಲ್ಪ" ಮೊದಲಾದ ಉದಾತ್ತ ಭಾವನೆಗಳಿಗೆ ಉದ್ದೇಶಿಸಿ ಉಪದೇಶಮಾಡಿದನು. ಇಟಲಿಯು ಪೂರ್ಣ ಸ್ವಾತಂತ್ರ್ಯವನ್ನು ಗಳಿಸಲೇಬೇಕು. ಅದು ಇಟಲಿಯ ಜನ್ಮಸಿದ್ಧವಾದ ಮತ್ತು ಈಶ್ವರನಿರ್ಮಿತವಾದ ಸ್ಥಿತಿಯು. ಇಟಲಿಯು ಸ್ವತಂತ್ರವಾಗಿ ಏಕರಾಷ್ಟ್ರವಾಗ ಲಿಕ್ಕೆಬೇಕು. ರಾಷ್ಟ್ರೈಕ್ಯವಾಗದ ಹೊರ್ತು ಇಟಲಿಯು ಬಲವಂತವಾಗಲಾರದು. ಇಟಲಿಯು ಆತ್ಮಸ್ವತಂತ್ರವಾದ ಮತ್ತು ಏಕವಾದ ರಾಷ್ಟ್ರವಾಗದ ಹೊರ್ತು ವಿಶ್ವ ಬಂಧುತ್ವದ ಪವಿತ್ರಕಾರ್ಯವನ್ನು ಮಾಡಲಿಕ್ಕೆ ಅದು ಸಮರ್ಥವಾಗಲಾರದು. ಆದ್ದರಿಂದ ಇಂಥ ಇಟಲಿಯನ್ನು ನಿರ್ಮಾಣಮಾಡಲಿಕ್ಕೆ ತನುಮನಧನಗಳಿಂದ ಅಹರ್ನಿಶ ಪ್ರಯತ್ನಮಾಡುವದು ಪ್ರತಿಯೊಬ್ಬ ಇಟಲಿಯ ಪುತ್ರನ ಕರ್ತವ್ಯವು. ಈ ಕರ್ತವ್ಯವನ್ನು ಮಾಡುವಾಗ ಎಷ್ಟೋ ಜನರಿಗೆ ಕಾರಾಗೃಹವಾಸವೂ, ದೇಶಾಂತರವಾಸವೂ ಬಂದೊದಗುವದು. ಎಷ್ಟೋ ಜನರು ಸ್ವಾತಂತ್ರ್ಯಯುದ್ಧ ದಲ್ಲಿ ತಮ್ಮ ಪ್ರಾಣಗಳನ್ನು ಅರ್ಪಿಸಬೇಕಾಗುವದು. ಉದ್ದಿಷ್ಟಫಲವು ಸಿಗಬೇ ಕಾದರೆ ಇಟಲಿಯ ಇದೆಲ್ಲಕ್ಕೂ ತಲೆಗೊಡಲಿಕ್ಕೆಬೇಕು. ಹೀಗೆ ಮ್ಯಾಝಿನಿಯು ಉಪದೇಶದ ಧೋರಣವಾಗಿತ್ತು.

ಮ್ಯಾಝಿನಿಯು 'ತರುಣ ಇಟಲಿ' ಯು ತತ್ವಗಳನ್ನೂ ಅವುಗಳಿಂದ ಹೊರ ಡುವ ನಿಯಮಗಳನ್ನೂ ತನ್ನ 'ತರುಣ ಇಟಲಿ' ಯೆಂಬ ವರ್ತಮಾನಪತ್ರದಲ್ಲಿ ಸ್ಪಷ್ಟವಾಗಿ ಮಾಡಿ, ಆ ತತ್ವಗಳಿಗೂ ನಿಯಮಗಳಿಗೂ ಈಶ್ವರನ, ರಾಷ್ಟ್ರ ದೇವತೆಯ, ಮತ್ತು ಮನೋದೇವತೆಯ ಸಾಕ್ಷಿಯಾಗಿ ಸಮ್ಮತಿಯನ್ನು ಕೊಟ್ಟವರು ಮಾತ್ರ 'ತರುಣ ಇಟಲಿ' ಯು ಸಭಾಸದರಾಗಬಹುದೆಂದು ಗೊತ್ತುಮಾಡಿದ್ದನು. ಯಾವದೊಂದು ಸಂಘದ ಬಲವು ಅದರ ಸದಸ್ಯರ ಸಂಖ್ಯೆಯನ್ನವಲಂಬಿಸದೆ ಅವರ ಐಕಮತ್ಯವನ್ನೂ ಏಕಭಾವನೆಯನ್ನೂ ಅವಲಂಬಿಸಿದೆಯೆಂದು ಅವನ ನಿಶ್ಚಿತ ಮತವಾಗಿತ್ತು. ತರುಣ ಇಟಲಿಯ ಮೂಲಭೂತತತ್ವಗಳು ಮೂರು ಇದ್ದವು. ಅವು ಯಾವವೆಂದರೆ:— (೧) ಸ್ವಾತಂತ್ರ್ಯ ಅಥವಾ ದಾಸ್ಯಮುಕ್ತತೆ—ಇಟಲಿಯು ಆಸ್ಟ್ರಿಯನ್ನರನ್ನು ದೇಶದಿಂದ ಹೊರಗೆ ಹಾಕಲಿಕ್ಕೆಬೇಕು. ಸ್ವಾತಂತ್ರ್ಯಪ್ರಾಪ್ತಿಗೆ ಯುದ್ಧದ ಹೊರ್ತು ಎರಡನೇ ರಾಜಮಾರ್ಗವಿಲ್ಲ. ಬಂಡುಮಾಡಿ ರಾಜ್ಯ ಕ್ರಾಂತಿಯನ್ನು ಮಾಡಬೇಕಾದರೆ ಬಹುಜನ ಸಮಾಜವು ಸ್ವಯಂಸ್ಫೂರ್ತಿಯಿಂದ

ಏಳಲಿಕ್ಕೆ ಬೇಕು ಬಂಡು ಯಶಸ್ವಿಯಾಗಬೇಕಾದರೆ ಜನರಲ್ಲಿ ವಿಚಾರಕ್ರಾಂತಿಯಾಗಿ ವಿಚಾರಗಳ ಮತ್ತು ಭಾವನೆಗಳ ಏಕರೂಪತೆಯಾಗಲಿಕ್ಕೆ ಬೇಕು. (೨) ರಾಷ್ಟ್ರೈಕ್ಯ– ಇಟಲಿಯು ಏಕರಾಷ್ಟ್ರವಾಗಲಿಕ್ಕೆಬೇಕು. ಅದಕ್ಕೆ ಒಂದೇ ವರಿಷ್ಠ ಸರಕಾರವಿರಲಿಕ್ಕೆ ಬೇಕು. ಅದರಲ್ಲಿ ಅನೇಕ ಸಂಸ್ಥಾನಗಳೂ ರಾಜ್ಯಗಳೂ ಇದ್ದದ್ದಾದರೆ ಏಕರಾಷ್ಟ್ರೀಯತ್ವದ ಭಾವನೆಯು ಉತ್ಪನ್ನವಾಗದು. ರಾಷ್ಟ್ರೈಕ್ಯವಾಗದ ಹೊರ್ತು ಅದರ ರಾಜಕೀಯ ದೌರ್ಬಲ್ಯವು ಹೋಗಲಾರದು. (೩) ಲೋಕಸತ್ತಾತ್ಮಕ ಪದ್ಧತಿ– ಇಟಲಿಯಲ್ಲಿ ಲೋಕಸತ್ತೆಯುಂಟಾಗಲಿಕ್ಕೆ ಬೇಕು. ಯಾವನೊಬ್ಬ ವ್ಯಕ್ತಿಗೆ ಸರ್ವಾಧಿಕಾರಕೊಡಲಿಕ್ಕೆ ಜನರು ತಮ್ಮ ಜೀವಗಳನ್ನು ಅರ್ಪಿಸಲಾರರು. ನಿಮ್ಮ ಕೈಯಲ್ಲಿಯೇ ಶಾಸನಸತ್ತೆಯು ಬರುವದೆಂದು ಹೇಳಿದರೆ ಮಾತ್ರ ಬಹುಜನ ಸಮಾಜವು ಸ್ವಾತಂತ್ರ್ಯ ಯುದ್ಧದ ಯಾತನೆಗಳಿಗೆ ಎದೆಗೊಡುವದು. ಇದಲ್ಲದೆ ಇಟಲಿಯಲ್ಲಿ ಯಾರು ಅರಸರಾಗಬೇಕು? ಒಂದು ಸಂಸ್ಥಾನದ ಅಧಿಪತಿಯು ಇಡೀ ಇಟಲಿಯ ಅರಸನಾಗಬೇಕಾದರೆ, ಉಳಿದ ಸಂಸ್ಥಾನಗಳ ಜನರು ಯುದ್ಧವನ್ನು ಹೂಡಲಾರರು. ಆದ್ದರಿಂದ ಇತಿಹಾಸದೃಷ್ಟಿಯಿಂದಲೂ, ಸದ್ಯಃಪರಿಸ್ಥಿತಿಯ ದೃಷ್ಟಿಯಿಂದಲೂ ಇಟಲಿಗೆ ಲೋಕಸತ್ತಾತ್ಮಕ ಪದ್ಧತಿಯು ಅಪರಿಹಾರ್ಯವಾಗಿರುತ್ತದೆ.

ತರುಣ ಇಟಲಿಯ ಸಭಾಸದರು ಈ ಎಲ್ಲ ತತ್ವಗಳನ್ನು ಗ್ರಹಣ ಮಾಡಿ ಅವುಗಳಂತೆ ತಮ್ಮ ನಿತ್ಯವ್ಯವಹಾರವನ್ನಿಡಬೇಕು. ಅವರು ಉದಾಹರಣೆಯಿಂದಲೂ, ಲೇಖಗಳಿಂದಲೂ, ಭಾಷಣಗಳಿಂದಲೂ ಮೇಲೆ ಹೇಳಿದ ತತ್ವಗಳನ್ನು ಸಾಮಾನ್ಯ ಜನರಲ್ಲಿ ಹರಡಬೇಕು. ಈ ಲೋಕಶಿಕ್ಷಣಕಾರ್ಯವು ಇಟಲಿಯ ಪ್ರತಿಕೂಲ ಸ್ಥಿತಿಯ ಮೂಲಕ ಗುಪ್ತವಾಗಿಯೇ ನಡಿಯಲಿಕ್ಕೆ ಬೇಕು. ಈ ಪ್ರಕಾರ ಲೋಕಶಿಕ್ಷಣವನ್ನು ಅವ್ಯಾಹತವಾಗಿ ಮಾಡದ ಹೊರ್ತು ಬಹುಜನಸಮಾಜದ ವಿಚಾರಗಳ ಏಕರೂಪತೆಯಾಗಲಾರದು. ಹೀಗೆ ಏಕರೂಪತೆಯಾಗದ ಹೊರ್ತು ರಾಜ್ಯಕ್ರಾಂತಿಯ ಪ್ರಯತ್ನವು ಯಶಸ್ವಿಯಾಗಲಾರದು. ಹೀಗೆ ಮ್ಯಾಝಿನಿಯು ತನ್ನ ಪತ್ರಗಳಲ್ಲಿ ಬೋಧಿಸುತ್ತಿದ್ದನು.

## ೩ನೇ ಪ್ರಕರಣ.

## ಮಾರ್ಸೆಲಿಸ್.

ಮ್ಯಾಝಿನಿಯು 'ತರುಣ ಇಟಲಿ'ಯ ಸ್ಥಾಪನೆಯನ್ನು ಮಾರ್ಸೆಲಿಸ್ ಪಟ್ಟಣದಲ್ಲಿದ್ದುಕೊಂಡು ಮಾಡಿದನು. ತರುಣ ಇಟಲಿಯ ತತ್ವಗಳನ್ನು ಸ್ಪಷ್ಟೀಕರಿಸಲಿಕ್ಕೂ, ಆಗಾಗ್ಗೆ ಬರುವ ಸಂಶಯಗಳ ನಿವಾರಣೆಯನ್ನು ಮಾಡುವದಕ್ಕೂ ಅವನು 'ತರುಣ ಇಟಲಿ' ಎಂಬ ಲೇಖಮಾಲೆಯನ್ನು ಆರಂಭಿಸಿದನು. ಇವನ ಸಂಗಡ ನಾಲ್ಕುಜನ ದೇಶಭಕ್ತರು ಇದ್ದುಕೊಂಡು ಇವನಿಗೆ ಸಹಾಯ ಮಾಡುತ್ತಿದ್ದರು. ಇವರು ಹಗಲಿರುಳು ಕೂತು ಲೇಖಗಳನ್ನೂ ಪತ್ರಗಳನ್ನೂ ಬರೆಯುವದು, ಪ್ರವಾಸಿಕರಿಂದ ಇಟಲಿಯ ಸುದ್ದಿಗಳನ್ನು ತಿಳಿಯುವದು, ನಾವಿಕರನ್ನು ಒಡಕೊಂಡು ಅವರ ಸಂಗಡ ತಮ್ಮ ಲೇಖಗಳನ್ನು ಇಟಲಿಗೆ ಕಳಿಸುವದು, ಹೀಗೆ ತಮ್ಮ ಕಾರ್ಯಪರಂಪರೆಗಳನ್ನು ನಡಿಸುತ್ತಿದ್ದರು. ಮುದ್ರಣದ ಸಣ್ಣಪುಟ್ಟ ಕೆಲಸಗಳನ್ನು ತಾವು ಸ್ವತಃ ಮಾಡಿಕೊಳ್ಳುತ್ತಿದ್ದರು. ಇವರಲ್ಲಿ ಒಬ್ಬನೂ ಶ್ರೀಮಂತನಿದ್ದಿಲ್ಲ. ಮ್ಯಾಝಿನಿಯನ್ನು ಬಿಟ್ಟು ಉಳಿದವರು ಸಾಮಾನ್ಯ ಬುದ್ಧಿಮತ್ತೆಯುಳ್ಳವರಾಗಿದ್ದರು. ಆದರೆ ಸಹವಾಸದಿಂದ ಗುರುವಾದ ಮ್ಯಾಝಿನಿಯ ಆತ್ಮವಿಶ್ವಾಸವು ಅವರಲ್ಲಿಯೂ ಉಂಟಾಗಿತ್ತು. ಹೀಗೆ ಎರಡು ವರ್ಷಗಳವರೆಗೆ ಕೆಲಸಮಾಡಿ ಇಟಲಿಯ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ತಮ್ಮ ಸಂಘದ ಸಂಸ್ಥೆಗಳನ್ನು ನಿರ್ಮಿಸಿದರು. ಅವರು ತರುಣ ಇಟಲಿಗೆ ಸ್ವತಂತ್ರ ಶಾಲೆಗಳನ್ನು ಏರ್ಪಡಿಸುವದಕ್ಕೂ, ಹಳ್ಳಿಯ ಜನರಿಗಾಗಿ ಸಾಯಂಕಾಲದ ವರ್ಗಗಳನ್ನು ಹಾಕುವದಕ್ಕೂ, ಅಂತಃಕರಣದಲ್ಲಿ ದೇಶಾಭಿಮಾನದ ಜ್ವಾಲೆಯನ್ನು ಪ್ರಜ್ವಲಿಸುವಂಥ ಚಿತ್ರಗಳನ್ನೂ, ಕವಿತೆಗಳನ್ನೂ, ಡಾಯರಿಗಳನ್ನೂ, ಚಿಕ್ಕಪುಸ್ತಕಗಳನ್ನೂ ಊರೂರಿಗೆ ಹಂಚಲಿಕ್ಕೂ ಬೋಧಿಸಿದರು.

ಈ ಪ್ರಕಾರ ಮ್ಯಾಝಿನಿಯು ಮಾಡಿದ ಪ್ರಯತ್ನಗಳು ಅಲ್ಪಕಾಲದಲ್ಲಿಯೇ ಫಲಕಾರಿಯಾದವು. ಸರದಾರರೂ, ಸಾಮಾನ್ಯಜನರೂ, ವಕೀಲರೂ, ನೌಕರರೂ, ವಿದ್ಯಾರ್ಥಿಗಳೂ, ಕಸಬದಾರರೂ—ಹೀಗೆ ಎಲ್ಲತರದ ಜನರು ತರುಣ ಇಟಲಿ

ಯನ್ನು ಸೇರಿದರು. ಎರಡು ವರ್ಷಗಳಲ್ಲಿ ಸಭಾಸದರ ಸಂಖ್ಯೆಯು ಅರವತ್ತು ಸಾವಿರಕ್ಕೆ ಮಿಕ್ಕಿತು. ಮುಂದೆ ರಾಷ್ಟ್ರೀಯ ಚಳವಳಿಯಲ್ಲಾಗಲಿ, ಇಟಲಿಯ ಪಾರ್ಲಿಮೆಂಟಿನಲ್ಲಾಗಲಿ, ಹೆಸರು ಪಡೆದ ಬಹು ಜನ ಇಟಾಲಿಯನ್ನರು ಮೊದಲು ತರುಣ ಇಟಲಿಯ ಸಭಾಸದರಾಗಿ ಮ್ಯಾಝಿನಿಯ ಬೋಧಾಮೃತವನ್ನು ಪಾನ ಮಾಡಿದವರಾಗಿದ್ದರು. ಇಟಲಿಯ ಸ್ವಾತಂತ್ರ್ಯದ ಮಹಾವೀರನಾದ ಗ್ಯಾರಿಬಾಲ್ಡಿಯು ಈ ವೇಳೆಯಲ್ಲಿ ಜಿನೋವಾದ ಹಡಗುಪಡೆಯಲ್ಲಿ ಕಪ್ತಾನನಾಗಿದ್ದನು. ಅವನು ಸ್ವತಃ ಮಾರ್ಸಿಲೆಸಕ್ಕೆ ಹೋಗಿ ಮ್ಯಾಝಿನಿಗೆ ಭೆಟ್ಟಿಯಾಗಿ ತರುಣ ಇಟಲಿಯ ದೀಕ್ಷೆಯನ್ನು ತಕ್ಕೊಂಡನು.

ಇಟಲಿಯ ಎಲ್ಲ ರಾಜ್ಯಗಳಲ್ಲಿ ಪಿಡ್‌ಮಾಂಟವೆಂಬದು ಬಹಳ ಪ್ರಬಲವಾದದ್ದು, ಯುದ್ಧಕಲೆಗಳಲ್ಲಿ ಶಿಕ್ಷಣಹೊಂದಿದ ಸೈನ್ಯವುಳ್ಳದ್ದಾಗಿತ್ತು. ಇಲ್ಲಿ ಚಾರ್ಲ್ಸ ಆಲ್ಬರ್ಟನೆಂಬ ಅರಸನು ಅದೇ ಪಟ್ಟಕ್ಕೆ ಕುಳಿತಿದ್ದನು. ಇವನು ಚಿಕ್ಕಂದಿನಲ್ಲಿ ಕಾರ್ಬೋನಾರೀ ಸಂಘದಲ್ಲಿ ಸೇರಿದವನಾಗಿ ೧೮೨೧ನೇ ಇಸ್ವಿಯ ಕ್ರಾಂತಿಯ ಸಂಚಿನಲ್ಲಿ ಕೂಡಿದ್ದನು. ಇವನಿಗೆ ರಾಷ್ಟ್ರೀಯ ಸ್ವಾತಂತ್ರ್ಯವು ಪ್ರಿಯವಾಗಿತ್ತು. ಆದರೆ ಮುಂದೆ ಇವನು ರಾಜ್ಯಕ್ರಾಂತಿಯು ರಾಜಸತ್ತೆಯನ್ನು ಕಿತ್ತಿಹಾಕಬಹುದೆಂದು ಅಂಜಿ ತರುಣ ಇಟಲಿಯ ಚಳವಳಿಯಲ್ಲಿ ಅಂಜಿಕೆಯುಳ್ಳವನಾಗಿದ್ದನು. ತರುಣ ಇಟಲಿಯು ಹೊರಟ ಕೆಲವು ದಿವಸಗಳ ಮೇಲೆ ಮ್ಯಾಝಿನಿಯು ಇವನಿಗೆ ಒಂದು ಪತ್ರಬರೆದನು. ಈ ಪತ್ರದಲ್ಲಿ ಸ್ವಾತಂತ್ರ್ಯದ ಮತ್ತು ರಾಷ್ಟ್ರೈಕ್ಯದ ಯುದ್ಧದಲ್ಲಿ ಮುಖಂಡನಾಗಲಿಕ್ಕೆ ಅವನಿಗೆ ವಿನಂತಿ ಮಾಡಿಕೊಂಡಿದ್ದನು. "ದೊರೆಗಳೇ, ತಾವು ಇಟಲೀ ರಾಷ್ಟ್ರದ ನಾಯಕರಾಗಿರಿ. ತಮ್ಮ ನಿಶಾನೆಯ ಮೇಲೆ "ಏಕರಾಷ್ಟ್ರೀಯತ್ವ, ಸ್ವಾತಂತ್ರ್ಯ" ಎಂದು ಬರೆಯಿರಿ. ನಮ್ಮ ದೇಶವನ್ನು ಪರದೇಶಗಳಿಂದ ಮುಕ್ತಮಾಡಿ ಅದರ ಭವಿಷ್ಯತ್ಕಾಲವನ್ನು ತಾವೇ ನಿರ್ಣಯಿಸಿರಿ. ಹಾಗೆ ತಾವು ಮಾಡಿದರೆ ನಾವು ನಿಮ್ಮನ್ನು ಬಂದು ಕೂಡುವೆವು. ನಿಮ್ಮ ದಸೆಯಿಂದ ನಮ್ಮ ಪ್ರಾಣವನ್ನೂ ಕೊಡುವೆವು. ಇಟಲಿಯ ಸಣ್ಣ ಸಣ್ಣ ರಾಜ್ಯಗಳನ್ನು ತಮ್ಮ ಅರಸೊತ್ತಿಗೆಗೆ ಒಳಪಡಿಸುವೆವು. ಕತ್ತಿಯ ಅಲಗಿನಿಂದಲೇ ತಮಗೆ ಕ್ಷೇಮವಾಗುವದು, ನೋಡಿರಿ ವಿಚಾರಮಾಡಿರಿ, ಒಂದುವೇಳೆ ತಾವು ಈ ಕೆಲಸ ಮಾಡದಿದ್ದರೆ ಎರಡನೇಯವರು ತಮ್ಮ ವಿರುದ್ಧವಾಗಿ ಈ ಕೆಲಸವನ್ನು ಮಾಡೇ ತೀರುವರು, ಮುಂತಾದ ಭವಿಷ್ಯವಾದದ ಮಾತುಗಳು ಈ ಪತ್ರದಲ್ಲಿ ಇದ್ದವು-

ಈ ಪತ್ರವು ೧೮೩೧ರಲ್ಲಿ ಪ್ರಸಿದ್ಧವಾಯಿತು. ಅರಸನು ಈ ಪತ್ರವನ್ನು ಓದಿನೋಡಿದನು. ಆದರೆ ಅದರ ಪರಿಣಾಮವು ಮ್ಯಾಝಿನಿಯು ಬಯಸಿದಂತೆ ಆಗಲಿಲ್ಲ. ಮ್ಯಾಝಿನಿಯು ಪಿಡ್‌ಮಾಂಟದ ಹದ್ದಿನಲ್ಲಿ ಬಂದರೆ, ಅವನನ್ನು ಹಿಡಿಯಬೇಕೆಂದು ಸರಕಾರದ ಆಜ್ಞೆಯು ಹೊರಟಿತು. ಇದರಿಂದ ಮ್ಯಾಝಿನಿಯು ಎದೆಗುಂದಲಿಲ್ಲ. ಇಟಲಿಯ ಸ್ವಾತಂತ್ರ್ಯಪ್ರಾಪ್ತಿಗೆ ಏನೋ ಪಿಡ್‌ಮಾಂಟದ ಸೈನ್ಯದ ಮತ್ತು ಅರಸನ ಸಹಾಯ ಸಿಕ್ಕರೆ ನೋಡಬಹುದೆಂದು ಅವನ ವಿಚಾರ ವಿತ್ತು. ಮುಂದೆ ಅವನು ಪಿಡ್‌ಮಾಂಟದ ಸೈನ್ಯವನ್ನು ಒಡಕೊಂಡು ಅವರ ಸಹಾಯದಿಂದ ಸ್ವಾತಂತ್ರ್ಯಯುದ್ಧ ಹೂಡುವ ಸಂಚುನಡಿಸಿದನು. ಚಾರ್ಲ್ಸ ಆಲ್ಬರ್ಟನು ಈ ಯುದ್ಧಕ್ಕೆ ಮುಖಂಡನಾದರೆ ಒಳ್ಳೇದು, ಇಲ್ಲದಿದ್ದರೆ, ಜಿನೋವ್ಹಾದಲ್ಲಿ ಒಂದು ತಾತ್ಪೂರ್ತಿಕ ಯುದ್ಧಸಭೆಯನ್ನು ಸ್ಥಾಪಿಸಬೇಕು; ಅದು ಸರಕಾರದ ಸೂತ್ರಗಳನ್ನು ಕೈಯಲ್ಲಿ ತಕ್ಕೊಂಡು ಸೈನ್ಯವನ್ನು ಹೊರಡಿಸಿ ಲೊಂಬಾರ್ಡಿಯ ಮೇಲೆ ಸಾಗಿಹೋಗಬೇಕು; ಹೀಗೆ ಗೊತ್ತಾಗಿತ್ತು. ಸರಕಾರೀ ಸೈನ್ಯದ ಬಹು ಜನ ಸಿಪಾಯರೂ ಮೇಲಾಧಿಕಾರಿಗಳೂ ಈ ಸಂಚಿಗೆ ಸೇರಿದ್ದರು. ಅನುಕೂಲ ಪ್ರಸಂಗವು ಬಂದರೆ ಒಬ್ಬೊಬ್ಬ ಸೇನಾನಾಯಕನು ಸಹ ಬಂದು ಸೇರುವೆನೆಂದು ಹೇಳಿದನು. ಆದರೆ ಸಂಚುಗಾರರು ಬಹಳ ಕಾಲ ವಿಲಂಬನೆ ಮಾಡಿದರು. ಅಷ್ಟರಲ್ಲಿ ಸರಕಾರಕ್ಕೆ ಸಂಚಿನ ಎಳೆಗಳು ಸಿಕ್ಕು ಸಂಚಿನ ಕಾರ್ಯಕ್ರಮವೆಲ್ಲ ಬಯಲಾಯಿತು. ಅರಸನು ಹೌಹಾರಿ ಸಂಚುಗಾರರ ಪಾರುಪತ್ಯವನ್ನು ಮಾಡುವದಕ್ಕೆ ತನ್ನ ಪಕ್ಷದವರಿಗೆ ಪೂರ್ಣವಾದ ಅಧಿಕಾರವನ್ನು ಕೊಟ್ಟನು. ಸೈನ್ಯದ ಕೋರ್ಟುಗಳು ನೆರೆದವು. ಮ್ಯಾಝಿನಿಯ ಪರಮ ಮಿತ್ರನಾದ 'ರಫಿನಿ' ಎಂಬವನಿಗೆ—ನೀನು ನಿನ್ನ ಜೊತೆಗಾರರ ಹೆಸರು ಹೇಳದಿದ್ದರೆ ದೇಹಾಂತಶಿಕ್ಷೆಯನ್ನು ವಿಧಿಸುವೆವೆಂದು ಹೇಳಲು, ಅವನು ಜೇಲಿನಲ್ಲಿಯೇ ಆತ್ಮಹತ್ಯೆಯನ್ನು ಮಾಡಿಕೊಂಡನು. ಹತ್ತು ಜನ ದಂಡಾಳುಗಳಿಗೂ ಇಬ್ಬರು ಸೈನ್ಯದ ಅಧಿಕಾರಿಗಳಿಗೂ ಗುಂಡುಹಾಕಿದರು; ಹದಿನಾಲ್ಕು ಜನರು ಓಡಿಹೋಗಿ ಜೀವ ಉಳಿಸಿಕೊಂಡರು. ಎಷ್ಟೋ ಜನರಿಗೆ ವರ್ಷಾನುವರ್ಷ ಬಂದಿವಾಸವನ್ನು ಅನುಭವಿಸಬೇಕಾಯಿತು.

ಇಂಥ ಕ್ರೂರವಾದ ಶಿಕ್ಷೆಗಳಿಂದ ದೇಶದಲ್ಲಿ ಹೆಚು ಜಾಗ್ರೃತಿಯುಂಟಾಯಿತು. ಹತರಾದ ದೇಶವೀರರ ರಕ್ತದಿಂದ ಸ್ವಾತಂತ್ರ್ಯದ ಭಾವನೆಗಳು ಹೆಚ್ಚು ದೃಢವಾ

ಗುವವೆಂದು ಮ್ಯಾಝಿನಿಯು ಉದ್ಗಾರ ತೆಗೆದನು. ದೇಶವೀರರ ಇಂಥ ನಿಷ್ಕಾರಣ ವಾದ ಹಿಂಸೆಯು ಜನರ ಮನಸ್ಸಿನಲ್ಲಿ ಸ್ಥಿರವಾಗಿ ನಟ್ಟು ಅದರ ಸ್ಮರಣದಿಂದ ಮುಂದೆ ಎಷ್ಟೋ ಜನರು ಸ್ವಾತಂತ್ರ್ಯದ ಘೋರಾತೀರ್ಥದಲ್ಲಿ ತಮ್ಮ ದೇಹಗಳನ್ನು ಈಡಾಡಿದರು.

ಫ್ರೆಂಚ ಸರಕಾರದವರು ಮ್ಯಾಝಿನಿಗೆ ತಮ್ಮ ದೇಶವನ್ನು ಬಿಟ್ಟು ಹೋಗ ಲಿಕ್ಕೆ ಆಜ್ಞಾಪಿಸಿ ಅವನ ಮುದ್ರಣಾಲಯುವನ್ನು ಮುರಿದು ಬಿಟ್ಟರು. ಮ್ಯಾಝಿ ನಿಯು ಇದಕ್ಕೆ ಅಂಜಲಿಲ್ಲ. ಅವನು ಅಲ್ಲಿಯೇ ಒಬ್ಬ ಸ್ನೇಹಿತನ ಮನೆಯಲ್ಲಿ ಅಡಗಿಕೊಂಡಿದ್ದು, ಒಂದು ಗುಪ್ತ ಮುದ್ರಣಾಲಯುವನ್ನು ತೆಗೆದನು. ಒಂದು ವರ್ಷದ ವರೆಗೆ ಅವನು ಹೊಸ್ತಲದ ಹೊರಗೆ ಕಾಲಿಟ್ಟದ್ದಿಲ್ಲ. ಜಿನೋವ್ಹಾದ ದೇಶವೀರರ ವಧದ ವರ್ತಮಾನವೂ, ರಫಿನಿಯ ಮರಣವಾರ್ತೆಯೂ ಮ್ಯಾಝಿನಿಗೆ ಹತ್ತಲು ಅವನು ಶೋಕಪರವಶನಾದನು. ಒಬ್ಬ ಸಾಧ್ವಿಯಾದ ಸ್ತ್ರೀಯು ಅವ ನಿಗೆ ಈ ವೇಳೆಯಲ್ಲಿ ಸಮಾಧಾನಮಾಡದಿದ್ದರೆ ಅವನಿಗೆ ಹುಚ್ಚುಹಿಡಿಯಬಹು ದಾಗಿತ್ತು.

---

## ೪ನೇ ಪ್ರಕರಣ.

## ಸ್ವಿಡ್ಝರ್ಲಂಡ್.

ಮ್ಯಾಝಿನಿಯು ೧೮೩೩ರಲ್ಲಿ ಫ್ರಾನ್ಸವನ್ನು ಬಿಟ್ಟು ಸ್ವಿಡ್ಝರ್ಲಂಡಕ್ಕೆ ಹೋಗಿ ಜಿನೀವ್ಹ ಶಹರದಲ್ಲಿ ವಾಸ ಮಾಡಿದನು. ಅಲ್ಲಿ ಇದ್ದು ಪಿಡ್‌ಮಾಂಟದಲ್ಲಿ ಬಂಡನ್ನು ಹೂಡಲಿಕ್ಕೆ ಮತ್ತೊಂದು ಸಂಚುಮಾಡಿದನು. ತರುಣ ಇಟಲಿಯ ಮೇಲೆ ಜನರ ವಿಶ್ವಾಸವು ಉಳಿಯಬೇಕಾದರೆ ಬಂಡುಮಾಡಿ ತೋರಿಸದ ಹೊರ್ತು ಗತ್ಯಂತರವಿಲ್ಲೆಂದು ಅವನಿಗೆ ಅನಿಸಿತು. ಆಗ ಇಡೀ ಯುರೋಪಖಂಡವು ರಾಜ್ಯಕ್ರಾಂತಿಯೆಂಬ ಜ್ವಾಲಾಮುಖಿಯ ಬಾಯಿಯಲ್ಲಿದ್ದು, ಇಟಲಿಯಲ್ಲಿ ಲೋಕ ಸತ್ತೆಯು ಬಂಡಾದರೆ, ಫ್ರಾನ್ಸ, ಜರ್ಮನಿ ಮೊದಲಾದ ಉಳಿದ ದೇಶಗಳ ಲೋಕ ಸತ್ತಾವಾದಿಗಳೂ ಬಂಡು ಹೂಡುವರೆಂದು ಅವನ ಕಲ್ಪನೆಯಾಗಿತ್ತು. ಸ್ವಲ್ಪ ದಿವಸಗಳಲ್ಲಿ ನೂರಾರು ದೇಶಭ್ರಷ್ಟರು ಅವನಿಗೆ ಬಂಡು ಕೂಡಿದರು.

ಸೈನ್ಯಾಧಿಕಾರಿಗಳು ಅವನಿಗೆ ಆಲೋಚನೆ ಹೇಳಿದರು. ಬಂಡುಗಾರರ ಟೋಳಿಯು ಸೇವ್ಹೊಯ್ ಪ್ರಾಂತಕ್ಕೆ ಹೋಗಿ ಅಲ್ಲಿಯ ಸರಕಾರೀ ಸೈನ್ಯವನ್ನು ಒಡಕೊಂಡು ಪಿಡ್‌ಮಾಂಟದ ಮೇಲೆ ದಂಡೆತ್ತಿ ಹೋಗಬೇಕೆಂಬ ವಿಚಾರವಿತ್ತು. ಅದೇ ವೇಳೆಯಲ್ಲಿ ಜಿನೋವ್ಹಾ, ನೇಪಲ್ಸ ಮೊದಲಾದ ಕೆಲವು ಪಟ್ಟಣಗಳಲ್ಲಿಯು ಜನರು ದಂಗೆಮಾಡುವಂತೆ ಗೊತ್ತಾಗಿತ್ತು. ಬಂಡುಗಾರರ ಸೈನ್ಯದ ನಾಯಕತ್ವವನ್ನು 'ರಾಮೊರಿನೊ' ಎಂಬ ಸೇನಾಪತಿಯ ಕಡೆಗೆ ಕೊಟ್ಟಿತು. ಆದರೆ ಆ ಸೇನಾಪತಿಯು ವ್ಯರ್ಥವಾಗಿ ಕಾಲವಿಲಂಬನೆ ಮಾಡಿ ವಿಶ್ವಾಸಘಾತ ಮಾಡಿದನು. ಬಂಡಿನ ಸಂಘಟನೆಗಾಗಿ ಮ್ಯಾಝಿನಿಯು ಹಗಲಿರುಳು ನಿದ್ರೆ ಇಲ್ಲದೆ ದುಡಿದನು. ಆದರೆ ಯೋಗ್ಯ ವೇಳೆಯು ಮೀರಿದ್ದರಿಂದ ಕಾರ್ಯಕ್ರಮವು ವಿಫಲವಾಯಿತು.

ಇದರಿಂದ ಮ್ಯಾಝಿನಿಗೆ ಅತ್ಯಂತ ವ್ಯಥೆಯಾಯಿತು. ಬಂಡಿನ ಸಿದ್ಧತೆಯ ಕಾಲಕ್ಕೆ ಉಂಟಾದ ಶ್ರಮದಿಂದಲೂ, ಚಿಂತೆಯಿಂದಲೂ, ಜಾಗರಣೆಯಿಂದಲೂ ಅವನಿಗೆ ಜಡ್ಡಾಯಿತು. ಅವನ ಪ್ರಕೃತಿಯು ಸ್ವಲ್ಪ ಸುಧಾರಿಸುವದರೊಳಗಾಗಿ ಸ್ವಿಸ್ ಸರಕಾರದವರು ಅವನಿಗೆ ತಮ್ಮ ದೇಶಬಿಟ್ಟು ಹೋಗಲಿಕ್ಕೆ ಆಜ್ಞೆಮಾಡಿದರು. ಯಾಕಂದರೆ ಬಂಡುಗಾರರಿಗೆ ಆಶ್ರಯಕೊಡುವದು ಯೋಗ್ಯವಲ್ಲೆಂದು ಎರಡನೇ ಸರಕಾರಗಳಿಂದ ಅವರಿಗೆ ಪತ್ರಗಳ ಮೇಲೆ ಪತ್ರಗಳು ಬಂದಿದ್ದವು. ಮ್ಯಾಝಿನಿಯ ಎಷ್ಟೋ ಅನುಯಾಯಿಗಳನ್ನೂ ದೇಶದಿಂದ ತಳ್ಳಿಹಾಕಿದರು.

ಮ್ಯಾಝಿನಿಯೂ ಅವನ ಜೊತೆಗಾರರೂ ಮಾತ್ರ ಗುಪ್ತವಾಗಿ ಅಲ್ಲಿಯೇ ನಿಂತರು. ಆದಷ್ಟು ಇಟಲಿಯ ಸಮೀಪಕ್ಕೆ ಇರುವದು ಅವನ ಕಾರ್ಯಕ್ರಮಕ್ಕೆ ಅವಶ್ಯಕವಾಗಿತ್ತು. ಮೂರು ವರ್ಷಗಳವರೆಗೆ ಅವನು ಒಂದು ಊರಿಂದ ಮತ್ತೊಂದು ಊರಿಗೆ ಹೋಗುತ್ತಾ ಅಜ್ಞಾತವಾಸದಲ್ಲಿ ಕಾಲ ಕಳೆದನು. ಎಷ್ಟೋ ಸಾರೆ ಪೋಲೀಸರು ಅವನ ಬೆನ್ನುಹತ್ತಿರುತ್ತಿದ್ದರು. ಅವನು ಕೆಲವೊಬ್ಬ ಸ್ನೇಹಿತನ ಮನೆಯಲ್ಲಿ ಹಗಲು ಹೊಸ್ತಲ ಹೊರಗೆ ಕಾಲುಹಾಕದೆ ಇರುತ್ತಿದ್ದನು. ರಾತ್ರಿ ಮಾತ್ರ ವೇಷಾಂತರದಿಂದ ಗುಡ್ಡಗಳಲ್ಲಿ ತಿರುಗಾಡಲಿಕ್ಕೆ ಹೋಗುತ್ತಿದ್ದನು.

ಅಜ್ಞಾತವಾಸದಿಂದ ಅವನ ಜೀವನವು ಅವನಿಗೆ ಬಹಳ ದುಃಖಮಯವಾಯಿತು. ಅವನ ಹಳೇ ಗೆಳೆಯರೆಲ್ಲಾ ಹೊರಟು ಹೋಗಿದ್ದರು. ಓದಲಿಕ್ಕೆ ಅವನಿಗೆ ಬೇಕಾದ ಪುಸ್ತಕಗಳೂ ಸಿಗುತ್ತಿದ್ದಿಲ್ಲ. ಇದರಲ್ಲಿ ಅವನಿಗೆ ದುಡ್ಡಿನ ಕೊರತೆಯೂ ಆಗುತ್ತಿತ್ತು. ಅವನ ತಾಯಿಯು ಅವನಿಗೆ ಸ್ವಲ್ಪ ದುಡ್ಡು ಕಳಿಸ

ತ್ತಿದ್ದಳು. ದೇಶಭ್ರಷ್ಟರಾದ ಬಾಂಧವರು ತಮ್ಮ ಕಷ್ಟಗಳನ್ನು ಅವನ ಮುಂದೊಡ್ಡಿ ದುಡ್ಡು ಕೇಳಲು ಅವರಿಗೆ ಇಲ್ಲೆನ್ನುವದು ಅವನಿಗೆ ಅಸಾಧ್ಯವು. 'ತರುಣ ಇಟಲಿಯು' ಪ್ರಚಾರಣೆಗೂ, ಪತ್ರವ್ಯವಹಾರಕ್ಕೂ ಬಹಳ ದುಡ್ಡು ಬೇಕಾಗುತ್ತಿತ್ತು. ಅವನು ಎಲ್ಲ ಸುಖವಿಲಾಸಗಳನ್ನೂ ಬಿಟ್ಟುಕೊಟ್ಟು ಬಡತನದಿಂದ ಇರಹತ್ತಿದನು. ಒಮ್ಮೊಮ್ಮೆ ಮಾತೃಭೂಮಿಯ ಸ್ಮರಣೆಯೂ, ಮನೆತನದ ಜನರ ಸ್ಮರಣೆಯೂ ಆಗಿ ಅವನಿಗೆ ಬಹಳ ದುಃಖವಾಗುತ್ತಿತ್ತು.

ಸೆವ್ಹೊಯದ ಸಂಚು ಕೆಟ್ಟುಹೋದದ್ದರಿಂದ ಅವನ ಅನುಯಾಯಿಗಳು ಹತಾಶರಾದರು. ವ್ಯರ್ಥವಾಗಿ ಪ್ರಾಣಹಾನಿಯನ್ನು ಮಾಡಿಸಿದ್ದಕ್ಕಾಗಿ ಜನರು ಅವನನ್ನು ದೂಷಿಸಹತ್ತಿದರು. ಈ ಸಂಚುಗಳ ಮೂಲಕ ಇಟಲಿಯ ಎಷ್ಟೋ ಮನೆತನಗಳು ಶೂನ್ಯಪ್ರಾಯವಾಗಿದ್ದವು. 'ರಫಿನಿ' ಮನೆತನದ ಮೂವರು ಅಣ್ಣತಮ್ಮಂದಿರಲ್ಲಿ ಒಬ್ಬನು ಆತ್ಮಹತ್ಯೆ ಮಾಡಿಕೊಂಡಿದ್ದನು. ಇಬ್ಬರು ಮ್ಯಾಝಿನಿಯ ಕೂಡ ದೇಶಾಂತರವಾಸಿಗಳಾಗಿದ್ದರು. ಪರಮಸಾಧ್ವಿಯಾದ ಇವರ ತಾಯಿಯು ಮನೆಯಲ್ಲಿ ಏಕಾಕಿನಿಯಾಗಿ ಸೂತಕದಲ್ಲಿ ಕಾಲಕ್ಷೇಪ ಮಾಡುತ್ತಿದ್ದಳು.

ಮ್ಯಾಝಿನಿಯ ಸ್ನೇಹಿತರು ಅವನಿಗೆ ಇಂಥ ಕಷ್ಟಪರಂಪರೆಯ ಮಾರ್ಗವನ್ನು ಬಿಟ್ಟುಕೊಡಲಿಕ್ಕೆ ಬೋಧಿಸಿದರು. ಅವನ ತಂದೆಯು ಬೆದರಿಕೆಹಾಕಿ ನೋಡಿದನು. ಅವನ ತಾಯಿಯು ಅಂಗಲಾಚಿ ಬೇಡಿಕೊಂಡಳು. ಶಾಂತರೀತಿಯಿಂದ ಚಳವಳಿಯನ್ನು ಮಾಡಿ ಲೋಕಶಿಕ್ಷಣವನ್ನು ಕೊಡುವದು ಮ್ಯಾಝಿನಿಗೆ ಬೇಡಾದ ವಿಷಯವಿದ್ದಿಲ್ಲ. ಆದರೆ ಭಾಷಣಸ್ವಾತಂತ್ರ್ಯ, ಮುದ್ರಣಸ್ವಾತಂತ್ರ್ಯಗಳಿಲ್ಲದ ದೇಶವಲ್ಲಿ ಇಂಥ ಕೆಲಸಗಳನ್ನು ಮಾಡುವದು ವ್ಯರ್ಥಶ್ರಮವೆಂದು ಅವನಿಗೆ ಅನಿಸಿತು. ತನ್ನ ದೇಶಬಾಂಧವರಲ್ಲಿ ಜಾಗ್ರತಿಯುಂಟಾಗಿ ಅವರು ಕಾರ್ಯಕ್ಕೆ ಹತ್ತಬೇಕಾದರೆ, ತಾನು ಸ್ವತಃ ಅವರ ಸಲುವಾಗಿ ಮತ್ತು ಪವಿತ್ರ ಉದ್ದಿಷ್ಟಗಳ ಸಲುವಾಗಿ ಕಷ್ಟಪರಂಪರೆಗಳನ್ನು ಅನುಭವಿಸಬೇಕು; ಎಂಥ ಎಡರು ಬಂದರೂ ಹಿಂದಕ್ಕೆ ಕಾಲಿಡಬಾರದು. ಜನರು ಎಷ್ಟು ವಿಮನಸ್ಕರಾದರೂ ತಾನು ಎದೆಗುಂದಬಾರದು. ಇಂಥ ಒಂದು ಜೀವನಕ್ರಮದ ಉದಾಹರಣೆಯನ್ನು ಜನರ ಮುಂದ ಆಚರಿಸಿ ತೋರಿಸದ ಹೊರ್ತು ಲೋಕಜಾಗೃತಿಯಾಗಲಾರದು. ಈ ಪ್ರಕಾರ ಮ್ಯಾಝಿನಿಯು ಯೋಚಿಸಿದನು.

ಈ ವೇಳೆಯಲ್ಲಿ ಅವನು ಸ್ವಿಸ್ ರಾಜಕಾರಣದಲ್ಲಿ ಮನಸ್ಸುಹಾಕಿದನು. ಸ್ವಿಡ್ಝರ್ಲಂಡವು ಲೋಕಸತ್ತಾತ್ಮಕವಾಗಿದ್ದು ಅದರಲ್ಲಿರುವ ಪ್ರಾಂತಗಳ ಪರಸ್ಪರ ಸಂಬಂಧವು ಬಹಳ ಸಿಥಿಲವಾಗಿತ್ತು. ಅವುಗಳ ಸಂಬಂಧವು ಹೆಚ್ಚು ದೃಢವಾಗಲಿಕ್ಕೂ, ಸ್ವಿಡ್ಝರ್ಲಂಡ ಮಹಾಸಭೆಗೆ ಜನರೇ ಪ್ರತಿನಿಧಿಗಳನ್ನು ಕಳಿಸಲಿಕ್ಕೂ ಅವನು ಬೋಧಿಸಿದನು. ಇದರ ಸಲುವಾಗಿ ಅವನು ಒಂದು ವರ್ತಮಾನ ಪತ್ರವನ್ನು ಹೊರಡಿಸಿದನು. ಆದರೆ ಅದು ಒಂದು ವರ್ಷ ನಡೆಯುವದರೊಳಗಾಗಿ ಸ್ವಿಸ್‌ಸರಕಾರದವರು ಅದನ್ನು ಬಂದುಮಾಡಿದರು; ಮತ್ತು ಮ್ಯಾಝಿನಿಗೆ ದೇಶ ಬಿಟ್ಟು ಹೋಗಲಿಕ್ಕೆ ಪುನಃ ಆಜ್ಞಾಪಿಸಿದರು.

ಈ ವೇಳೆಯಲ್ಲಿ ಮ್ಯಾಝಿನಿಯು ಇಟಲಿ, ಜರ್ಮನಿ ಮತ್ತು ಪೋಲಂಡಗಳ ಜನರಿಂದ ಕೂಡಿದ 'ತರುಣ ಯುರೋಪ' ಎಂಬ ಸಂಘವನ್ನು ತೆಗೆದನು. ಈ ಎಲ್ಲ ದೇಶಗಳ ಲೋಕಸತ್ತಾವಾದಿಗಳು ತಮ್ಮ ಉದ್ದಿಷ್ಟಕ್ಕಾಗಿ ಕೂಡಿ ಕೆಲಸ ಮಾಡಬೇಕೆಂದು ಅವನ ವಿಚಾರವಿತ್ತು. ಈ ಸಂಘದಿಂದ ಬೇರೆಬೇರೆ ಜನಾಂಗಗಳ ಬಹುಜನ ಸಮಾಜಗಳಿಗೆ ತಮ್ಮೆಲ್ಲರ ಹಿತಸಂಬಂಧಗಳು ಒಂದೇ ಇರುತ್ತವೆಂಬ ತಿಳುವಳಿಕೆಯಾಗಲಿಕ್ಕೂ, ಅವರಲ್ಲಿ ಸಹಾನುಭೂತಿಯುಂಟಾಗಲಿಕ್ಕೂ ಕಾರಣವಾಯಿತು.

ಈ ವೇಳೆಯಲ್ಲಿ ಮ್ಯಾಝಿನಿಯು ವಾಙ್ಮಯಸೇವೆಯನ್ನು ಬಿಟ್ಟಿದ್ದಿಲ್ಲ ಇಟಲಿಯಲ್ಲಿಯ ನಾಸ್ತಿಕವಾದವನ್ನೂ ಜಡವಾದವನ್ನೂ ಖಂಡಿಸಲಿಕ್ಕೂ, ನಿಜವಾದ ಧಾರ್ಮಿಕ ಭಾವನೆಗಳನ್ನು ಪ್ರಸಾರಮಾಡಲಿಕ್ಕೂ ಅನೇಕ ಲೇಖಗಳನ್ನು ಬರೆದನು.

ಮ್ಯಾಝಿನಿಯು ಸ್ತ್ರೀಯರ ಬಗ್ಗೆ ಬಹಳ ಪೂಜ್ಯಬುದ್ಧಿಯುಳ್ಳವನಾಗಿದ್ದನು. ವಿವಾಹವು ಪವಿತ್ರವಾದ ಸಂಬಂಧವೆಂತಲೂ, ಅದು ನಮ್ಮ ಜೀವಿತದ ಉದ್ದಿಷ್ಟಗಳನ್ನು ಸಾಧಿಸಲಿಕ್ಕೆ ಉತ್ತಮವಾದ ಸಾಧನವೆಂತಲೂ ಅವನು ಒಂದು ಪತ್ರದಲ್ಲಿ ಬರೆದಿದ್ದಾನೆ. ಆದರೆ ಸ್ವತ: ಅವನು ಕಡೆತನಕ ಅವಿವಾಹಿತನಾಗಿಯೇ ಉಳಿದನು. ಅವನ ಶಾರೀರಿಕ ಮಾನಸಿಕ ನೈತಿಕಶಕ್ತಿಗಳೆಲ್ಲ ದೇಶಕಾರ್ಯಕ್ಕೆ ಅರ್ಪಿತವಾಗಿದ್ದವು. ದೇಶವು ಪಾರತಂತ್ರ್ಯದಲ್ಲಿ ಹೊರಳಾಡುತ್ತಿರುವಾಗ ತಾನು ಗೃಹಸೌಖ್ಯದಲ್ಲಿ ಚಕ್ಕಂದಮಾಡುವದು ಆ ಮಹಾತ್ಮನಿಗೆ ಸರಿಬೀಳಲಿಲ್ಲ.

## ೫ನೇ ಪ್ರಕರಣ.

## ಲಂಡನ್.

ಸ್ವಿಡ್ಝರ್ಲಂಡದ ಅಜ್ಞಾತವಾಸಕ್ಕೆ ಬೇಸತ್ತವನಾಗಿ ಮ್ಯಾಝಿನಿಯು ರಫಿನೀ ಬಂಧುಗಳೊಡನೆ ೧೮೩೭ರಲ್ಲಿ ಲಂಡನಕ್ಕೆ ಬಂದನು. ಇಲ್ಲಿ ಪೋಲೀಸರ ತೊಂದರೆಯಿಲ್ಲದೆ ಸ್ವತಂತ್ರತೆಯಿಂದ ಅಡ್ಡಾಡಲಿಕ್ಕೆ ಅವನಿಗೆ ಸಾಧ್ಯವಿತ್ತು. ಆದರೆ ಸ್ವಿಡ್ಝರ್ಲಂಡದ ಅಪ್ರತಿಮ ಸೃಷ್ಟಿಶೋಭೆಯು ಮತ್ತು ಶಾಂತಿಮಯ ಪ್ರದೇಶದಲ್ಲಿ ಇಷ್ಟು ದಿವಸ ಇದ್ದ ಮ್ಯಾಝಿನಿಗೆ ಲಂಡನ್ನದ ಒಂದು ಹಿಂದಿನ ಓಣಿಯಲ್ಲಿ ಆಕಾಶದ ದರ್ಶನವಿಲ್ಲದೆ ಮನೆಯ ಉಪ್ಪರಿಗೆಗಳನ್ನು ನೋಡುತ್ತ ಇರುವದು ಅವನಿಗೆ ಆರಂಭಕ್ಕೆ ಬಹಳ ದುಃಸಹವೆನಿಸಿತು.

ಇವರು ಮೂರು ವರ್ಷಗಳವರೆಗೆ ಜಾರ್ಜಸ್ಟ್ರೀಟ್ ಎಂಬಲ್ಲಿ ಇರುತ್ತಿದ್ದರು. ಇವರ ಮನೆಯಲ್ಲಿ ಒಬ್ಬ ಒಕ್ಕಲಗಿತ್ತಿಯು ಎಲ್ಲ ಮನೆಯ ಕೆಲಸಗಳನ್ನು ಸಾಗಿಸುತ್ತಿದ್ದಳು. ಇವರಿಗೆ ಇಂಗ್ಲಿಷ ಭಾಷೆಯು ಚನ್ನಾಗಿ ಬರುತ್ತಿದ್ದಿಲ್ಲವಾದ್ದರಿಂದ ಇವರಿಗೆ ಬಹಳ ತೊಂದರೆಯಾಗುತ್ತಿತ್ತು. ಇದಲ್ಲದೆ ರಫಿನೀಬಂಧುಗಳ ಮನಸ್ಸು ಅಷ್ಟು ಉದಾರವಿದ್ದಿಲ್ಲವಾದ ಕಾರಣ ಮನೆಯಲ್ಲಿ ಮೇಲಿಂದ ಮೇಲೆ ಮನಸ್ತಾಪವು ಆಗುತ್ತಿತ್ತು. ಶಾಂತವೃತ್ತಿಯ ಮ್ಯಾಝಿನಿಯು ಅವರೆಲ್ಲರ ವಿಕ್ಷಿಪ್ತತನವನ್ನು ಸಹನಮಾಡಿಕೊಂಡು ಹೋಗುತ್ತಿದ್ದನು.

ಇಲ್ಲಿ ಇರುವಾಗ ಮ್ಯಾಝಿನಿಯು "ಬ್ರಿಟಿಶ್ ಮ್ಯುಝಿಯುಮ್‌ದ" (ವಸ್ತುಸಂಗ್ರಹಾಲಯದ) ಹೊರ್ತಾಗಿ ಎಲ್ಲಿಯೂ ಹೋಗುತ್ತಿರಲಿಲ್ಲ. ಕೆಲವು ದೇಶಾಂತರವಾಸಿಗಳಾದ ಇಟಾಲಿಯನ್ನರ ಹೊರ್ತು ಅವನಿಗೆ ಯಾರ ಪರಿಚಯವೂ ಇದ್ದಿಲ್ಲ. ಅವನು ಬಹಳೇ ಬಡವನಾಗಿದ್ದನು. ಅವನ ತಂದೆಯು ಎಣ್ಣೆಯ ವ್ಯಾಪಾರ ಮಾಡಲಿಕ್ಕೆ ಹಣ ಕಳಿಸಿದನು. ಇದರೆ ಮ್ಯಾಝಿನಿಯು ಅದನ್ನೆಲ್ಲ ನಿರಾಶ್ರಿತರಾದ ಜನರಿಗೆ ಕೊಟ್ಟು ವೆಚ್ಚಮಾಡಿಬಿಟ್ಟನು. ಅವನ ತಂದೆಯು ಅವನಿಗೆ ಸಿಟ್ಟಿನಿಂದ ಒಂದು ಪತ್ರಬರೆದನು. ಅನಂತರ ಮ್ಯಾಝಿನಿಯು ಹಣಕ್ಕಾಗಿ ಮನೆಗೆ ಪತ್ರವನ್ನೇ ಬರೆಯಲಿಲ್ಲ. ಆ ಮೇಲೆ ಇಂಗ್ಲಿಷ ಮಾಸಿಕಗಳಲ್ಲಿ ಲೇಖಗಳನ್ನು ಬರೆದುಕೊಡಹತ್ತಿದನು. ಆದರೆ ಭಾಷಾಂತರ ಮಾಡುವವರಿಗೆ ಕೊಡುವ ಖರ್ಚು ಹೋಗಲಾಗಿ

ಅವನಿಗೆ ಬಹಳ ಸ್ವಲ್ಪ ಹಣವು ಉಳಿಯುತ್ತಿತ್ತು. ಸಿರಾಶ್ರಿತರಾದ ಇಟಾಲಿಯನ್ನರು ಅವನ ಕಡೆಗೆ ಮೇಲಿಂದ ಮೇಲೆ ಬರುತ್ತಿದ್ದರು. ಅವರಿಗೆ ಇಲ್ಲೆನ್ನುವದು ಅವನಿಗೆ ಬಲು ಕಷ್ಟವು. ಅವನಿಗೆ ದುಡ್ಡಿನ ಕೊರತೆಯು ಬಹಳವಾಗಿ ಮನೆಯೊಳಗಿನ ಸಾಮಾನುಗಳನ್ನು ಒತ್ತೀ ಹಾಕಬೇಕಾಯಿತು. ಉಂಗರ, ವಾಚ್, ಪುಸ್ತಕಗಳು, ನಕಾಶಗಳು ಎಲ್ಲಾ ಅಡವುಬಿದ್ದವು. ಒಂದು ಸಾರೆ ಮರುದಿವಸದ ಊಟಕ್ಕಾಗಿ ಅವನಿಗೆ ಬೂಟುಗಳನ್ನೂ, ವಾಸ್ಕೋಟನ್ನೂ ಒತ್ತೀ ಇಡಬೇಕಾಯಿತು. ಒಮ್ಮೊಮ್ಮೆ ಹಾಕಿಕೊಳ್ಳಲಿಕ್ಕೆ ಸಾಕಷ್ಟು ಅರಿವೆಗಳು ಇಲ್ಲದ್ದರಿಂದ ಅವನು ಬ್ರಿಟಿಶ್ ಮ್ಯೂಝಿಯುಮ್‌ಕ್ಕೆ ಹೋಗುವದನ್ನು ಬಿಟ್ಟು ಮನೆಯಲ್ಲಿಯೇ ಇರಬೇಕಾಗುತ್ತಿತ್ತು. ಅವನ ಸ್ನೇಹಿತರು ಅವನಿಗೆ ಸಾಲಕೊಟ್ಟುಕೊಟ್ಟು ಬೇಸತ್ತು ಹೋದರು. ಒಮ್ಮೆ ಟ್ಯೂರಿನ್ ಪಟ್ಟಣದ ಜನರು ವರ್ಗಣೀ ಮಾಡಿ ಹಣಕಳಿಸಲು ಅವನು ಅದನ್ನು ಸ್ವೀಕರಿಸಲಿಲ್ಲ. ಅವನ ಸಾಲವು ಬೆಳೆಯುತ್ತ ಹೋಯಿತು.

ಮುಂದೆ ಕೆಲವು ದಿವಸಗಳ ಮೇಲೆ ಅವನು ಮತ್ತೊಂದು ಬೀದಿಯಲ್ಲಿ ಇರಲಿಕ್ಕೆ ಹೋದನು. ರಫಿನೀ ಬಂಧುಗಳಲ್ಲಿ ಒಬ್ಬನು ಉದ್ಯೋಗಕ್ಕಾಗಿ ಎಡಿನ್‌ಬರೋ ಪಟ್ಟಣಕ್ಕೆ ಹೋದನು. ಮತ್ತೊಬ್ಬನು ಸಹ ಮ್ಯಾಝಿನಿಯ ಸಂಗಡ ಜಗಳವಾಡಿ ಪ್ಯಾರಿಸಕ್ಕೆ ಹೊರಟುಹೋದನು. ರಫಿನೀ ಬಂಧುಗಳ ತಾಯಿಯು ಮೇಲೆ ಮ್ಯಾಝಿನಿಯು ಪ್ರೇಮವೂ ಪೂಜ್ಯಬುದ್ಧಿಯೂ ಬಹಳವಾಗಿತ್ತು. ಆಕೆಯು ಇವನ ಕೆಲಸದಲ್ಲಿ ಬಹು ಸಹಾನುಭೂತಿಯುಳ್ಳವಳಾಗಿ ಮೇಲಿಂದ ಮೇಲೆ ಶಾಂತಿದಾಯಕ ಪತ್ರಗಳನ್ನು ಬರೆಯುತ್ತಿದ್ದಳು. ಆದರೆ ಮುಂದೆ— ಮಕ್ಕಳ ಹೇಳಿಕೆಯಿಂದಲೋ ಏನೋ—ರಫಿನೀ ತಾಯಿಯು ಮನಸ್ಸು ಮ್ಯಾಝಿನಿಯ ವಿಷಯಕ್ಕೆ ಕಲುಷಿತವಾದದ್ದರಿಂದ ಅವರ ನಡುವಿನ ಪತ್ರವ್ಯವಹಾರವು ನಿಂತುಹೋಯಿತು. ಇದರಿಂದ ಮ್ಯಾಝಿನಿಯ ಅಂತ:ಕರಣಕ್ಕೆ ಬಹಳ ವ್ಯಥೆಯಾಯಿತು. ಇದೇ ವೇಳೆಯಲ್ಲಿ ಅವನ ಒಬ್ಬ ಅವಿವಾಹಿತಳಾದ ತಂಗಿಯು ತೀರಿಹೋದಳು. ಅವಳಾದರೂ ಮ್ಯಾಝಿನಿಯ ಕೆಲಸದಲ್ಲಿ ಪೂರಾ ಮೆಚ್ಚಿದವಳಾಗಿ ಅವನಿಗೆ ಉತ್ತೇಜನಪರವಾದ ಪತ್ರಗಳನ್ನು ಬರೆಯುತ್ತಿದ್ದಳು. ಅವಳ ಮರಣದಿಂದಲೂ, ದು:ಖಿತರಾದ ಮುಪ್ಪಿನ ತಾಯಿತಂದೆಗಳ ಸೇವೆಯನ್ನು ತಾನು ಮಾಡಲಾರೆನೆಂಬ ಆಲೋಚನೆಯಿಂದಲೂ, ಇಂಗ್ಲಂಡದಲ್ಲಿ ಯಾರೂ ಸ್ನೇಹಿತರು ಇಲ್ಲದ್ದರಿಂದಲೂ ಮ್ಯಾಝಿನಿಯು

ಒಮ್ಮೊಮ್ಮೆ ಬಹಳ ಶೋಕಾಕುಲನಾಗುತ್ತಿದ್ದನು. ಆದರೆ ಅವನ ಉದಾತ್ತವಾದ ತತ್ವಜ್ಞಾನವು ಅವನ ಹೃದಯವನ್ನು ಎತ್ತಿ ಹಿಡಿಯುತ್ತಿತ್ತು.

ಬರಬರುತ್ತ ಮ್ಯಾಝಿನಿಗೆ ಸ್ನೇಹಿತರು ದೊರೆಯಹತ್ತಿದರು. ಅವನಿಗೆ ಇಂಗ್ಲಿಷ ಜನರ ಗುಣದೋಷಗಳು ಗೊತ್ತಾಗಹತ್ತಿದವು ಇಂಗ್ಲಿಷ ಜನರೆಂದರೆ ಜಡವಾದಿಗಳು, ಸುಖವಾದಿಗಳು; "ಬಹು ಜನರ ಬಹುಸುಖ" ವೆಂಬ ತತ್ವದ ಹೊರತು ಅವರಿಗೆ ಎರಡನೇ ನೀತಿತತ್ವವು ಗೊತ್ತಿರಲಿಲ್ಲ," ಎಂದು ಮ್ಯಾಝಿನಿಯ ಗ್ರಹಿಕೆಯಾಗಿತ್ತು. ಆದರೆ ಅವರ ಪರಮತಸಹಿಷ್ಣುತೆಯನ್ನೂ, ದೃಢನಿಶ್ಚಯವನ್ನೂ, ಸ್ವಾತಂತ್ರ್ಯಪ್ರೀತಿಯನ್ನೂ ನೋಡಿ ಅವರ ವಿಷಯಕ್ಕೆ ಅವನಿಗೆ ಆದರವೆನಿಸುತ್ತಿತ್ತು. "ಇಂಗ್ಲಂಡದಲ್ಲಿ ಮಿತ್ರತ್ವವು ಬಲು ಸಾವಕಾಶವಾಗಿ ಕೂಡುತ್ತದೆ. ಆದರೆ ಒಮ್ಮೆ ಕೂಡಿದ ಮೇಲೆ ಬಹಳ ದಿವಸ ನಡೆಯುತ್ತದೆ," ಎಂದು ಅವನು ಅನ್ನುತ್ತಿದ್ದನು. ಅವನ ದೇಶಾಂತರವಾಸವೆಲ್ಲ ಬಹುತರವಾಗಿ ಇಂಗ್ಲಂಡದಲ್ಲಿಯೇ ಕಳೆಯಲ್ಪಟ್ಟಿತು. ಇಂಗ್ಲಂಡವು ಅವನಿಗೆ ಎರಡನೇ ಮಾತೃಭೂಮಿಯಾಗಿತ್ತು.

ಮೊದಮೊದಲು ಮ್ಯಾಝಿನಿಗೂ ಕಾರ್ಲಾಯಿಲ ದಂಪತಿಗಳಿಗೂ ಸ್ನೇಹ ಕೂಡಿತು. ಕಾರ್ಲಾಯಿಲನ ಹೆಂಡತಿಯು ಮ್ಯಾಝಿನಿಯ ಕೂಡ ಅಕ್ಕತಂಗಿಯರಂತೆ ನಡಕೊಳ್ಳುತ್ತಿದ್ದಳು. ಅವನು ಸಂಕಟದಲ್ಲಿ ಅಥವಾ ಚಿಂತೆಯಲ್ಲಿ ಇದ್ದಾಗ ಅವನಿಗೆ ಸಮಾಧಾನ ಹೇಳಿ ಅವನ ಮನಸ್ಸು ಉಲ್ಲಸಿತವಾಗುವಂತೆ ಮಾಡುತ್ತಿದ್ದಳು. ಕಾರ್ಲಾಯಿಲನೂ ಮ್ಯಾಝಿನಿಯ ಸ್ವಭಾವಕ್ಕೆ ಬಹಳ ಮೆಚ್ಚಿದವನಾಗಿದ್ದನು. ಆದಿಭೌತಿಕ ಸುಖವಾದ, ಜಡವಾದ, ಆತ್ಮಶ್ರೇಷ್ಠತ್ವ ಇವುಗಳ ಬಗ್ಗೆ ಇಬ್ಬರ ಮತಗಳೂ ಕೂಡಿದವು. ಆದರೆ ಕಾರ್ಲಾಯಿಲನ ವ್ಯಕ್ತಿಶ್ರೇಷ್ಠತ್ವವಾದವೂ, ಮಾನವಜಾತಿಯ ಪ್ರಗತಿಯ ಬಗ್ಗೆ ಅವಿಶ್ವಾಸವೂ ಮ್ಯಾಝಿನಿಗೆ ಸರಿಬೀಳಲಿಲ್ಲ. ಆದರೆ ಇಬ್ಬರೂ ಪರಸ್ಪರ ಸ್ವಭಾವದ ಬಗ್ಗೆ ಆದರವುಳ್ಳವರಾಗಿದರು. ಒಮ್ಮೆ ಪಾರ್ಲಿಮೆಂಟಿನ ಕೆಲವು ಸಭಾಸದರು ಮ್ಯಾಝಿನಿಯ ಸ್ವಭಾವದ ಬಗ್ಗೆ ಸಂಶಯ ತೆಗೆದುಕೊಳ್ಳಲು, ಆಗ ಕಾರ್ಲಾಯಿಲನು ಟಾಯಿಮ್ಸ ಪತ್ರಕ್ಕೆ ಬರೆದದ್ದೇನಂದರೆ— "ಮ್ಯಾಝಿನಿಯ ವ್ಯವಹಾರಜ್ಞಾನವೂ ಚಾತುರ್ಯವೂ ಹ್ಯಾಗೇ ಇರಲಿ, ಅವನಂಥ ಲೋಕೋತ್ತರ ಬುದ್ಧಿಶಾಲಿಯೂ, ಸದಾಚಾರಶೀಲನೂ, ಸತ್ಯವಂತನೂ, ಕಾರುಣಿಕನೂ, ಉದಾರಮನಸ್ಸಿನವನೂ ಆದ ಇನ್ನೊಬ್ಬ ಮನುಷ್ಯನನ್ನು

ನಾನು ಕಂಡಿಲ್ಲ. ಅವನಂಥ ಜನರು ಜಗತ್ತಿನಲ್ಲಿ ಅಪರೂಪ. ತತ್ವಕ್ಕಾಗಿ ಜೀವಕೊಡುವವರಲ್ಲಿ ಮ್ಯಾಝಿನಿಯು ಒಬ್ಬನಾಗಿದ್ದಾನೆ."

ಇದರಂತೆ ಅನೇಕ ಸುಸಂಸ್ಕೃತರಾದ ಸ್ತ್ರೀಪುರುಷರ ಮಿತ್ರತ್ವವೂ ಸಹವಾಸವೂ ಮ್ಯಾಝಿನಿಗೆ ಸಿಗಹತ್ತಿತು. ಲಾಮೆನೆಸ್ ಎಂಬ ಫ್ರೆಂಚ ತತ್ವಜ್ಞಾನಿಯೂ, ಜಾರ್ಜ ಸ್ಯಾಂಡ ಎಂಬ ಫ್ರೆಂಚ ನೀತಿಗ್ರಂಥಕಾರಳೂ ಇದೇ ವೇಳೆಯಲ್ಲಿ ಇವನಿಗೆ ಭೆಟ್ಟಿಯಾದರು. ಇವರಿಬ್ಬರ ಗ್ರಂಥಗಳ ಬಗ್ಗೆ ಮ್ಯಾಝಿನಿಯು ಅತ್ಯಾದರವುಳ್ಳವನಾಗಿದ್ದನು. ಲಾಮೆನೆಸ್‌ನ ಪುಸ್ತಕದಿಂದ ಪ್ರೇರಣೆಯನ್ನು ಹೊಂದಿ ಮ್ಯಾಝಿನಿಯು ತನ್ನ "ಮನುಷ್ಯನ ಕರ್ತವ್ಯಗಳು" ಎಂಬ ಅತ್ಯಂತ ಬೋಧಕವಾದ ನೀತಿಗ್ರಂಥವನ್ನು ರಚಿಸಿದನೆಂದು ಹೇಳಬಹುದು. ಜಾರ್ಜ ಸ್ಯಾಂಡಳು ತನ್ನ ಒಂದು ಗ್ರಂಥದಲ್ಲಿ "ಸದ್ಗುಣವು ಒಂದೇ ಇರುತ್ತದೆ. ಅದಾವದೆಂದರೆ, ನಿರಂತರವಾದ ಆತ್ಮಯಜ್ಞವು," ಎಂದು ಬರೆದಿದ್ದಾಳೆ. ಈಕೆಯ ಉಕ್ತಿಯು ಮ್ಯಾಝಿನಿಯ ಬಾಯಿಂದ ಮೇಲಿಂದ ಮೇಲೆ ಬರುತ್ತಿತ್ತು.

ಇಟಲಿಯಲ್ಲಿ ರಾಷ್ಟ್ರಜಾಗೃತಿಯ ಗ್ರಂಥಗಳನ್ನು ಬರೆದ ಪಾಸ್ಕೋಲೋ ಎಂಬ ಲೇಖಕನ ಬಗ್ಗೆ ಮ್ಯಾಝಿನಿಗೆ ಬಹಳ ಪೂಜ್ಯಬುದ್ಧಿಯಿತ್ತು. ಅವನ ಸಮಗ್ರ ಚರಿತ್ರವನ್ನು ಬರೆಯಬೇಕೆಂದು ಮನಸ್ಸುಮಾಡಿ ಮ್ಯಾಝಿನಿಯು ಅವನ ಗ್ರಂಥಗಳನ್ನೂ, ಹಸ್ತಲಿಖಿತ ಪತ್ರಗಳನ್ನೂ ಕಲೆಹಾಕಲಿಕ್ಕೆ ಎಷ್ಟೋ ದಿವಸ ಪ್ರಯತ್ನನಡಿಸಿದನು. ಆದರೆ ರಾಜಕಾರಣವೂ, ಸಮಾಜಕಾರ್ಯವೂ ಒತ್ತರಿಸಿ ಬರಲು ಅವನಿಂದ ಈ ಕೆಲಸವನ್ನು ಕೊನೆಗಾಣಿಸುವದು ಆಗಲಿಲ್ಲ.

ಮ್ಯಾಝಿನಿಯು ಲಂಡನಕ್ಕೆ ಬಂದ ಮೇಲೆ 'ತರುಣ ಇಟಲಿ' ಯು ಕ್ಷೀಣವಾಗಹತ್ತಿತು. ಎಷ್ಟೋ ಜನರು ಸರಕಾರದವರ ಕೂಡ ಒಡಂಬಡಿಕೆಯನ್ನು ಮಾಡಿಕೊಂಡಿದ್ದರು. ಕೆಲವರು ವೇಳೆಯು ಅನುಕೂಲವಿಲ್ಲೆಂದು ತಟಸ್ಥರಾಗಿದ್ದರು. ತೀರ ಸ್ವಲ್ಪ ಜನರು ಹಿಂದಿನಂತೆ ಕೆಲಸ ಸಾಗಿಸಿದ್ದರು. ಇದನ್ನೆಲ್ಲ ಕೇಳಿ ಮ್ಯಾಝಿನಿಗೆ ಅತ್ಯಂತ ದುಃಖವಾಗುತ್ತಿತ್ತು. ಆದರೆ ವಾತಾವರಣವು ಎಷ್ಟು ನಿರಾಶಾಜನಕವಾಗಿ ಕಂಡಾಗ್ಯೂ ಸುಮ್ಮನೆ ಕೈಮುಚ್ಚಿಕೊಂಡು ಕೂಡ್ರುವದು ಮಹಾಪಾತಕವೆಂದು ಅವನು ಭಾವಿಸಿದನು. ದೇವರಿಗೂ, ರಾಷ್ಟ್ರದೇವತೆಗೂ, ಮನೋದೇವತೆಗೂ ಸಾಕ್ಷಿಯಾಗಿ ಮಾಡಿದ ತನ್ನ ದೇಶಕಾರ್ಯದ ಪ್ರತಿಜ್ಞೆಯನ್ನು ನೆನಪಿಗೆ ತಂದುಕೊಂಡು, ದೇವರ ಮೇಲೆ ಹಾಗೂ ತನ್ನ ಸತ್ಪಕ್ಷದ

ಮೇಲೆ ಪೂರ್ಣವಿಶ್ವಾಸವನ್ನಿಟ್ಟು ನಿರಂತರವಾಗಿ ಪ್ರಯತ್ನನಡಿಸುವದು ತನ್ನ ಧರ್ಮವೆಂದು ಅವನು ಎಣಿಸಿದನು.

ಮ್ಯಾಝಿನಿಯು ಪರದುಃಖವನ್ನು ಸಹನಮಾಡಲಾರದವನಾಗಿದ್ದನು. ಒಮ್ಮೆ ಚಳಿಗಾಲದಲ್ಲಿ ಮುಂಜಾನೆ ತಿರುಗಾಡಲಿಕ್ಕೆ ಹೋರಡಲು, ಒಬ್ಬ ತರುಣ ಸ್ತ್ರೀಯು ಗಡಗಡ ನಡಗುತ್ತ ಕೋಳಿಲ್ಲದೆ ನರಳುತ್ತ ಕೂತಿದ್ದನ್ನು ಅವನು ನೋಡಿದನು. ಕೂಡಲೆ ಅವನು ಆಕೆಯನ್ನು ಮನೆಯೊಳಗೆ ಕರೆದುಕೊಂಡು ಹೋಗಿ ಅನ್ನ ವಸ್ತ್ರಗಳನ್ನು ಕೊಡಿಸಿ ಅನಾಥಳಾದ ಆವಳನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡನು. ಮುಂದೆ ಆಕೆಯ ಮದುವೆಯಾಗಿ ಆಕೆಯ ಗಂಡನು ಆಕೆಯನ್ನು ಬಿಟ್ಟುಬಿಡಲು, ಆಕೆಯ ಮಕ್ಕಳ ವಿದ್ಯಾಭ್ಯಾಸಕ್ಕೆ ತಾನೇ ರೊಕ್ಕ ಕೊಡುತ್ತಿದ್ದನು. ಲಂಡನದಲ್ಲಿ ಅವನಿಗೆ ಅನೇಕ ಅನಾಥರಾದ ಇಟಾಲಿಯನ್ ಹುಡುಗರು ಭೆಟ್ಟಿಯಾಗುತ್ತಿದ್ದರು. ಕೆಲವು ಇಟಾಲಿಯನ್ ವರ್ತಕರು ಇವರಿಗೆ ಪಗಾರದ ಆಶೆಹಚ್ಚಿ ಇಂಗ್ಲಂಡಕ್ಕೆ ತಂದು, ಆ ಮೇಲೆ ಅವರನ್ನು ಹೊಡೆದು ಹೊಡೆದು ಹಣ್ಣು ಮಾಡಿ ಗುಲಾಮರಂತೆ ದುಡಿಸುತ್ತಿದರು. ಮ್ಯಾಝಿನಿಯು ಇಂಥ ಕೆಲವು ಅಪರಾಧಿಗಳನ್ನು ಗೊತ್ತುಹಚ್ಚಿ ಸರಕಾರದಿಂದ ಅವರಿಗೆ ಶಿಕ್ಷೆಮಾಡಿಸಿದನು; ಮತ್ತು ಉಳಿದವರಿಗೆ ಬೆದರಿಕೆ ಹಾಕಿದನು. ಇದರಿಂದ ಈ ಗುಲಾಮರ ವ್ಯವಸಾಯವು ಕಟ್ಟಾಯಿತು.

೧೮೪೧ರಲ್ಲಿ ಮ್ಯಾಝಿನಿಯು ಇಟಲಿಯ ಬಡಹುಡುಗರಿಗಾಗಿ ಲಂಡನದಲ್ಲಿ ಒಂದು ರಾತ್ರೀಶಾಲೆಯನ್ನು ತೆಗೆದನು. ಅಲ್ಲಿ ಅವರಿಗೆ ಓದುಬರಹ, ಗಣಿತ, ಇಟಲಿಯ ಇತಿಹಾಸ, ಚಿತ್ರಕಲೆ ಮೊದಲಾದ ವಿಷಯಗಳನ್ನು ಕಲಿಸುತ್ತಿದ್ದನು. ಆ ಹುಡುಗರು ಮ್ಯಾಝಿನಿಯನ್ನು ತಂದೆಯಂತೆ ತಿಳಿಯುತ್ತಿದ್ದರು. ಮ್ಯಾಝಿನಿಯ ಕೆಲವು ಸ್ನೇಹಿತರು ಈ ಶಾಲೆಯಲ್ಲಿ ಧರ್ಮಾರ್ಥ ಕೆಲಸಮಾಡುತ್ತಿದ್ದರು. ಪ್ರಸಿದ್ಧ ಗಾಯನಪಟುಗಳು ಈ ಶಾಲೆಯ ಫಂಡಿಗಾಗಿ ಗಾನಗಳನ್ನು ಮಾಡಿ ದುಡ್ಡು ಕೂಡಿಸಿ ಕೊಡುತ್ತಿದ್ದರು. ವರ್ಷಕ್ಕೊಮ್ಮೆ ಆಗುವ ಈ ಶಾಲೆಯ ಸಮ್ಮೇಲನವು ಹುಡುಗರಿಗೆ ಉತ್ಸವದ ದಿವಸವಾಗಿತ್ತು.

ಲಂಡನದಲ್ಲಿದ್ದ ಕೂಲಿಕಾರರಿಗಾಗಿ ಮ್ಯಾಝಿನಿಯು ಒಂದು ರಾಜಕೀಯ ಸಂಸ್ಥೆಯನ್ನು ತೆಗೆದನು. ಆ ಸಂಸ್ಥೆಯ ಪರವಾಗಿ ಒಂದು ವರ್ತಮಾನಪತ್ರವನ್ನು ನಡಿಸಿದನು. ಅದರಲ್ಲಿ ಇವನು ಇಟಲಿಯ ಕೂಲಿಕಾರರನ್ನೂ, ಕಸಬು

ದಾರರನ್ನೂ ಉದ್ದೇಶಿಸಿ ಬಹು ಸ್ಫೂರ್ತಿದಾಯಕವಾದ ಲೇಖಗಳನ್ನು ಬರೆದು ಕಳಿಸುತ್ತಿದ್ದನು.

## ೭ ನೇ ಪ್ರಕರಣ.

## ರಾಜ್ಯಕ್ರಾಂತಿಯ ಪ್ರಯತ್ನವು.

ಈ ಪ್ರಕಾರ ಮ್ಯಾಝಿನಿಯು ಇಂಗ್ಲಂಡದಲ್ಲಿ ಕೆಲಸ ನಡಿಸಿರುವಾಗ ಇಟಲಿಯಲ್ಲಿ ರಾಷ್ಟ್ರೀಯ ಜಾಗ್ರುತಿಯ ಪ್ರವಾಹವು ಭರದಿಂದ ಸಾಗಿಬರುತ್ತಿತ್ತು. 'ತರುಣ ಇಟಲಿ' ಯು ಇವಕ್ಕೆ ಬಹು ಮಟ್ಟಿಗೆ ಕಾರಣವಾಗಿತ್ತು. ಆದರೆ ಮ್ಯಾಝಿನಿಯೊಬ್ಬನಿಂದಲೇ ಎಲ್ಲ ಪ್ರಗತಿಯಾಯಿತೆಂದು ಹೇಳಲಾಗದು. ಅವನ ಹೊರ್ತು ಬೇರೆ ದೇಶಭಕ್ತರು ಅನೇಕ ಲೇಖಗಳನ್ನೂ, ಪುಸ್ತಕಗಳನ್ನೂ ಬರೆದು ಚಳವಳಿಯನ್ನು ಮುಂದಕ್ಕೆ ಸಾಗಿಸಿದ್ದರು. ಅವರು ಮ್ಯಾಝಿನಿಯಷ್ಟು ದೂರವಾದ ಉದ್ದಿಷ್ಟದ ಮೇಲೆ ದೃಷ್ಟಿಯನ್ನಿಟ್ಟಿದ್ದಿಲ್ಲ. ಲೋಕಸತ್ತೆಯು ಅವರ ಗುರಿಯಾಗಿದ್ದಿಲ್ಲ. ರಾಜಸತ್ತೆಯು ಅವರಿಗೆ ಸಮ್ಮತವಾಗಿತ್ತು. ಪಿಡ್‌ಮಾಂಟದ ಅರಸನ ಅಥವಾ ಪೋಪನ ಆಧಿಪತ್ಯದ ಕೆಳಗೆ ಇಟಲಿಯು ಒಕ್ಕಟ್ಟಾಗಿ, ಆಸ್ಟ್ರಿಯನ್ನರನ್ನು ದೇಶದಿಂದ ಹೊರಗೆ ತಳ್ಳಿ ಸ್ವಾತಂತ್ರ್ಯವನ್ನು ಪಡೆಯುವದು ಅವರ ಉದ್ದಿಷ್ಟವಾಗಿತ್ತು. ಸಣ್ಣ ಪುಟ್ಟ ದಂಗೆಗಳನ್ನು ಮಾಡುವದರಿಂದ ವ್ಯರ್ಥವಾಗಿ ಪ್ರಾಣಹಾನಿಯಾಗುವದೆಂತಲೂ, ಇಂಥ ದಂಗೆಗಳಿಂದ ಸರಕಾರಗಳ ದಬ್ಬಾಳಿಕೆಯು ಹೆಚ್ಚುತ್ತ ಹೋಗುವದೆಂತಲೂ, ಯುದ್ಧ ವಿದ್ಯೆಯನ್ನು ಕಲಿತ ಸೈನ್ಯವಿಲ್ಲದೆ ಆಸ್ಟ್ರಿಯನ್ನರ ಕೂಡ ಯುದ್ಧ ಹೂಡುವದು ಹುಚ್ಚುತನವೆಂತಲೂ ಇವರು ಅನ್ನುತ್ತಿದ್ದರು. ಅನ್ಯರಾಷ್ಟ್ರದ ವಿಶೇಷತಃ ಫ್ರಾನ್ಸದ ಸಹಾಯವಿಲ್ಲದ ಹೊರ್ತು ತಮಗೆ ಸ್ವಾತಂತ್ರ್ಯವು ಸಿಗುವದಿಲ್ಲೆಂತಲೂ, ಅವರ ದಸೆಯಿಂದ ಹೇಗಾದರೂ ಮಾಡಿ ಫ್ರಾನ್ಸದ ಸಹಾಯವನ್ನು ಸಂಪಾದಿಸಬೇಕೆಂತಲೂ ಇವರು ದೃಢವಾಗಿ ನಂಬಿದ್ದರು. ಇವರ ಪಕ್ಷಕ್ಕೆ ಮಂದ ಪಕ್ಷ ಅಥವಾ ಮವಾಳ ಪಕ್ಷವೆಂದು ಅನ್ನಬಹುದು.

ಇಷ್ಟಾದರೂ ಜನರಲ್ಲಿ ಬಂಡು ಮಾಡುವ ಚಟವು ಇನ್ನೂ ಹೋಗಿದ್ದಿಲ್ಲ. ಮಧ್ಯ ಇಟಲಿಯು ಸಂಚುಗಳಿಂದ ತುಂಬಿಹೋಗಿತ್ತು. ಇಂಥ ವೇಳೆಯಲ್ಲಿ ಮ್ಯಾಝಿ

ನಿಯು ಒಂದು ಸಂಚು ಮಾಡಿದನು. ಪೋಪನ ಸಂಸ್ಥಾನಗಳಲ್ಲಿ ದಂಗೆ ಎಬ್ಬಿಸಬೇಕು, ಅದೇ ಕಾಲದಲ್ಲಿ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ದಂಗೆಗಳಾಗಬೇಕು, ಹೀಗೆ ಅವನ ಯುಕ್ತಿಯಾಗಿತ್ತು. ಅವನ ಸಂಚಿಗೆ ಸಾಕಷ್ಟು ಜನಸಹಾಯವು ಇನ್ನೂ ಸಿಕ್ಕಿರಲಿಲ್ಲ. ಅತಿ ಸ್ವಲ್ಪ ಜನರು ಮಾತ್ರ ಬಂದು ಕೂಡಿದ್ದರು. ಅವರಲ್ಲಿ ವ್ಹೇನಿಸದ ಹಡಗುಪಡೆಯಲ್ಲಿ ಮೇಲಧಿಕಾರಿಗಳಾದ 'ಬೆಂಡಿಯೆರಾ' ಬಂಧುಗಳು ಮುಖ್ಯರಾಗಿದ್ದರು. ಆದರೆ ಇಟಲಿಯ ಸರಕಾರದ ಗುಪ್ತಪೋಲೀಸರಿಂದಲೂ, ಇಂಗ್ಲಿಷ ಸರಕಾರದವರು ಮ್ಯಾಝಿನಿಯ ಪತ್ರಗಳನ್ನು ಒಡೆದು ನೋಡಿ ಅವುಗಳ ಗುಟ್ಟನ್ನು ನೇಪಲ್ಸ ಸರಕಾರಕ್ಕೆ ತಿಳಿಸಿದ್ದರಿಂದಲೂ ಸಂಚು ಬಹು ದುಃಖಕರವಾಗಿ ಮುರಿಯಿತು. 'ಬೆಂಡಿಯೆರಾ' ಬಂಧುಗಳು ಹಡಗದಿಂದ ಕ್ಯಾಲೆಬ್ರಿಯದ ದಂಡೆಯ ಮೇಲೆ ಇಳಿಯಲು ಅಧಿಕಾರಿಗಳು ಕೂಡಲೆ ಅವರನ್ನು ಹಿಡಿದು ಅವರಿಗೆ ಗುಂಡು ಹಾಕಿಬಿಟ್ಟರು.

ಇಂಗ್ಲಿಷ ಸರಕಾರದ ಈ ನಿಂದ್ಯಕೃತ್ಯದಿಂದ ಮ್ಯಾಝಿನಿಯು ಇಂಗ್ಲಿಷ ರಾಜಕಾರಣದಲ್ಲಿ ಪ್ರಸಿದ್ಧಿಗೆ ಬಂದನು. ಅವನಿಗೆ ತನ್ನ ಪತ್ರಗಳನ್ನು ಬಹಳ ದಿವಸಗಳಿಂದ ಒಡೆಯುತ್ತಿದ್ದರೆಂಬುದು ತಿಳಿದು 'ಡನ್‌ಕೋಮ್' ಎಂಬ ಪಾರ್ಲಮೆಂಟಿನ ಸಭಾಸದನಿಗೆ ಅವನು ಈ ಎಲ್ಲ ಸಂಗತಿಗಳನ್ನು ತಿಳಿಸಿದನು. ಡನ್‌ಕೋಮನು ಎಲ್ಲ ವೃತ್ತಾಂತವನ್ನು ಪಾರ್ಲಿಮೆಂಟ ಸಭೆಯ ಮುಂದೆ ಇಡಲಾಗಿ ಸಭಾಸದರಲ್ಲಿ ಬಹಳ ಕೋಪಾವೇಶ ಪ್ರಕಟವಾಯಿತು. ಕಾರ್ಲಾಯಿಲನು ಸರಕಾರದ ಈ ಕೃತ್ಯವನ್ನು ನಿಂದಿಸಿ ಟೈಮ್ಸ್ ಪತ್ರಕ್ಕೆ ಒಂದು ಪತ್ರ ಬರೆದನು. ಮುಂದೆ ಸರಕಾರದವರು ಗುಪ್ತ ಮಂಡಲಗಳನ್ನು ನಿಯಮಿಸಿ ವಿಚಾರಣೆ ಮಾಡಿಸಲು, ಪೋಸ್ಟ ಆಫೀಸಿನಲ್ಲಿ ಪತ್ರಗಳನ್ನು ಒಡೆಯುವ ರೂಢಿಯು [illegible] ನಡೆದು ಬಂದಿತ್ತೆಂತಲೂ, ಪಾರ್ಲಿಮೆಂಟಿನ ಸಭಾಸದರ ಪತ್ರಗಳನ್ನು ಸಹ ಒಡೆಯುತ್ತಿದ್ದರೆಂತಲೂ, ಮ್ಯಾಝಿನಿಯ ಪತ್ರಗಳನ್ನು ಒಡೆಯಲಿಕ್ಕೆ ಸರಕಾರದವರು ಗುಪ್ತವಾದ ಹುಕುಮು ಕಳಿಸಿದ್ದರೆಂತಲೂ, ಈ ಪತ್ರಗಳೊಳಗಿನ ಸಾರಾಂಶವನ್ನು ಪರರಾಷ್ಟ್ರ ಸರಕಾರಗಳಿಗೆ ತಿಳಿಸಿದರೆಂತಲೂ ಗೊತ್ತಾಯಿತು. ಈ ಪ್ರಸಂಗದಲ್ಲಿ ಮ್ಯಾಝಿನಿಯು ಇಂಗ್ಲಿಷ ಸರಕಾರದ ಪರರಾಷ್ಟ್ರವ್ಯವಹಾರನೀತಿಯನ್ನು ಪ್ರಬಲವಾಗಿ ದೂಷಿಸುವ ಲೇಖಗಳನ್ನು ಬರೆದನು.

ಸರಕಾರದ ಧೋರಣವು ಹೀಗಿದ್ದರೂ, ಎಷ್ಟೋ ಇಂಗ್ಲಿಷ ಮತ್ತು ಅಮೇರಿಕನ್ ಗೃಹಸ್ಥರು ಮ್ಯಾಝಿನಿಯ ದೇಶಕಾರ್ಯಕ್ಕೆ ಕೃತಿಪೂರ್ವಕವಾದ ಸಹಾನುಭೂತಿಯನ್ನು ತೋರಿಸುತ್ತಿದ್ದರು. ಇಂಗ್ಲಿಷ ಮತ್ತು ಅಮೇರಿಕನ್ ಪ್ರವಾಸಿಗಳು ಅವನ ಪತ್ರಗಳನ್ನು ಇಟಲಿಗೆ ಒಯ್ದು ಮುಟ್ಟಿಸುತ್ತಿದ್ದರು. ಕೆಲವು ಸ್ತ್ರೀಯರು "ಇಟಾಲಿಯನ್ ಬಝಾರ" ಎಂಬದೊಂದು ಪ್ರದರ್ಶನವನ್ನು ಮಾಡಿ ಮ್ಯಾಝಿನಿಯ ಶಾಲೆಗೂ ರಾಜಕಾರಣಕ್ಕೂ ದುಡ್ಡು ಕೂಡಿಸಿಕೊಟ್ಟರು. ೧೮೪೭ರಲ್ಲಿ "ಪ್ರಜೆಗಳ ಅಂತರ ರಾಷ್ಟ್ರೀಯ ಸಂಘ" ಎಂಬ ಸಂಸ್ಥೆಯನ್ನು ಮ್ಯಾಝಿನಿಯು ಏರ್ಪಡಿಸಿ ಇಟಲಿಯ ವಿಷಯಕ್ಕೆ ಅನ್ಯಜನಾಂಗಗಳ ಸಹಾನುಭೂತಿಯನ್ನು ಪಡೆಯಲು ಪ್ರಯತ್ನಿಸಿದನು. ಎಷ್ಟೋ ದೊಡ್ಡ ದೊಡ್ಡ ಇಂಗ್ಲಿಷ ಸ್ತ್ರೀಪುರುಷರು ಈ ಸಂಸ್ಥೆಯ ಸದಸ್ಯರಾಗಿದ್ದರು.

ಈ ವೇಳೆಯಲ್ಲಿ ಮ್ಯಾಝಿನಿಯ ಕೆಲಸಗಳು ಬಹಳವಾಗಿ ಬೆಳೆದು ಅವನಿಗೆ ಸ್ವಲ್ಪಾದರೂ ಅವಕಾಶವಿದ್ದಿಲ್ಲ. ತರುಣ ಇಟಲಿಯ ಪತ್ರವ್ಯವಹಾರ, ಗ್ರಂಥಲೇಖನ, ಶಾಲೆ, ಸ್ನೇಹಿತರಿಗೆ ಭೆಟ್ಟಿ ಮತ್ತು ಅವರ ಕೂಡ ಚರ್ಚೆ— ಹೀಗೆ ಅವನು ಯಾವಾಗಲೂ ತೊಡಗಿರುತ್ತಿದ್ದನು. ಅವನು ಚದುರಂಗದ ಆಟದಲ್ಲಿ ಬಹಳ ಚತುರನಾಗಿದ್ದು ಆಟವನ್ನಾಡಲಿಕ್ಕೆ ದಿನಾಲು ಕ್ಲಬ್ಬಿಗೆ ಹೋಗುತ್ತಿದ್ದನು

ಆದರೆ ಮನೆಗೆ ಬಂದಕೂಡಲೆ, ಪತ್ರಗಳನ್ನೂ ಲೇಖಗಳನ್ನೂ ಒರೆಬರೆದು ಅವನಿಗೆ ಬೇಸರುಂಟಾಗಿತ್ತು. ದುಡ್ಡಿನ ಕೊರತೆಗಾಗಿ ಅವನು ರಿವ್ಯೂಗಳಿಗೆ ಲೇಖಗಳನ್ನು ಬರೆಯಲೇ ಬೇಕಾಗಿತ್ತು. ಇಂಗ್ಲಿಷ ವಾಚಕರ ಅಭಿರುಚಿಯ ಪ್ರಕಾರ ಬೇರೆ ಬೇರೆ ವಿಷಯಗಳ ಮೇಲೆ ಬರೆಯಬೇಕಾದರೆ ಅವನಿಗೆ ಬಹಳ ತೊಂದರೆಯಾಗುತ್ತಿತ್ತು. ಯೋಗ್ಯವಾದ ಆಹಾರವೂ ಉಡಿಗೆತೊಡಿಗೆಗಳೂ ಇಲ್ಲದ್ದರಿಂದ ಅವನ ಪ್ರಕೃತಿಯು ಅಶಕ್ತವಾಗಿತ್ತು.

೧೮೪೬ರಲ್ಲಿ 'ಪಿಯೋ ನೋನೋ' ಎಂಬವನು ಪೋಪನ ಪಟ್ಟದ ಮೇಲೆ ಕುಳಿತನು. ಇವನ ಸ್ವಭಾವವು ಬಹಳೇ ಸಾತ್ವಿಕವಾದದ್ದರಿಂದ ಜನರಿಗೆ ಇವನು ಇಟಲಿಯ ಉದ್ಧಾರಕನಾಗಬಹುದೆಂದು ಅನಿಸಿತು. ಮುಂದಪಕ್ಷದವರೂ, ಸುಧಾರಣವಾದಿಗಳೂ, ರಾಷ್ಟ್ರೀಯ ಪಕ್ಷದವರೂ, ಎಲ್ಲರೂ ಇವನು ಸ್ವಾತಂತ್ರ್ಯದ ಚಳವಳಿಯ ಮುಖಂಡನಾಗಿ ಇಟಲಿಯ ಧಾರ್ಮಿಕ ಹಾಗೂ ರಾಜಕೀಯ ಸರ್ವಾಧಿಪತಿಯಾಗಬಹುದೆಂದು ಆಶಿಸಿದರು. ಪಿಡ್‌ಮೊಂಟದ ಅರಸನಾದ ಚಾರ್ಲ್ಸ ಆಲ್ಬರ್ಟನು ಈ ಸ್ವಾತಂತ್ರ್ಯಯುದ್ಧದ ಸೇನಾಪತಿಯಾಗಬಹುದೆಂದು ತಿಳಿದಿದ್ದರು.

ಇಂಥ ಪರಿಸ್ಥಿತಿಯಲ್ಲಿ ಮ್ಯಾಝಿನಿಯು ಪೋಪನಿಗೆ ಒಂದು ಪತ್ರವನ್ನು ಬರೆದನು. ಪೋಪನು ಇಟಲಿಯ ರಾಷ್ಟ್ರೈಕ್ಯವನ್ನು ಮಾಡಬೇಕು; ಧರ್ಮಕ್ಕೂ ಲೋಕಮತಕ್ಕೂ ಅನುರೂಪವಾದ ರಾಜ್ಯಪದ್ಧತಿಯನ್ನು ನೆಲೆಗೊಳಿಸಬೇಕು; ನಿಜವಾದ ಕ್ರಿಸ್ತೀಧರ್ಮದ ಪುನರುಜ್ಜೀವನವನ್ನು ಮಾಡಿ, ರೋಮ ಪಟ್ಟಣದಿಂದ ಜಗತ್ತಿಗೆ ಆ ಧರ್ಮವನ್ನು ಸಾರಬೇಕು; ಈಪ್ರಕಾರ ಆ ಪತ್ರದ ಅಭಿಪ್ರಾಯವಿತ್ತು. ನಿಜವಾಗಿ ಮ್ಯಾಝಿನಿಗೆ ಪೋಪನಲ್ಲಿಯಾಗಲೀ, ಚಾರ್ಲ್ಸ ಆಲ್ಬರ್ಟನಲ್ಲಿಯಾಗಲೀ ಈ ಪ್ರಕಾರದ ವಿಶ್ವಾಸವಿದ್ದಿಲ್ಲ. ಆದರೆ ಲೋಕಮತವು ಅವರ ಸಹಾಯದಿಂದ ಸ್ವಾತಂತ್ರ್ಯವನ್ನು ಪಡೆಯಬಹುದೆಂದು ಆಶಿಸುತ್ತಿದ್ದಾಗ ಅದಕ್ಕೆ ವಿರುದ್ಧವಾಗಿ ಹೋಗದೆ, ತನ್ನ ಲೋಕಸತ್ತಾವಾದವನ್ನು ಸ್ವಲ್ಪಕಾಲ ಬದಿಗಿಟ್ಟು, ಪೋಪನನ್ನು ಹುರಿದುಂಬಿಸಬೇಕೆಂದು ವಿಚಾರಮಾಡಿದನು. ಆದರೆ ಈ ಪತ್ರದಿಂದ ಪೋಪನು ಮಾತ್ರ ಗಾಬರಿಯಾಗಿ ಹೋದನು.

೧೮೪೮ನೇ ಇಸ್ವಿಯು ಇಟಲಿಗೂ ಯುರೋಪಖಂಡಕ್ಕೂ ರಾಜ್ಯಕ್ರಾಂತಿಯ ವರ್ಷವಾಗಿತ್ತು. ಇಟಲಿಯಲ್ಲಿ ಮಾಯಲನ್, ಲೆಘೋರ್ನ ಶಹರಗಳಲ್ಲಿ ಮೊದಲು ಜನರು ದಂಗೆ ಮಾಡಿದರು. ಸಿಸಿಲಿಯಲ್ಲಿಯೂ ದಂಗೆಯಾಗಿ ಅದು ನೇಪಲ್ಸದ ಆಧಿಪತ್ಯದಿಂದ ಸ್ವತಂತ್ರವಾಯಿತು. ದಂಗೆಯು ಶೀಘ್ರವಾಗಿ ಹಬ್ಬಿತು. ಟಸ್ಕನೀ, ಪಿಡ್‌ಮೊಂಟ, ನೇಪಲ್ಸ ರಾಜ್ಯಗಳ ಪ್ರಜೆಗಳು ತಮ್ಮ ಅರಸರಿಂದ ಪಾರ್ಲಮೆಂಟಿನ ಸನದುಗಳನ್ನು ಪಡಕೊಂಡರು. ಆಸ್ಟ್ರಿಯದ ವಶದಲ್ಲಿದ್ದ ಪ್ರಾಂತಗಳನ್ನು ಬಿಟ್ಟು ಉಳಿದ ಇಟಲಿಯು ಸ್ವತಂತ್ರವಾಯಿತು. ಚಾರ್ಲ್ಸ ಆಲ್ಬರ್ಟನು ಆಸ್ಟ್ರಿಯಾದವರ ಪ್ರಾಂತಗಳ ಮೇಲೆ ದಂಡೆತ್ತಿ ಹೋಗಲು ಸಿದ್ಧನಾದನು.

ಇಷ್ಟರಲ್ಲಿ ಆಸ್ಟ್ರಿಯದ ರಾಜಧಾನಿಯಾದ ವ್ಹಿಯೆನ್ನಾ ಶಹರದಲ್ಲಿ ರಾಜ್ಯಕ್ರಾಂತಿಯಾಯಿತು. ಇದರಿಂದ ಲೊಂಬಾರ್ಡಿ ಮತ್ತು ವ್ಹೇನಿಸ ಪ್ರಾಂತಗಳೊಳಗಿನ ಪಟ್ಟಣಗಳು ಆಸ್ಟ್ರಿಯದ ಸೈನ್ಯವನ್ನು ಹೊರಗೆ ಹಾಕಿ ಒಂದರ ಹಿಂದೊಂದು ಸ್ವತಂತ್ರವಾದವು. ಪಿಡ್‌ಮೊಂಟ ಮತ್ತು ಟಸ್ಕನಿಯ ಅರಸರೂ, ಪೋಪನೂ ಆಸ್ಟ್ರಿಯದ ಮೇಲೆ ಯುದ್ಧವನ್ನು ಸಾರಿದರು. ಈ ಸ್ವಾತಂತ್ರ್ಯಯುದ್ಧಕ್ಕೆ ಅರಸರೂ, ಮುತ್ಸದ್ದಿಗಳೂ, ಪಾದ್ರಿಗಳೂ, ಸರದಾರರೂ, ವಿದ್ಯಾರ್ಥಿಗಳೂ, ಕಸಬುದಾರರೂ—ಹೀಗೆ ಎಲ್ಲರೂ ತಮ್ಮ ಮನೆಮಾರುಗಳ ಮತ್ತು ಪ್ರಾಣದ ಆಶೆಯನ್ನು ತೊರೆದು ಒಂದೇ ಭಾವನೆಯಿಂದ ಸಾಗಿಹೋದರು.

ಈ ಅನಂತರದ ಸುದ್ದಿಯು ಮುಟ್ಟಿದಕೂಡಲೆ ಮ್ಯಾಝಿನಿಯು ಇಟಲಿಗೆ ಬಂದನು. ೧೮೩೩ನೇ ಇಸ್ವಿಯ ದೇಹಾಂತಶಿಕ್ಷೆಯ ತೀರ್ಪು ಅವನ ತಲೆಯ ಮೇಲೆ ಇನ್ನೂ ಇದ್ದದ್ದರಿಂದ ಅವನು ಪಿಡ್‌ಮೊಂಟಕ್ಕೆ ಹೋಗದೆ ಮಾಯುಲನ್ ಪಟ್ಟಣಕ್ಕೆ ಹೋದನು. ಅಲ್ಲಿಯ ಜನರೂ, ಅಲ್ಲಿಯ ಹೊಸ ಸರಕಾರವೂ ತಮ್ಮೆಲ್ಲರ ದೆಸೆಯಿಂದ ಇಷ್ಟು ದಿವಸ ಅಕಲ್ಪಿತ ಯಾತನೆಗಳನ್ನು ಅನುಭವಿಸಿದ ಆ ಮಹಾತ್ಮನ ಸ್ವಾಗತವನ್ನು ಒಳ್ಳೇ ಪ್ರೀತಿಯಿಂದ ಮಾಡಿದರು. ಈ ವೇಳೆಯಲ್ಲಿ ಎಲ್ಲರೂ ತಮ್ಮ ತಮ್ಮೊಳಗಿನ ಅವಾಂತರ ಮತಭೇದಗಳನ್ನು ಬಿಟ್ಟು ಬಿಡಬೇಕೆಂತಲೂ, ರಾಜಸತ್ತೆಯೋ, ಪ್ರಜಾಸತ್ತೆಯೋ ಎಂಬವನ್ನು ಸ್ವತಂತ್ರವಾದ ಇಟಲೀರಾಷ್ಟ್ರವೇ ನಿರ್ಣಯಿಸಬೇಕೆಂತಲೂ, ಎಲ್ಲರೂ ತಮ್ಮ ಶಕ್ತಿಯನ್ನು ಸ್ವಾತಂತ್ರ್ಯಯುದ್ಧದಲ್ಲಿ ಹಾಕಬೇಕೆಂತಲೂ ಮ್ಯಾಝಿನಿಯು ತನ್ನ ಅಭಿಪ್ರಾಯವನ್ನು ಪ್ರಕಟಿಸಿದನು. ಅವನು ಸ್ವಯಂಸೈನಿಕರ ಸಂಘಟನೆಗೆ ತುಂಬಾ ಪ್ರೋತ್ಸಾಹನೆಯನ್ನು ಕೊಟ್ಟು ಶಿಕ್ಷಿತ ಸ್ವಯಂಸೈನಿಕರನ್ನು ಸ್ವೇನೀತಿಯಾದ ಮೋರಿಯ ಮೇಲೆ ಶತ್ರುಗಳ ಮಾರ್ಗದಲ್ಲಿ ಕಳಿಸಬೇಕೆಂದು ಹೇಳಿದ ಬುದ್ಧಿವಾದವು ಬಹಳ ಯೋಗ್ಯವಾಗಿತ್ತು. ಆದರೆ ರಾಜಪಕ್ಷದ ಮುತ್ಸದ್ದಿಗಳು ಹೀಗೆ ಮಾಡಿದರೆ ಸ್ವಯಂಸೈನಿಕರ ಪ್ರಾಬಲ್ಯವು ಬೆಳೆದು ಪ್ರಜಾಸತ್ತೆಯು ಪ್ರಬಲವಾಗಬಹುದೆಂದು ಅಂಜಿ, ಮ್ಯಾಝಿನಿಯ ಮಾತನ್ನು ಕೇಳಲಿಲ್ಲ. ಅದರಿಂದ ಇದೊಂದು ದೊಡ್ಡ ತಪ್ಪಾಯಿತು.

ಈ ಪ್ರಸಂಗದಲ್ಲಿ ಮ್ಯಾಝಿನಿಯು ಮಾಯುಲನ್ ಪಟ್ಟಣದಲ್ಲಿ ನಿಂತುಕೊಳ್ಳದೆ ಮಧ್ಯ ಇಟಲಿಗೆ ಹೋಗಿದ್ದರೆ ನೆಟ್ಟಗಾಗುತ್ತಿತ್ತು. ಅವನು ಅಲ್ಲಿಯೇ ನಿಂತದ್ದರಿಂದ ಬಣಗಳೊಳಗಿನ ಭೇದಗಳು ಮುಂದಕ್ಕೆ ಬರಲು ಕಾರಣವಾಯಿತು. ಚಾರ್ಲ್ಸ ಅಲ್ಬರ್ಟನು ಮ್ಯಾಝಿನಿಗೆ- ನೀನು ನಿನ್ನ ವರ್ಚಸ್ಸನ್ನು ಉಪಯೋಗಿಸಿ ಲೊಂಬಾರ್ಡಿಯ ಜನರು ನನ್ನ ಆಧಿಪತ್ಯಕ್ಕೆ ಬಂದು ಕೂಡುವಂತೆ ಮಾಡಿದರೆ ನನ್ನ ರಾಜ್ಯ ವ್ಯವಸ್ಥೆಯಲ್ಲಿ ನಿನಗೆ ಇಷ್ಟವಾದ ಸುಧಾರಣೆಗಳನ್ನು ಮಾಡುವೆನೆಂದು ಹೇಳಿ ಕಳುಹಿದನು. ಅದಕ್ಕೆ ಮ್ಯಾಝಿನಿಯು- ಇಟಲಿಯ ಎಲ್ಲ ಸಂಸ್ಥಾನಗಳನ್ನು ಕಿತ್ತುಹಾಕಿ ರಾಷ್ಟ್ರೈಕ್ಯವನ್ನು ಮಾಡಲಿಕ್ಕೆ ನೀನು ಸಾರ್ವಜನಿಕವಾಗಿ ಒಡಂಬಟ್ಟರೆ ನಿನ್ನ ಹೇಳಿಕೆಯ ಪ್ರಕಾರ ಮಾಡುವೆನೆಂದು ಉತ್ತರಕೊಟ್ಟನು. ಇದಕ್ಕೆ ಚಾರ್ಲ್ಸ ಅಲ್ಬರ್ಟನು ಉತ್ತರ ಕಳಿಸಲಿಲ್ಲ. ಆ ಮೇಲೆ ಮ್ಯಾಝಿನಿಯು ತನ್ನ ಲೋಕಸತ್ತೆಯ ಚಳವಳಿಯನ್ನು ಆರಂಭಿಸಿದನು. ಲೋಕಸತ್ತಾತ್ಮಕ ರಾಜ್ಯದ ಧ್ವಜಸ್ತಂಭವನ್ನು ರೋಮ

ಪಟ್ಟಣದಲ್ಲಿ ಊರುವ ತನಕ ಇಟಲಿಯು ಏಕರಾಷ್ಟ್ರವಾಗದೆಂದು ಅವನು ಹೇಳ ಹತ್ತಿದನು. ಈ ಪ್ರಕಾರ ಬಣದ ಜಗಳಗಳಿಗೆ ಆರಂಭವಾಯಿತು. ಪೋಪನೂ, ನೇಪಲ್ಸದ ಅರಸನೂ ಯುದ್ಧದಿಂದ ನಿವೃತ್ತರಾದರು. ಈ ವೇಳೆಯಲ್ಲಿ ಮ್ಯಾಝಿನಿಯು ರೋಮಕ್ಕೆ ಹೋಗಿ ದಕ್ಷಿಣದಲ್ಲಿಯ ರಾಷ್ಟ್ರೀಯ ಪಕ್ಷದ ಜನರನ್ನು ಒಂದುಮಾಡಿ ಸಂಘಟನೆ ಮಾಡಿದ್ದರೆ ಮತ್ತು ಗ್ಯಾರಿಬಾಲ್ಡಿಯು ಚಾರ್ಲ್ಸ ಅಲ್ಬರ್ಟನ ಮತ್ತು ರಾಷ್ಟ್ರೈಕ್ಯದ ಹೆಸರಿನಿಂದ ದಕ್ಷಿಣಕ್ಕೆ ಸಾಗಿಹೋಗಿದ್ದರೆ, ೧೮೬೦ರಲ್ಲಿ ಸಿಗುವ ಸ್ವಾತಂತ್ರ್ಯವು ಇಟಲಿಗೆ ಈಗಲೇ ಸಿಗಬಹುದಾಗಿತ್ತು. ಆದರೆ ದೈವಗತಿಯು ಹಾಗಿದ್ದಿಲ್ಲ.

## ೭ ನೇ ಪ್ರಕರಣ
## ರೋಮದ ಲೋಕಸತ್ತಾತ್ಮಕ ರಾಜ್ಯವು.

ಆಸ್ಟ್ರಿಯದ ಪ್ರಚಂಡ ಸೈನ್ಯದ ಮುಂದೆ ಇಟಲಿಯ ಚಿಕ್ಕ ಸೈನ್ಯದ ಆಟವು ನಡೆಯಲಿಲ್ಲ. ಮೇಲಾಗಿ ಇಟಲಿಯ ಸೈನಿಕರು ಯುದ್ಧಕಲೆಯಲ್ಲಿ ನುರಿಯದ ಸ್ವಯಂಸೇವಕರಾಗಿದ್ದರು. ಆಸ್ಟ್ರಿಯನ್ನರು ಇಟಲಿಯ ಸೈನ್ಯವನ್ನು ಹಿಂದಕ್ಕೆ ಅಟ್ಟುತ್ತ ಒಯ್ಯಲು ಅದು ಕಡೆಗೆ ಮಾಯ್‌ಲನ್ ಪಟ್ಟಣವನ್ನು ಸೇರಿತು.

ವೈರಿಗಳು ಆ ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಜನರ ಸಹಾಯದ ಆಶೆಯು ತೋರದ್ದರಿಂದ, ಚಾರ್ಲ್ಸ ಅಲ್ಬರ್ಟನು ಪಟ್ಟಣವನ್ನು ವೈರಿಗಳಿಗೆ ಬಿಟ್ಟುಕೊಟ್ಟು ಪಿಡ್‌ಮೊಂಟಕ್ಕೆ ಹೊರಟು ಹೋದನು. ಮುಂದೆ ಸಂಧಿಯ ಮಾತುಗಳನ್ನು ಆಡುವದಕ್ಕಾಗಿ ಯುದ್ಧವನ್ನು ನಿಲ್ಲಿಸಿದನು. ಆದರೂ ಮ್ಯಾಝಿನಿಯು ಅಪಜಯವನ್ನು ಒಪ್ಪಿಕೊಳ್ಳಲಿಲ್ಲ. ಅರಸನು ಸೋತರೂ ಪ್ರಜೆಗಳು ಸೋತಿಲ್ಲವೆಂದು ಅವನ ಮತವು. ಪ್ರಜೆಗಳು ಒಮ್ಮನಸ್ಸಿನಿಂದ ವೈರಿಗಳ ಮೇಲೆ ಬಿದ್ದರೆ ಅವರ ಆಟವು ಕಟ್ಟಾಗುವದೆಂದು ಅವನು ಅನ್ನುತ್ತಿದ್ದನು. ಅವನು ಮಧ್ಯ ಇಟಲಿಯಲ್ಲಿ ಐಕ್ಯವನ್ನುಂಟುಮಾಡಲಿಕ್ಕೂ, ಅವರ ಕಡೆಯಿಂದ ಯುದ್ಧದ ಸಿದ್ಧತೆಯನ್ನು ಮಾಡಿಸಲಿಕ್ಕೂ ಫ್ಲಾರೆನ್ಸ್ ಪಟ್ಟಣಕ್ಕೆ ಬಂದನು.

ಇಷ್ಟರಲ್ಲಿ ಪೋಪನು ಯುದ್ಧವನ್ನು ಬಿಟ್ಟು ನೇಪಲ್ಸದ ಅರಸನ ಕಿಲ್ಲೆಯಾದ 'ಗೇಟಾ' ಎಂಬಲ್ಲಿಗೆ ಹೋಗಿ ವಾಸವಾಗಿದ್ದನು. ರೋಮದ ಜನರು ತಿರುಗಿ

ರೋಮಕ್ಕೆ ಬರಬೇಕೆಂದು ಎಷ್ಟು ಹೇಳಿಕಳಿಸಿದರೂ ಅವನು ಬಾರದ್ದರಿಂದ ಅವರು ಲೋಕಸತ್ತಾತ್ಮಕ ಪದ್ಧತಿಯನ್ನು ಸ್ಥಾಪಿಸುವ ಹವಣಿಕೆಯಲ್ಲಿದ್ದರು. ಮ್ಯಾಝಿನಿಯಾದರೂ ಅವರಿಗೆ ಪ್ರಜಾಸತ್ತೆಯನ್ನು ಸ್ಥಾಪಿಸಲು ಉತ್ತೇಜನವನ್ನು ಕೊಟ್ಟನು. ರೋಮವು ಲೋಕಸತ್ತಾತ್ಮಕವಾಗಿ ಇಡೀ ಇಟಲಿಯನ್ನು ತನ್ನೊಳಗೆ ಸಮಾವೇಶ ಮಾಡಿಕೊಳ್ಳುವದೆಂದು ಅವನಿಗೆ ಆಶೆಯಿತ್ತು. ಅದು ಇಟಲಿಯ ರಾಜಧಾನಿಯಾಗಿ ಜಗತ್ತಿಗೆ ಹೊಸ ಮಾನವೀ ಧರ್ಮವನ್ನು ಉಪದೇಶಿಸುವದೆಂದು ಅವನ ಬಹು ದಿವಸದ ಆಕಾಂಕ್ಷೆಯಾಗಿತ್ತು.

ಕಡೆಗೆ ರೋಮನ್ ಜನರು ಗತ್ಯಂತರಕಾಣದೆ ೧೮೪೯ನೇ ಇಸ್ವಿ ಫೇಬ್ರುವರಿ ತಿಂಗಳಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಸ್ವೀಕರಿಸಿ ಪ್ರತಿನಿಧಿ ಸಭೆಯನ್ನು ಏರ್ಪಡಿಸಿದರು. ಮ್ಯಾಝಿನಿಗೆ ರೋಮದ ನಾಗರಿಕನೆಂಬ ಬಹುಮಾನವನ್ನು ಮಾಡಿ ಅವನನ್ನು ರೋಮಕ್ಕೆ ಕರಿಸಿಕೊಂಡು ಮಂತ್ರಿಮಂಡಲದೊಳಗೆ ಅವನನ್ನು ಕೂಡಿಸಿಕೊಂಡರು. ಮ್ಯಾಝಿನಿಯು ಮಾಡಿದ ಮೊದಲನೇ ಕೆಲಸವೇನಂದರೆ, ವೈರಿಗಳ ಕೂಡ ಯುದ್ಧದ ಸಿದ್ಧತೆಯನ್ನು ಭರದಿಂದ ನಡಿಸಿದ್ದು. ಅವನು ಉತ್ತರ ಇಟಲಿಯ ರಣರಂಗಕ್ಕೆ ಹತ್ತು ಸಾವಿರ ಸೈನಿಕರನ್ನು ಕಳಿಸಿದನು. ಆದರೆ ದುರ್ದೈವದಿಂದ ಅವರು ಚಾರ್ಲ್ಸ್ ಅಲ್ಬರ್ಟನಿಗೆ ಹೋಗಿ ಕೂಡುವದರೊಳಗಾಗಿ ಅವನು ಆಸ್ಟ್ರಿಯನ್ನರಿಂದ ಭಯಂಕರವಾಗ ಅಪಜಯವನ್ನು ಹೊಂದಿ ಹತಾಶನಾಗಿದ್ದನು

ಇನ್ನು ಆಸ್ಟ್ರಿಯನ್ನರು ಮಧ್ಯ ಇಟಲಿಯ ಕಡೆಗೆ ಬರುವರೆಂಬ ಭೀತಿಯು ಇತ್ತು. ಇಂಥ ಪ್ರಬಲ ಶತ್ರುವಿನೊಡನೆ ರೋಮವು ಹೋರಾಡುವದು ಬಹು ಕಠಿಣವಾಗಿತ್ತು ಇಂಥ ಪ್ರಸಂಗದಲ್ಲಿ ಪ್ರತಿನಿಧಿ ಸಭೆಯವರು ಮ್ಯಾಝಿನಿಯನ್ನು ರಾಜ್ಯದ ಸರ್ವಾಧಿಕಾರಿಯನ್ನಾಗಿ ಮಾಡಿದರು. ಅವನಾದರೂ ಅವಿಶ್ರಾಂತ ಶ್ರಮಬಟ್ಟು ಸೈನ್ಯವನ್ನು ಬೆಳಸಹತ್ತಿದನು.

ಈ ರೋಮದ ಪ್ರಜಾಸತ್ತೆಯ ರಾಜ್ಯಕ್ಕೆ ನಾಲ್ಕು ತಿಂಗಳ ಮಾತ್ರ ಆಯುಷ್ಯವಿತ್ತು. ಇಷ್ಟು ಸ್ವಲ್ಪ ಅವಧಿಯಲ್ಲಿಯೇ ಮ್ಯಾಝಿನಿಯು ತನ್ನ ರಾಜಕಾರಣ ಧುರೀಣತೆಯನ್ನು ಚನ್ನಾಗಿ ಪ್ರಕಟಮಾಡಿದನು. ಅವನ ಆಚರಣೆಯು ಅವನ ಉದಾತ್ತ ತತ್ವಗಳಿಗೆ ಅನುರೂಪವಾಗಿತ್ತು. ಅವನ ಆಳಿಕೆಯಲ್ಲಿ ಜನರಿಗೆ ಮುದ್ರಣ ಸ್ವಾತಂತ್ರ್ಯವಿತ್ತು. ಅತಿ ಸ್ವಲ್ಪ ರಾಜಕೀಯ ಅಪರಾಧಿಗಳಿಗೆ ಶಿಕ್ಷೆಯಾಯಿತು. ಕ್ಯಾಥೊಲಿಕ್ ಪಂಥದಲ್ಲಿ

ಮ್ಯಾಝಿನಿಗೆ ವಿಶ್ವಾಸವಿಲ್ಲದಿದ್ದರೂ ಆ ಪಂಥದ ಜನರಿಗೆ ತಮ್ಮ ಧರ್ಮಕಾರ್ಯಗಳನ್ನು ನೆರವೇರಿಸಲಿಕ್ಕೆ ಏನೂ ನಿರ್ಬಂಧಗಳಿದ್ದಿಲ್ಲ. ಪೋಪನ ಸಂಗಡ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ಮ್ಯಾಝಿನಿಯು ಕೊನೆಯವರೆಗೂ ಸಿದ್ಧನಿದ್ದನು. ಅವನ ರಾಜಸತ್ತೆಯನ್ನು ಕಸಿದುಕೊಂಡರೂ ಅವನ ಧರ್ಮಸತ್ತೆಗೆ ಏನೂ ಬಾಧೆ ತಟ್ಟದಂತೆ ಮಾಡಿದನು.

ಪ್ರಜೆಗಳ ಮೇಲೆ ಮ್ಯಾಝಿನಿಯು ವರ್ಚಸ್ಸವು ಅತ್ಯಂತ ಶುದ್ಧವೂ ಪವಿತ್ರವೂ ಆಗಿತ್ತು. ಅವರು ಕೇವಲ ಪ್ರೀತಿಯಿಂದಲೂ ಭಕ್ತಿಯಿಂದಲೂ ಅವನ ಆಜ್ಞೆಗಳಿಗೆ ಅಂಕಿತರಾಗಿ ನಡೆಯುತ್ತಿದ್ದರು. ಅವನ ಪ್ರಾಪಂಚಿಕ ಜೀವಕ್ರಮವು ತೀರ ಸಾದಾ ತರದ್ದಿತ್ತು. ಅವನು ಒಂದು ಸಣ್ಣ ಮನೆಯಲ್ಲಿದ್ದುಕೊಂಡು ಬಡವರಿಗೂ ಶ್ರೀಮಂತರಿಗೂ ಸಮನಾಗಿ ಭೆಟ್ಟಿಯನ್ನು ಕೊಡುತ್ತಿದ್ದನು. ಅವನ ಆಹಾರವೂ ಬಡತನದ್ದಾಗಿತ್ತು. ವೀಣೆಯನ್ನು ಬಾರಿಸುವದರ ಹೊರ್ತಾಗಿ ಅವನಿಗೆ ಎರಡನೇ ವಿಲಾಸಗಳಿದ್ದಿಲ್ಲ. ಅವನ ಸಂಬಳವೆಲ್ಲ ಎರಡನೇಯವರಿಗಾಗಿಯೇ ವೆಚ್ಚವಾಗುತ್ತಿತ್ತು. ರಾಜ್ಯಕಾರಭಾರದ ತೊಂದರೆಗಳು ಅಸಂಖ್ಯವಾಗಿದ್ದರೂ ಅವನು ಸಮಾಧಾನದಿಂದ ಇರುತ್ತಿದ್ದನು. ಅವನು ಅತ್ಯಂತ ದಯಾಳುವಾಗಿದ್ದನು. ಸೈನ್ಯಮಂಡಲದವರು ಒಬ್ಬ ಸಿಪಾಯಿಗೆ ದೇಹಾಂತ ಶಿಕ್ಷೆಯನ್ನು ವಿಧಿಸಿರಲು, ಆ ಶಿಕ್ಷೆಗೆ ಕಡೆತನಕ ಅವನು ತನ್ನ ಸಮ್ಮತಿಯನ್ನು ಕೊಡಲಿಲ್ಲ. ದೇಹಾಂತ ಶಿಕ್ಷೆಯನ್ನು ಪೃಥ್ವೀತಲದಿಂದ ತೆಗೆದು ಹಾಕಬೇಕೆನ್ನುವವರಲ್ಲಿ ಈ ಮಹಾತ್ಮನೊಬ್ಬನಿದ್ದನು.

ಈ ಚಿಕ್ಕದಾದ ರಾಜ್ಯವು ಆಸ್ಟ್ರಿಯನ್ನರ ಸೈನ್ಯಕ್ಕೆ ತೀವ್ರ ಆಹುತಿಯಾಗುವದೆಂದು ಮ್ಯಾಝಿನಿಗೆ ಗೊತ್ತಿತ್ತು. ಆದರೆ ಅದರ ವಿನಾಶವು ಯಾರ ಕನಸುಮನಸ್ಸಿನಲ್ಲಿ ಇಲ್ಲದ ಮತ್ತೊಂದು ರೀತಿಯಿಂದ ಒದಗಿಬಂತು. ಲುಯಿ ನೆಪೋಲಿಯನ್ನನು ಈ ಹೊಸರಾಜ್ಯಕ್ಕೆ ಸಹಾಯ ಮಾಡುವ ಕಪಟನಿಮಿತ್ತದಿಂದ 'ಒಡಿನೋ' ಎಂಬ ಸೇನಾಪತಿಯ ಕೆಳಗೆ ಸೈನ್ಯವನ್ನು ಕಳಿಸಿದನು. ಆದರೆ ಅವನ ನಿಜವಾದ ಉದ್ದೇಶವು ಈ ರಾಜ್ಯವನ್ನು ಹಾಳುಮಾಡಬೇಕೆಂದು ಇತ್ತು. ಫ್ರೆಂಚ ಸೈನ್ಯವು ರೋಮದ ಮೇಲೆ ಸಾಗಿಬರಲು, ರೋಮ ಸ್ವಯಂಸೈನಿಕ ಸೈನ್ಯವು ಫ್ರೆಂಚರನ್ನು ಒಮ್ಮೆ ಸೋಲಿಸಿ ಹಿಂದಕ್ಕಟ್ಟಿತ್ತು. ಆಗ ಒಡಿನೋನು ಒಂದು ಅತಿ ನೀಚವಾದ ಯುಕ್ತಿಯನ್ನು ಹೂಡಿದನು. ಫ್ರಾನ್ಸಕ್ಕೆ ಹೆಚ್ಚು

ಸೈನ್ಯಕ್ಕಾಗಿ ಪತ್ರಬರೆದು, ಇತ್ತ ಮ್ಯಾಝಿನಿಗೆ ಅದು ತಿಳಿಯಬಾರದೆಂದು ಅವನ ಕಡೆಗೆ ಒಪ್ಪಂದದ ಮಾತುಕಥೆಯನ್ನಾಡಲಿಕ್ಕೆ ಒಬ್ಬ ರಾಯಭಾರಿಯನ್ನು ಕಳುಹಿದನು. ಫ್ರೆಂಚರ ಕೂಡ ನಿಷ್ಕಾರಣ ಶತ್ರುತ್ವವನ್ನು ಕಟ್ಟಿಕೊಳ್ಳಬಾರದೆಂದು ಮ್ಯಾಝಿನಿಯು ಎರಡೂ ಪಕ್ಷಗಳಿಗೂ ಮಾನನೀಯವಾದ ಒಪ್ಪಂದವನ್ನು ಮಾಡಿಕೊಳ್ಳಲಿಕ್ಕೆ ಸಿದ್ಧನಾಗಿದ್ದನು. ಅಷ್ಟರಲ್ಲಿ ಫ್ರಾನ್ಸದಿಂದ ಸಹಾಯಕ ಸೈನ್ಯವು ಬಂತು. ಕೂಡಲೆ ವಿಶ್ವಾಸಘಾತಕಿಯಾದ ಓಡಿನೋನು ರೋಮಪಟ್ಟಣಕ್ಕೆ ಮುತ್ತಿಗೆಹಾಕಿದನು. ಮುತ್ತಿಗೆಯು ಒಂದು ತಿಂಗಳ ವರೆಗೆ ನಡೆಯಿತು. ಪ್ರಜಾಸತ್ತೆಯು ರಾಜ್ಯವು ಎಂದೂ ಶತ್ರುಗಳಿಗೆ ಶರಣು ಹೋಗಬಾರದೆಂತಲೂ, ರೋಮದಲ್ಲಿ ಒಬ್ಬ ಮನುಷ್ಯನು ಸಹ ಜೀವಂತನಿರುವತನಕ ಅವರ ಕೂಡ ಹೋರಾಡಿ ಜಗತ್ತಿಗೆ ಉದಾಹರಣೆಯನ್ನು ಹಾಕಿ ಕೊಡಬೇಕೆಂತಲೂ ಮ್ಯಾಝಿನಿಯು ನಿಶ್ಚಯಿಸಿದ್ದನು ನಗರರಕ್ಷಣಕ್ಕಾಗಿ ಶ್ರೀಮಂತರೂ, ಬಡವರೂ, ರಾಜಸತ್ತಾವಾದಿಗಳೂ, ಪ್ರಜಾಸತ್ತಾವಾದಿಗಳೂ, ವಿದ್ವಾಂಸರೂ, ನಿರಕ್ಷರರೂ, ಹೀಗೆ ಎಲ್ಲರೂ ಕೂಡಿದ್ದರು. ಜನರು ತಮ್ಮ ಮನೆಮಾರುಗಳು ಹಾಳಾಗುವದನ್ನೂ, ದಿನದಿನಕ್ಕೆ ಹೆಚ್ಚುತ್ತಿರುವ ಅನ್ನದ ಕೊರತೆಯನ್ನೂ, ಶಾಂತತನದಿಂದ ಮತ್ತು ಶೂರತನದಿಂದ ಸಹನಮಾಡುತ್ತಿದ್ದರು. ಆರು ಸಾವಿರ ಹೆಂಗಸರು ಘಾಯಹೊಂದಿದ ಜನರ ಉಪಚಾರಮಾಡಲಿಕ್ಕೆ ಸಿದ್ಧರಾದರು.

ಬರ ಬರುತ್ತಾ ಜನರು ಎದೆಗುಂದಿದರು. ಮುತ್ತಿಗೆಯ ಕಷ್ಟಗಳು ಅವರಿಗೆ ಅಸಹ್ಯವಾದವು. ಆ ಮೇಲೆ ಪ್ರತಿನಿಧಿಸಭೆಯವರು ಅತ್ಯಂತ ವಿಷಾದದಿಂದ ಪಟ್ಟಣವನ್ನು ಶತ್ರುಗಳಿಗೆ ಬಿಟ್ಟುಕೊಡಬೇಕೆಂದು ನಿಶ್ಚಯಿಸಿದರು. ಮ್ಯಾಝಿನಿಗೂ ಗ್ಯಾರಿಬಾಲಿ ಮೊದಲಾದ ಯುದ್ಧ ಮಂಡಲದವರಿಗೂ ಇದು ಸಮ್ಮತವಾಗಲಿಲ್ಲ. ಅವರು— ಸೈನ್ಯ ಸಹಿತವಾಗಿ ರೋಮದೊಳಗಿಂದ ಹೊರಬಿದ್ದು ಫ್ರೆಂಚ ಸೈನ್ಯದ ಮೇಲೆ ಅಕಸ್ಮಾತ್ತಾಗಿ ಹಲ್ಲೆ ಮಾಡಿ ಪಾರಾಗಬೇಕು; ಅಂದರೆ ರೋಮವು ಫ್ರೆಂಚರ ಕೈವಶವಾದರೂ ಪ್ರಜಾಸತ್ತೆಯು ತಮ್ಮ ಸಂಗಡ ಸುರಕ್ಷಿತವಾಗಿ ಉಳಿಯುವದು ಎಂದು ವಿಚಾರಮಾಡಿದ್ದರು. ಗ್ಯಾರಿಬಾಲ್ಡಿಯು ತನ್ನ ಮೂರುಸಾವಿರ ಸ್ವಯಂಸೇವಕರೊಂದಿಗೆ ಪಟ್ಟಣವನ್ನು ಬಿಟ್ಟು ಹೋದನು. ವೈರಿಗಳು ಪಟ್ಟಣವನ್ನು ಸೇರಿದರು. ಮ್ಯಾಝಿನಿಯು ಮಾತ್ರ ಕೆಲವು ದಿವಸ ರೋಮದಲ್ಲಿಯೇ ಉಳಿದನು. ಅವನು ನಿರ್ಭೀತನಾಗಿ ಬೀದಿಗಳಲ್ಲಿ ಅಡ್ಡಾಡುತ್ತಿದ್ದನು. ಅವನ ವೈರಿಗಳು ಅವನು

ರೋಮವನ್ನು ಬಹು ಕ್ರೂರವಾಗಿ ಆಳಿದನೆಂದು ಅವನ ಮೇಲೆ ಆರೋಪ ಮಾಡಿದ್ದರಿಂದ, ಅದನ್ನು ಸುಳ್ಳು ಮಾಡುವದಕ್ಕಾಗಿ ಬೇಕಾದವನು ತನ್ನನ್ನು ಕೊಲ್ಲಲಿಯೆಂದು ಅವನು ಹಾಗೆ ಅಡ್ಡಾಡಿದನು. ಆದರೆ ಯಾರೂ ಅವನಿಗೆ ಅಪಾಯ ಮಾಡಲಿಲ್ಲ; ಇಷ್ಟೇ ಅಲ್ಲ, ಫ್ರೇಂಚರೂ ಕೂಡ ಅವನ ಲೋಕಪ್ರೀತಿಗೆ ಅಂಜಿ ಅವನನ್ನು ಹಿಡಿಯಲಿಲ್ಲ. ಮುಂದೆ ಕೆಲವು ಮಿತ್ರರ ಹೇಳಿಕೆಯ ಮೇರೆಗೆ ಅವನು ಇಟಲೀ ದೇಶವನ್ನು ಬಿಟ್ಟು ಮಾರ್ಸಿಲೆಸಕ್ಕೆ ಹೋಗಿ, ಅಲ್ಲಿಂದ ಜಿನೀವ್ಹಾ ಪಟ್ಟಣಕ್ಕೆ ಹೋದನು.

## ೮ನೇ ಪ್ರಕರಣ.

## ಪುನಃ ಲಂಡನ್.

ಮ್ಯಾಝಿನಿಯು ಜಿನೀವ್ಹಾದಿಂದ ತನ್ನ ಸ್ನೇಹಿತರೊಂದಿಗೆ ಲಾಸೇನಕ್ಕೆ ಹೋದನು. ಅಲ್ಲಿ ಎಂದಿನಂತೆ ತನ್ನ ರಾಜಕೀಯ ಪತ್ರವ್ಯವಹಾರವನ್ನೂ, ವರ್ತಮಾನಪತ್ರವನ್ನೂ ಆರಂಭಿಸಿದನು. ಸ್ವಲ್ಪ ದಿವಸಗಳಲ್ಲಿ ಬಂಡುಗಾರರಿಗೆ ಆಶ್ರಯ ಕೊಡಕೂಡದೆಂದು ಆಸ್ಟ್ರಿಯಾ ಸರಕಾರದಿಂದ ಸ್ವಿಸ್ ಸರಕಾರಕ್ಕೆ ಪತ್ರಗಳು ಬರಹತ್ತಿದವು. ಆದ್ದರಿಂದ ಮ್ಯಾಝಿನಿಯು ಸ್ವಲ್ಪ ದಿವಸಗಳಲ್ಲಿಯೇ ಸ್ವಿಝರ್ಲಂಡವನ್ನು ಬಿಟ್ಟು ಇಂಗ್ಲಂಡಕ್ಕೆ ಪ್ರಯಾಣ ಬೆಳಿಸಿದನು.

ಇವನ ಮುಂದಿನ ಆಯುಷ್ಯವೆಲ್ಲ ಬಹುತರವಾಗಿ ಇಂಗ್ಲಂಡದಲ್ಲಿಯೇ ಹೋಯಿತು. "ಇಟಲಿಯು ನನ್ನ ಮಾತೃಭೂಮಿಯು, ಆದರೆ ಇಂಗ್ಲಂಡವು ನನ್ನ ಪ್ರೀತಿಯ ಮನೆಯು," ಎಂದು ಇವನು ಅನ್ನುತ್ತಿದ್ದನು. ಬರಬರುತ್ತ ಇಂಗ್ಲಂಡ ದೇಶದ ಮೇಲೆಯೂ ಇಂಗ್ಲಿಷ ಜನರ ನಡೆನುಡಿಗಳ ಮೇಲೆಯೂ ಇವನ ಪ್ರೇಮವು ಹೆಚ್ಚುತ್ತ ಹೋಯಿತು.

ಇವನ ತಂದೆಯು ೧೮೪೮ ರಲ್ಲಿಯೇ ಸತ್ತುಹೋಗಿದ್ದನು; ತಾಯಿಯು ೧೮೫೨ ರಲ್ಲಿ ತೀರಿದಳು. ತಾಯಿಯ ನಿಧನದಿಂದ ಮ್ಯಾಝಿನಿಯ ಕೋಮಲಾಂತಃಕರಣಕ್ಕೆ ಅತ್ಯಂತ ದುಃಖವಾಯಿತು. ಇಟಲಿಯು ಸ್ವತಂತ್ರ ರಾಷ್ಟ್ರವಾದ ಮೇಲೆ ಹೋಗಿ ತಾನು ತಾಯಿಯ ಪಾದಕ್ಕೆ ಎರಗಬೇಕೆಂಬದು ಅವನ ಬಹು ದಿವಸದ

ಮನೋರಥವಾಗಿತ್ತು. ವ್ಯಕ್ತಿಗಳಾವರೂ ಮಗನು ತನ್ನ ಕರ್ತವ್ಯಗಳನ್ನು ಯೋಗ್ಯವಾಗಿ ಮಾಡುತ್ತಾನೋ ಇಲ್ಲವೋ ಎಂಬವನ್ನು ನೋಡುತ್ತಿರುವಳೆಂಬ ಅವನ ಭಾವನೆಯಾಗಿತ್ತು. ಆಕೆಯು ಸಾಯುವ ಮುಂದೆ ಮಗನಿಗೆ ೧೬೦ ಪೌಂಡು ಬಡ್ಡಿ ಬರುವಷ್ಟು ಹಣವನ್ನು ಟ್ರಸ್ಟೀ ಜನರ ಕೈಯಲ್ಲಿ ಕೊಟ್ಟು, ಅವನಿಗೆ ಅವಶ್ಯವಾದಷ್ಟು ಹಣವನ್ನು ಮಾತ್ರ ಕೊಡುತ್ತ ಹೋಗುವಂತೆ ಹೇಳಿದ್ದಳು. ಲೇಖನ ವ್ಯವಸಾಯದಿಂದಲೂ ಅವನಿಗೆ ಸ್ವಲ್ಪ ಹಣವು ಹುಟ್ಟುತ್ತಿತ್ತು. ಅವನು ಬಹಳ ಬಡತನದಿಂದ ಜೀವಿಸಿ ಉಳಿದ ದುಡ್ಡನ್ನು ಅನಾಥ ಹುಡುಗರ ಶಿಕ್ಷಣಕ್ಕೂ, ಕ್ರಾಂತಿಕಾರಕ ಸಂಘಗಳಿಗೂ ವೆಚ್ಚ ಮಾಡುತ್ತಿದ್ದನು. ಪತ್ರಗಳನ್ನು ಬರೆಯುವದು, ಇಟಲಿಗೆ ಲೇಖಗಳನ್ನು ಬರೆದು ಕಳಿಸುವದು, ಫಂಡು ಕೂಡಿಸುವದು, ಇಟಲಿಯ ಚಳವಳಿಗೆ ಇಂಗ್ಲಿಷ ಸ್ನೇಹಿತರ ಮತ್ತು ಇತರ ಜನರ ಸಹಾನುಭೂತಿಯನ್ನು ದೊರಕಿಸುವದು, ಇಟಲಿಯ ನಿರಾಶ್ರಿತರಿಗೆ ಹಣವನ್ನೂ ಕೆಲಸವನ್ನೂ ಒದಗಿಸಿಕೊಡುವದು—ಇವೇ ಅವನ ವ್ಯವಸಾಯಗಳಾಗಿದ್ದವು. ೧೮೫೧ ರಲ್ಲಿ 'ಇಟಲಿಯ ಮಿತ್ರ ಸಂಘ' ವೆಂಬ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿದನು. ಎಷ್ಟೋ ಉದಾರ ಮತವಾದಿಗಳಾದ ಇಂಗ್ಲಿಷ ಗೃಹಸ್ಥರು ಈ ಸಂಸ್ಥೆಯ ಕಮಿಟಿಯಲ್ಲಿ ಸದಸ್ಯರಾಗಿದ್ದರು. ಇವರ ಮುಖಾಂತರವಾಗಿ ಇಟಲಿಗೆ ಅನುಕೂಲವಾದ ಲೋಕಮತವನ್ನುಂಟುಮಾಡಲಿಕ್ಕೂ, ಇಂಗ್ಲಂಡದ ಪರರಾಷ್ಟ್ರ ಧೋರಣವನ್ನು ಇಟಲಿಯ ಉದ್ದಿಷ್ಟಗಳಿಗೆ ಅನುಕೂಲವಾಗಿ ಮಾಡುವದಕ್ಕೂ ಅವನು ಬಹಳವಾಗಿ ಪ್ರಯತ್ನ ಮಾಡಿದನು.

ಇಂಗ್ಲಂಡದಲ್ಲಿ ಇವನ ಮಿತ್ರಮಂಡಲವು ಬಹಳ ದೊಡ್ಡದಾಗಿತ್ತು. ತನ್ನ ಸರಸವಾದ ಮಾತಿನ ಶೈಲಿಯಿಂದಲೂ, ಸ್ವಾರಸ್ಯವುಳ್ಳ ಚಿಕ್ಕ ಕಥೆಗಳಿಂದಲೂ, ಶಾಂತವಾದ ಮತ್ತು ಪ್ರೇಮಳವಾದ ವರ್ತನದಿಂದಲೂ ಇವನು ಎಲ್ಲರಿಗೂ ಪ್ರಿಯನಾಗಿದ್ದನು. ಮನೆಯ ಸೌಖ್ಯವನ್ನರಿಯದ ಪರದೇಶಿಯಾದ ಮ್ಯಾಝಿನಿಗೆ ಅವರು ತಮ್ಮ ಮನೆಯಲ್ಲಿ ಆದರೋಪಚಾರಮಾಡಿ, ಅವನ ದುಃಖಗಳಲ್ಲಿ ಪಾಲುಗಾರರಾಗುತ್ತಿದ್ದರು.

ತರುಣ ಜನರ ಮೇಲೆ ಮ್ಯಾಝಿನಿಯ ಮಾತುಗಳ ಪರಿಣಾಮವು ಬಹಳ ಬಲವಂತವಾಗಿ ಆಗುತ್ತಿತ್ತು. ದೇವರು, ಧರ್ಮ, ಕರ್ತವ್ಯ, ಮಾನವಕುಟುಂಬ, ಪ್ರಗತಿ ಮುಂತಾದ ವಿಷಯಗಳ ಮೇಲೆ ಅಧಿಕಾರಯುಕ್ತವಾಣಿಯಿಂದ ಮ್ಯಾಝಿ

ನಿಯು ಮಾತನಾಡಹತ್ತಿದನೆಂದರೆ ಅವರ ಹೃದಯಗಳು ಸ್ಫುರಣಗೊಳ್ಳುತ್ತಿದ್ದವು. ಮಾತೃಭೂಮಿಯ ದಾಸ್ಯಮುಕ್ತತೆಗಾಗಿ ತನ್ನ ಆಯುಷ್ಯವನ್ನೇ ಸಮರ್ಪಿಸಿದ ಈ ರಾಷ್ಟ್ರವೀರನನ್ನು ನೋಡಿ ಅವರು ಪ್ರೇಮದಿಂದಲೂ, ಆಶ್ಚರ್ಯದಿಂದಲೂ, ಪೂಜ್ಯ ಬುದ್ಧಿಯಿಂದಲೂ ಪರವಶರಾಗುತ್ತಿದ್ದರು.

## ೯ನೇ ಪ್ರಕರಣ.

## ಇಟಲಿಯ ಸ್ವಾತಂತ್ರ್ಯಯುದ್ಧವು.

ಮ್ಯಾಝಿನಿಯು ಲೋಕಸತ್ತಾತತ್ವದಲ್ಲಿ ವಿಶ್ವಾಸವುಳ್ಳವನಾಗಿದ್ದನು. ಲೋಕಸತ್ತೆಯ ಹೊರ್ತು ಸಾಮಾನ್ಯ ಜನತೆಯ ಉದ್ಧಾರವಾಗುವದು ಅಶಕ್ಯ ವೆಂದು ಅವನ ನಿಶ್ಚಿತಮತವಾಗಿತ್ತು. ಸ್ವಾತಂತ್ರ್ಯ, ಏಕೀಕರಣ, ಲೋಕಸತ್ತೆ— ಈ ಮೂರು ಉದ್ದಿಷ್ಟಗಳನ್ನು ಶೀಘ್ರವಾಗಿ ಮತ್ತು ಏಕಕಾಲಕ್ಕೆ ಸಾಧಿಸಬೇಕೆಂ ತಲೂ, ಇಟಲಿಯ ಜನತೆಯು ಏಕಕಾಲಕ್ಕೆ ಮತ್ತು ಏಕಭಾವನೆಯಿಂದ ಟೊಂಕ ಕಟ್ಟಿದರೆ ಇದೇನೂ ಅಸಾಧ್ಯವಲ್ಲೆಂತಲೂ ಅವನು ನೆರೆನಂಬಿದ್ದನು. ಆದರೆ ಶ್ರೀ ಮಂತರು ಮತ್ತು ಮಧ್ಯಮ ವರ್ಗದವರು ಅವನ ಪರಮಾವಧಿಯ ಆಕಾಂಕ್ಷೆಗಳು ಅವ್ಯವಹಾರ್ಯವೆಂದು ತಿಳುವಳಿಕೆಯುಳ್ಳವರಾಗಿದ್ದದರಿಂದಲೂ, ಸಾಮಾನ್ಯ ಜನ ತೆಯು ಅವನ ವಿಚಾರಗಳಲ್ಲಿ ಸಹಾನುಭೂತಿಯುಳ್ಳದ್ದಾದರೂ ತಮ್ಮ ಜೀವಿತ ಸರ್ವಸ್ವವನ್ನು ಅರ್ಪಿಸಲಿಕ್ಕೆ ಸಾರ್ವತ್ರಿಕವಾಗಿ ಸಿದ್ಧವಾಗದ್ದರಿಂದಲೂ ಅವನ ಅನೇಕ ಸಂಚುಗಳೂ, ಬಂಡುಗಳೂ ಅಯಶಸ್ವಿಯಾದವು.

'ತರುಣ ಇಟಲಿ' ಯ ಬಂಡುಗಳು ಹೀಗೆ ನಿಷ್ಫಲವಾಗಲು, ಮಂದ ಪಕ್ಷವು ದೇಶದಲ್ಲಿ ವ್ಯಾಪಿಸಹತ್ತಿತು. ಇವರಿಗೆ ಲೋಕಸತ್ತೆಯಲ್ಲಿ ವಿಶ್ವಾಸವಿದ್ದಿಲ್ಲ. ಇಟಲಿಯ ಸ್ವಾತಂತ್ರ್ಯವನ್ನು ಪಡೆದು ಪಿಡ್‌ಮೊಂಟದ ಅರಸನ ಕೈಕೆಳಗೆ ಅದರ ಏಕೀಕರಣಮಾಡುವದು ಇವರ ಉದ್ದಿಷ್ಟವಾಗಿತ್ತು. ಜಯವು ನಿಶ್ಚಯು ವಾಗಿ ಸಿಗುವದೆಂದು ತಿಳಿಯುವ ತನಕ ಬಂಡು ಹೂಡುವದು ತಲೆತಿರುಕತನವೆಂದು ಇವರು ತಿಳಿಯುತ್ತಿದ್ದರು. ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಪರರಾಜ್ಯದ ಸಹಾ ಯವು ಅಪರಿಹಾರ್ಯವಾದದ್ದೆಂತಲೂ. ಬೇಕಾದ ಸೌಕರ್ಯಗಳನ್ನು ಒದಗಿಸಿ

ಕೊಟ್ಟು ಪರರಾಜ್ಯದ ಸಹಾಯವನ್ನು ಪಡೆಯಬೇಕೆಂತಲೂ ಇವರ ಅಭಿಪ್ರಾಯ ವಾಗಿತ್ತು.

ಪಿಡ್‍ಮೊಂಟದ ಮಂತ್ರಿಯಾದ ಕ್ಯಾವ್ಹೋರನು ಈ ಪಕ್ಷದ ಮುಖಂಡ ನಾಗಿದ್ದನು. ಇವನು ಪರರಾಷ್ಟ್ರವ್ಯವಹಾರದಲ್ಲಿಯೂ, ಸನದುಗಳುಳ್ಳ ರಾಜ್ಯ ಪದ್ಧತಿಯ ಕಾರಭಾರದಲ್ಲಿಯೂ ಬಹಳ ಚತುರನಾಗಿದ್ದನು. ಸ್ವಾತಂತ್ರ್ಯ ಮತ್ತು ಏಕೀಕರಣಗಳು ಇವನ ಉದ್ದಿಷ್ಟಗಳಾಗಿದ್ದರೂ ಅವುಗಳನ್ನು ಬಹಿರಂಗದಲ್ಲಿ ಆಡಿ ತೋರಿಸದೆ ಗುಪ್ತವಾಗಿಟ್ಟುಕೊಂಡು, ಸಾವಕಾಶವಾಗಿ ಮತ್ತು ವೇಳೆ ಬಂದಂತೆ ಹೋಗುತ್ತಿದ್ದನು. ಫ್ರೆಂಚ ಚಕ್ರವರ್ತಿಯ ಸಹಾಯವನ್ನು ಪಡೆಯದ ಹೊರತು ಆಸ್ಟ್ರಿಯನ್ನರಂಥ ಪ್ರಬಲ ಶತ್ರುಗಳನ್ನು ದೇಶದಿಂದ ಹೊರಗೆ ಹಾಕುವದು ಅಸಾಧ್ಯ ವೆಂದು ಇವನ ಮನವರಿಕೆಯಾಗಿತ್ತು.

ಇದಕ್ಕೆ ವಿರುದ್ಧವಾಗಿ ಮ್ಯಾಝಿನಿಗೆ ಜನತೆಯಲ್ಲಿ ನಿರತಿಶಯವಾದ ವಿಶ್ವಾಸ ವಿತ್ತು. ಜನತೆಯು ಸರ್ವಸಮರ್ಥವಾದದ್ದೆಂತಲೂ, ಅದು ತನ್ನ ಸ್ವಾತಂತ್ರ್ಯ ವನ್ನು ತಾನೇ ಪಡೆಯಬೇಕೆಂತಲೂ, ಇಂಥ ಕಾರ್ಯಕ್ಕೆ ಪರರಾಜ್ಯದ ಸಹಾಯ ಪಡೆಯುವದು ರಾಷ್ಟ್ರದ ಮಾನಕ್ಕೆ ಕಲಂಕಹಚ್ಚುವ ವಿಷಯವೆಂತಲೂ ಅವನು ದೃಢವಾಗಿ ನಂಬಿದ್ದನು. ಆದ್ದರಿಂದ ಮಂದಪಕ್ಷದವರ ಹೇಡಿತನದ ಮತ್ತು ಮಾನಹಾನಿಕರವಾದ ಕಾರ್ಯಕ್ರಮವು ಅವನಿಗೆ ಎಂದೂ ಸರಿಬೀಳಲಿಲ್ಲ.

೧೮೫೯ರಲ್ಲಿ ಕ್ಯಾವ್ಹೋರನ ಗುಪ್ತಕಾರಸ್ಥಾನದಿಂದ ಆಸ್ಟ್ರಿಯದ ಕೂಡ ಯುದ್ಧಪ್ರಸಂಗವು ಸಮೀಪದಲ್ಲಿಯೇ ತೋರಹತ್ತಿತು. ಜನರು ಸ್ವಾತಂತ್ರ್ಯ ಯುದ್ಧಕ್ಕೆ ಆತುರರಾಗಿದ್ದರು. ಇಟಲಿಯೊಳಗಿನ ಲೋಕಸತ್ತಾವಾದಿಗಳೂ ಕೂಡ ತಮ್ಮ ಮತಭೇದಗಳನ್ನು ಮರೆತು ಪಿಡ್‍ಮೊಂಟದ ಅರಸನಾದ ವ್ಹಿಕ್ಟರ್ ಇಮ್ಯಾ ನ್ಯುಅಲ್ಲನ ಆಧಿಪತ್ಯದ ಕೆಳಗೆ ಶತ್ರುಗಳ ಕೂಡ ಹೋರಾಡಲಿಕ್ಕೆ ಸಿದ್ಧರಾಗಿ ದ್ದರು. ಪ್ರಸಿದ್ಧ ದಳವಾಯಿಯಾದ ಗ್ಯಾರಿಬಾಲ್ಡಿಯು ತನ್ನ ಸ್ವಯಂಸೈನಿಕ ಪಥಕ ದೊಂದಿಗೆ ಹೇಳಿದ ಕಡೆಗೆ ಹೋಗಲು ಸಿದ್ಧನಾಗಿದ್ದನು. ಕ್ಯಾವ್ಹೋರನು ಲುಯಿ ನೇಪೋಲಿಯನ್ನನ ಕೂಡ ಗುಪ್ತ ಒಡಂಬಡಿಕೆಯನ್ನು ಮಾಡಿಕೊಂಡು ಅವನಿಂದ ಸಹಾಯದ ಅಭಿವಚನವನ್ನು ಪಡೆದಿದ್ದನು. ಈ ಸಹಾಯದ ಪ್ರತಿಫಲವಾಗಿ

ಸೇವ್ಹೋಯ್ ಮತ್ತು ನಾಯಿಸ್ ಎಂಬೆರಡು ಪ್ರಾಂತಗಳನ್ನು ಫ್ರಾನ್ಸಕ್ಕೆ ಬಿಟ್ಟು ಕೊಡಬೇಕೆಂದು ಗೊತ್ತಾಗಿತ್ತು.

ಯುದ್ಧವು ಪ್ರಾರಂಭವಾಯಿತು. ಸ್ವಲ್ಪ ದಿವಸಗಳಲ್ಲಿ ಲೊಂಬಾರ್ಡಿ ಮತ್ತು ವ್ಹೆನಿಶಿಯಾ ಪ್ರಾಂತಗಳು ಆಸ್ಟ್ರಿಯಾದ ಕೈಬಿಟ್ಟು ಪಿಡ್‌ಮೊಂಟಕ್ಕೆ ಕೂಡಿದವು. ಮಧ್ಯ ಇಟಲಿಯ ಸಂಸ್ಥಾನಗಳ ರಾಜರು ತಮ್ಮ ರಾಜ್ಯಪರಿತ್ಯಾಗಮಾಡಿ ಓಡಿ ಹೋದರು. ಅಲ್ಲಿಯ ಪ್ರಜೆಗಳು ಪಿಡ್‌ಮೊಂಟದ ಆಧಿಪತ್ಯಕ್ಕೆ ಕೂಡಿಕೊಳ್ಳುವ ಮನಸ್ಸುಳ್ಳವರಾಗಿದ್ದರು. ಇಂಥ ವೇಳೆಯಲ್ಲಿ ನೆಪೋಲಿಯನ್ನನು ಆಸ್ಟ್ರಿಯಾದ ಕೂಡ ಗುಪ್ತಸಂಧಿಯನ್ನು ಮಾಡಿ ವ್ಹೆನಿಸಿಯಾಪ್ರಾಂತವನ್ನು ಅವರಿಗೆ ಬಿಟ್ಟು ಕೊಟ್ಟು ತನ್ನ ಸೈನ್ಯದೊಂದಿಗೆ ತನ್ನ ದೇಶಕ್ಕೆ ಹೊರಟುಹೋದನು. ಆದರೆ ಇದ ರಿಂದ ವ್ಹಿಕ್ಟರ್ ಇಮ್ಯಾನ್ಯುಅಲ್ಲನು ಧೈರ್ಯಗುಂದದೆ ಯುದ್ಧವನ್ನು ಹಾಗೇ ಸಾಗಿಸಿದನು. ಈ ವೇಳೆಯಲ್ಲಿ ವ್ಯಾಝಿನಿಯು ಇಟಲಿಗೆ ಬಂದು ತನ್ನ ಲೋಕ ಸತ್ತಾತತ್ವವನ್ನು ಸದ್ಯಕ್ಕೆ ಬದಿಗಿಟ್ಟು, ಸ್ವಾತಂತ್ರ್ಯದ ಮತ್ತು ಏಕೀಕರಣದ ಯುದ್ಧಕ್ಕೆ ಒಳಿತಾಗಿ ಸಹಾಯಮಾಡಿದನು. ಫ್ರಾನ್ಸದ ಸಹಾಯವು ಹೋದ ದ್ದಕ್ಕೆ ಉತ್ಸಾಹಹೀನರಾಗಬಾರದೆಂತಲೂ, ಸ್ವಯಂಸೈನಿಕರ ಪಥಕಗಳನ್ನು ಪೋಪನ ಸಂಸ್ಥಾನಗಳಿಗೂ ದಕ್ಷಿಣ ಇಟಲಿಗೂ ಕಳಿಸಿ, ಅವುಗಳನ್ನು ಪಾದಾಕ್ರಾಂತಮಾಡ ಬೇಕೆಂತಲೂ ಇಮ್ಯಾನ್ಯುಅಲ್ಲನಿಗೆ ಒಂದು ಪತ್ರ ಬರೆದನು. ಈ ಕೆಲಸಕ್ಕೆ ಅರ ಸನು ಇನ್ನೂ ಅನುಮಾನಿಸುತ್ತಿರುವಾಗ, ಇವನು ಊರಿಂದ ಊರಿಗೆ ಪ್ರವಾಸ ಮಾಡಿ ಜನರಲ್ಲಿ ಉತ್ಸಾಹವನ್ನು ಬೀರಿ, ಸ್ವಯಂಸೈನಿಕರಿಗೆ ಗ್ಯಾರಿಬಾಲ್ಡಿಯ ಸೇನಾನಾಯಕತ್ವದ ಕೆಳಗೆ ದಕ್ಷಿಣಕ್ಕೆ ದಂಡೆತ್ತಿ ಹೋಗಲಿಕ್ಕೆ ಹುರಿದುಂಬಿಸಿದನು.

ದಕ್ಷಿಣದಲ್ಲಿ ಗ್ಯಾರಿಬಾಲ್ಡಿಯೂ ಅವನ ಸ್ವಯಂಸೈನಿಕರೂ ಅಪ್ರತಿಮ ಕಾರ್ಯಸಾಹಸಗಳನ್ನು ತೋರಿಸಿದರು. ಅವನಿಗೆ ಹೋದಹೋದಲ್ಲಿ ವಿಜಯ ಲಕ್ಷ್ಮಿಯು ಮಾಲೆಹಾಕಿದಳು ಅವನು ಸಿಸಿಲೀಪ್ರಾಂತವನ್ನು ಕೈವಶಮಾಡಿಕೊಂಡು ನೇಪಲ್ಸರಾಜ್ಯವನ್ನು ಸುಲಭವಾಗಿ ಪಾದಾಕ್ರಾಂತಮಾಡಿದನು. ಮುಂದೆ ಅವನು ರೋಮಪಟ್ಟಣದ ಮೇಲೆ ಸಾಗಿಹೋಗುವವನಿದ್ದನು. ಆದರೆ ಇವನ ಪ್ರಾಬಲ್ಯದ ಏರಿಕೆಯನ್ನು ನೋಡಿ ಅಂಜಿ ವ್ಹಿಕ್ಟರ್ ಇಮ್ಯಾನ್ಯುಅಲ್ಲನು ಲಗಬಗೆಯಿಂದ ದಕ್ಷಿಣಕ್ಕೆ ಬಂದು, ಪೋಪನ ಸೈನ್ಯವನ್ನು ಸೋಲಿಸಿ ಗ್ಯಾರಿಬಾಲ್ಡಿಯನ್ನು ಬಂದು

ಕೂಡಿದನು. ಸಿಸಿಲಿ ಮತ್ತು ನೇಪಲ್ಸದ ರಾಜ್ಯಗಳು ಬಹುಜನಮತದಿಂದ ಪಿಡ್ಮೊಂಟದ ಆಧಿಪತ್ಯಕ್ಕೆ ಕೂಡಿಕೊಂಡವು. ಈ ಪ್ರಕಾರ ವ್ಹೆನಿಸ್ ಮತ್ತು ರೋಮ ಪ್ರಾಂತಗಳನ್ನು ಮಾತ್ರ ಬಿಟ್ಟು ಉಳಿದ ಎಲ್ಲ ಇಟಲಿಯು ವ್ಹಿಕ್ಟರ ಇಮ್ಯಾನ್ಯುಅಲ್ಲನ ಅರಸೊತ್ತಿಗೆಗೆ ಒಳಪಟ್ಟಿತು.

## ೧೦ನೇ ಪ್ರಕರಣ.

## ಏಕೀಕರಣದ ಪೂರ್ಣತೆಯು.

ಮ್ಯಾಝಿನಿಯ ಮುಂದಿನ ಆಯುಷ್ಯಕ್ರಮವು ಬಹುಮಟ್ಟಿಗೆ ಫಲಶೂನ್ಯವಾಗಿ ಭಾಸವಾಗುತ್ತದೆ. ಅವನ ಧ್ಯೇಯಗಳು ನಿರ್ದೋಷವೂ ಪವಿತ್ರವೂ ಇದ್ದದ್ದು ಮಾತ್ರ ನಿಜವು. ಆದರೆ ಅವನು ಬಹು ದಿವಸ ಸ್ವದೇಶದಿಂದ ದೂರವಾಗಿ ದೇಶಾಂತರದಲ್ಲಿರುತ್ತಿದ್ದದ್ದರಿಂದ ಅವನು ಕೇವಲ ಸುದ್ದಿಗಾರರ ಮಾತಿನ ಮೇಲಿಂದ ಅಥವಾ ಪತ್ರಗಳ ಮೇಲಿಂದ ಇಟಲಿಯ ಜನತೆಯ ಮನಃಸ್ಥಿತಿಯನ್ನು ತಿಳುಕೊಳ್ಳಬೇಕಾಗಿತ್ತು. ಇದರಿಂದ ಅವನಿಗೆ ಜನತೆಯ ಸ್ಥಿತಿಯ ಯಥಾರ್ಥಜ್ಞಾನವು ಎಂದೂ ಆಗುತ್ತಿರಲಿಲ್ಲ. ಇದಲ್ಲದೆ ಅವನ ಆತ್ಮವಿಶ್ವಾಸಕ್ಕೂ ಜನತೆಯ ಶಕ್ತಿಯ ಮೇಲಿನ ವಿಶ್ವಾಸಕ್ಕೂ ಪಾರಾವಾರವಿದ್ದಿಲ್ಲ. ಇವೆಲ್ಲ ಕಾರಣಗಳಿಂದ ಅವನು ಅಸಾಧ್ಯವಾದ ಕಾರ್ಯಗಳಿಗೆ ಕೈಹಾಕುತ್ತಿದ್ದನು. ಅದರಿಂದ ಅವನ ಪ್ರಯತ್ನಗಳು ತಾತ್ಕಾಲಿಕ ದೃಷ್ಟಿಯಿಂದ ನೋಡಿದರೆ ಫಲಶೂನ್ಯವಾಗಿ ಭಾಸವಾಗುತ್ತಿದ್ದವು.

ಅವನು ಇತ್ತಲಾಗಿ ವೃದ್ಧಾಪ್ಯದಿಂದ ಕೃಶನೂ ಅಶಕ್ತನೂ ಆಗಹತ್ತಿದನು. ಅವನಿಗೆ ಆಗಾಗ್ಗೆ ಹೊಟ್ಟೆಶೂಲಿಯು ಏಳುತ್ತಿತ್ತು. ಇದಲ್ಲದೆ ಅವನಿಗೆ ಸಂಧಿವಾತದ ಬಾಧೆಯೂ ಇತ್ತು. ಕಣ್ಣುಗಳು ಮಂದವಾಗಹತ್ತಿದ್ದವು. ಬಂದ ದುಡ್ಡನ್ನೆಲ್ಲ ತನ್ನ ರಾಜಕೀಯ ಕಾರ್ಯಕ್ರಮಕ್ಕೆ ಹಾಕುತ್ತಿದ್ದದ್ದರಿಂದ ಅವನಿಗೆ ಆಗಾಗ್ಗೆ ದುಡ್ಡಿನ ಕೊರತೆಯಾಗುತ್ತಿತ್ತು. ಒಮ್ಮೆ ಟ್ಯೂರಿನ್ನದ ಜನರು ಅವನ ದೆಸೆಯಿಂದ ಫಂಡು ಕೂಡಿಸಿ ಅವನಿಗೆ ಲಂಡನಕ್ಕೆ ಕಳಿಸಲು, ಅವನು ಅದನ್ನು

ತನ್ನ ಸ್ವಂತ ಪೆಚ್ಚಕ್ಕೆ ಉಪಯೋಗಿಸದೆ ವ್ಹೇನಿಸದ ಸ್ವಾತಂತ್ರ್ಯಫಂಡಿಗೆ ಕೊಟ್ಟು ಬಿಟ್ಟನು. ಇಷ್ಟಾದರೂ ಅವನು ತನ್ನ ಲೋಕಜಾಗೃತಿಯ ಕಾರ್ಯವನ್ನು ಏಕ ನಿಷ್ಠೆಯಿಂದ ನಡಿಸಿದನೆಂಬದು ಅವನ ಆತ್ಮವಿಶ್ವಾಸದ ಮತ್ತು ನಿಸ್ಸೀಮವಾದ ಸ್ವದೇಶಪ್ರೀತಿಯ ದ್ಯೋತಕವಾಗಿದೆ.

ಇನ್ನೂ ಇಟಲಿಯ ಏಕೀಕರಣವು ಪೂರ್ಣವಾಗಿದ್ದಿಲ್ಲ. ವ್ಹೇನಿಸಪ್ರಾಂತವೂ ಆಸ್ಟ್ರಿಯಾದ ಕೈಯಲ್ಲಿಯೇ ಇತ್ತು. ರೋಮಪ್ರಾಂತವು ಫ್ರೇಂಚರಿಂದ ರಕ್ಷಿತನಾದ ಪೋಪನ ಕೈಯಲ್ಲಿ ಇತ್ತು. ಇವೆರಡೂ ಇಟಲಿಗೆ ಕೂಡದ ಹೊರತು ಮ್ಯಾಝಿನಿಗೆ ಸಮಾಧಾನವಿದ್ದಿಲ್ಲ ರೋಮವು ಸ್ವತಂತ್ರವಾದ ಇಟಲಿಯಲ್ಲಿ ಕೂಡಿದರೆ ಧಾರ್ಮಿಕ ವಿಚಾರಸ್ವಾತಂತ್ರ್ಯದ ವಿಜಯವಾಗುವದೆಂತಲೂ, ವ್ಹೇನಿಸವು ಕೂಡಿದರೆ ಆಸ್ಟ್ರಿಯನ್ನಸಾಮ್ರಾಜ್ಯವು ಮುರಿದು, ಮಧ್ಯ ಮತ್ತು ಪೂರ್ವ ಯುರೋಪದೊಳಗಿನ ಸಣ್ಣ ರಾಷ್ಟ್ರಗಳ ಉದ್ಧಾರವಾಗುವದೆಂತಲೂ ಅವನ ತಿಳುವಳಿಕೆಯಿತ್ತು. ರೋಮವು ಕ್ಯಾಥೊಲಿಕ್ ಜನರ ಧರ್ಮಗುರುವಾದ ಪೋಪನ ಚಿರಕಾಲದ ರಾಜಧಾನಿಯಾಗಿದ್ದುದ್ದರಿಂದ ಕ್ಯಾಥೊಲಿಕ್ ಧರ್ಮಪಂಥದ ಫ್ರಾನ್ಸದೇಶದ ಸೈನ್ಯವು ಅದನ್ನು ಸಂರಕ್ಷಿಸುತ್ತಿತ್ತು. ಇಂಥ ಪಟ್ಟಣದ ಮೇಲೆ ದಂಡೆತ್ತಿ ಹೋದರೆ ಫ್ರಾನ್ಸವು ಅಬ್ಬರಿಸಿ ಅದರ ರಕ್ಷಣೆಗೆ ಬರಬಹುದಾದ್ದರಿಂದ ನೂತನ ರಾಷ್ಟ್ರವಾದ ಇಟಲಿಗೆ ಅದನ್ನು ಪಾದಾಕ್ರಾಂತಮಾಡಲು ಯತ್ನಿಸುವದು ಬಹು ಗಂಡಾಂತರಮಯವಾಗಿತ್ತು. ಆದ್ದರಿಂದ ಮ್ಯಾಝಿನಿಯು ಮೊದಲು ವ್ಹೇನಿಸ್ ಪ್ರಾಂತವನ್ನು ಗೆಲ್ಲಬೇಕೆಂದು ಯೋಚಿಸಿದನು. ಅಲ್ಲಿಯ ಜನರಿಂದ ಬಂಡನ್ನು ಹೂಡಿಸಿ ಅಥವಾ ಅಲ್ಲಿಗೆ ಹೊರಗಿನಿಂದ ಸ್ವಯಂಸೈನಿಕ ಪಥಕವನ್ನು ಕಳಿಸಿ ಅದನ್ನು ತೀವ್ರವಾಗಿ ಸ್ವತಂತ್ರಮಾಡಬೇಕೆಂದು ಮ್ಯಾಝಿನಿಯು ಚಳವಳಿಯನ್ನು ನಡಿಸಿದನು.

ಇತ್ತ ಕ್ಯಾವ್ಹೂರನ ತರುವಾಯ ಬಂದ ಮಂತ್ರಿಗಳು ದುರ್ಬಲರೂ, ಗಾಳಿಬಂದಂತೆ ಹೋಗುವವರೂ ಧೈರ್ಯಹೀನರೂ ಆಗಿದ್ದರು. ಗ್ಯಾರಿಬಾಲಿಯು ರೋಮದ ಮೇಲೆ ದಂಡೆತ್ತಿ ಹೋಗುವದಕ್ಕೆ ಒಂದೇ ಸಮನೇ ಹಾತೊರೆಯುವದನ್ನು ನೋಡಿ ಅವರು ಅವನಿಗೆ ಗುಪ್ತಸಹಾಯವನ್ನು ಮಾಡುವ ವಚನ ಕೊಟ್ಟು, ರೋಮದ ಮೇಲೆ ಸಾಗಿಹೋಗಲಿಕ್ಕೆ ಹೇಳಿದರು. ಆ ಪ್ರಕಾರ ೧೮೬೨ರಲ್ಲಿ ಗ್ಯಾರಿಬಾಲ್ಡಿಯು "ರೋಮವನ್ನು ಗೆಲ್ಲುವೆನು, ಇಲ್ಲವೆ ಸಾಯುವೆನು" ಎಂದು ಪ್ರತಿಜ್ಞೆಯನ್ನು ಮಾಡಿ ರೋಮದ ಮೇಲೆ ತನ್ನ ಸ್ವಯಂಸೈನಿಕರೊಂದಿಗೆ

ಬರುತ್ತಿರಲು, ಇಟಲೀ ಸರಕಾರದವರು ಫ್ರಾನ್ಸದ ಬೆದರಿಕೆಗೆ ಅಂಜಿ ತಮ್ಮ ಸೈನ್ಯವನ್ನು ಗ್ಯಾರಿಬಾಲ್ಡಿಯ ಮೇಲೆ ಕಳಿಸಿ ಅವನ ಸ್ವಯಂಸೈನಿಕರನ್ನು ಮುರಿಬಡಿದರು. ಈ ಯುದ್ಧದಲ್ಲಿ ಗ್ಯಾರಿಬಾಲ್ಡಿಗೆ ಭಯಂಕರವಾದ ಘಾಯವಾಯಿತು. ಇಟಲೀ ಸರಕಾರದ ಸೈನ್ಯವು ಇಟಲಿಯ ಸ್ವಯಂಸೈನಿಕರ ಕೂಡ ಹೋರಾಡಿದ ಸಂಗತಿಯನ್ನೂ, ಗ್ಯಾರಿಬಾಲ್ಡಿಗೆ ಗುಂಡುಬಡಿದು ಘಾಯವಾದದ್ದನ್ನೂ ಕೇಳಿ ಮಹಾತ್ಮನಾದ ಮ್ಯಾಝಿನಿಗೆ ಅತ್ಯಂತ ದುಃಖವಾಗಿ ಅವನು ಮೂರ್ಛೆಹೋದನು. ಅವನು ಎಚ್ಚತ್ತ ಮೇಲೆ ರಾಜಸತ್ತೆಯ ಆಳಿಕೆಯಲ್ಲಿ ಇಂಥ ಘೋರವಾದ ಕೃತ್ಯಗಳು ಆಗಬಹುದಾದರೆ ಅದನ್ನು ನಾಶಮಾಡಿ ಪ್ರಜಾಸತ್ತೆಯನ್ನು ನೆಲೆಗೊಳಿಸಲು ಟೊಂಕಕಟ್ಟಬೇಕೆಂದು ಉಸುರಿದನು.

ಮರುವರ್ಷ ವ್ಹಿಕ್ಟರ್ ಇಮ್ಯಾನ್ಯುಅಲ್ಲನು ಮ್ಯಾಝಿನಿಯ ಲೋಕಪ್ರಿಯತೆಯನ್ನೂ ಲೋಕೋತ್ತರ ಸಂಘಟನಾಶಕ್ತಿಯನ್ನೂ ಅರಿತು ಅವನ ಕೂಡ ಒಡಂಬಡಿಕೆ ಮಾಡಿಕೊಂಡನು. ಮ್ಯಾಝಿನಿಯು ಪ್ರಜಾಸತ್ತೆಯ ಚಳವಳಿಯನ್ನು ಬಿಟ್ಟುಕೊಟ್ಟು ವ್ಹೇನಿಸ್ ಪ್ರಾಂತದಲ್ಲಿ ಬಂಡುಮಾಡಿಸಬೇಕು; ಈ ಕೆಲಸಕ್ಕೆ ಅರಸನು ಯುದ್ಧಸಾಮಗ್ರಿಯನ್ನು ಪೂರೈಸಬೇಕು; ಈಪ್ರಕಾರ ಗೊತ್ತಾಯಿತು. ಆದರೆ ಮುಂದೆ ಅರಸನಿಗೆ ಮ್ಯಾಝಿನಿಯ ರಾಜನಿಷ್ಠೆಯ ಬಗ್ಗೆ ಸಂಶಯಬಂದು ಈ ಒಡಂಬಡಿಕೆಯನ್ನು ಮುರಿದುಬಿಟ್ಟನು.

೧೮೬೪ರಲ್ಲಿ ಈ ಅರಸನು ನೆಪೋಲಿಯನ್ ಚಕ್ರವರ್ತಿಯ ಕೂಡ ಒಡಂಬಡಿಕೆಯನ್ನು ಮಾಡಿಕೊಂಡನು. ನೆಪೋಲಿಯನ್ನನು ಮುಂದೆ ಎರಡು ವರ್ಷಗಳಲ್ಲಿ ರೋಮಪಟ್ಟಣವನ್ನು ಬಿಟ್ಟುಕೊಡಲಿಕ್ಕೆ ಒಪ್ಪಿದನು. ೧೮೬೬ರಲ್ಲಿ ಆಸ್ಟ್ರಿಯಕ್ಕೂ ಪ್ರಶಿಯಾಕ್ಕೂ ಯುದ್ಧವಾಗುವ ಚಿಹ್ನಗಳು ತೋರಹತ್ತಿದವು. ಪ್ರಶಿಯಾದ ಪ್ರಖ್ಯಾತ ಮುತ್ಸದ್ದಿಯಾದ ಬಿಸ್ಮಾರ್ಕನು ಆಸ್ಟ್ರಿಯದ ವಿರುದ್ಧವಾಗಿ ಇಟಲಿಯ ಕೂಡ ಒಪ್ಪಂದವನ್ನು ಮಾಡಿಕೊಂಡನು. ಮುಂದೆ ಸ್ವಲ್ಪ ದಿವಸಗಳಲ್ಲಿ ಯುದ್ಧವು ಆರಂಭವಾಯಿತು. ಆಸ್ಟ್ರಿಯದ ಸೈನ್ಯವೂ ಹಡಗುಪಡೆಯೂ ಇಟಲಿಯನ್ನು ಪೂರ್ಣವಾಗಿ ಸೋಲಿಸಿದವು. ಆದರೆ ಆಸ್ಟ್ರಿಯವು ಪ್ರಶಿಯದ ಕೂಡ ಆದ ಯುದ್ಧದಲ್ಲಿ ಪರಾಜಯಹೊಂದಿತು. ವಿಜಯಶಾಲಿಯಾದ ಬಿಸ್ಮಾರ್ಕನು ತನ್ನ ವಚನದ ಪ್ರಕಾರ ವ್ಹೇನಿಸವನ್ನು ಇಟಲಿಗೆ ಕೊಡಿಸಿದನು.

ಈ ಅಪಜಯಗಳಿಂದಲೂ, ವ್ಹೇನಿಸವು ಬಿಸ್ಮಾರ್ಕನ ಉಪಕಾರದಿಂದ ಸಿಕ್ಕದ್ದರಿಂದಲೂ ಮ್ಯಾಝಿನಿಗೂ ಇಟಲಿಯ ಜನತೆಗೂ ಬಹಳ ಅಪಮಾನವೆನಿಸಿತು.

ಅರಸನ ಮತ್ತೂ ಅವನ ಮಂತ್ರಿಗಳ ಕೃಷ್ಣಕಾರಸ್ಥಾನಕ್ಕೂ ಅಭಿಮಾನಶೂನ್ಯತೆಗೂ ಅಸಹ್ಯಗೊಂಡವನಾಗಿ ಪುನಃ ಪ್ರಜಾಸತ್ತೆಯ ಚಳವಳಿಯನ್ನು ಆರಂಭಿಸಿದನು. ಜಗತ್ತಿನಲ್ಲಿ ಇಟಲಿಗೆ ಸನ್ಮಾನನೀಯವಾದ ಪದವು ಸಿಗಬೇಕಾದರೆ ಮತ್ತು ಇಟಲಿಯಿಂದ ಸ್ವಾತಂತ್ರ್ಯಕ್ಕಾಗಿ ಹೆಣಗುವ ಸಣ್ಣ ಜನಾಂಗಗಳಿಗೆ ಸಹಾಯವು ಸಿಗಬೇಕಾದರೆ, ಇಟಲಿಯು ರಾಜಸತ್ತೆಯನ್ನು ಕಿತ್ತುಹಾಕಿ ಪ್ರಜಾಸತ್ತೆಯನ್ನು ಸ್ಥಾಪಿಸಬೇಕೆಂದು ಮ್ಯಾಝಿನಿಯ ಪೂರ್ಣ ಮನವರಿಕೆಯಾಯಿತು. ದೇಶದಲ್ಲಿಯಾದರೂ ಜನರು ರಾಜನ ಮೇಲೆ ಸಿಟ್ಟಾಗಿ ಮ್ಯಾಝಿನಿಯ ಚಳವಳಿಗೆ ಸಹಾನುಭೂತಿಯನ್ನು ತೋರಿಸಿದರು. ಅವನ ಲೋಕಪ್ರಿಯತೆಯು ಪರಮಾವಧಿಗೆ ಹೋಯಿತು. ಅವನ ಮೇಲೆ ಇನ್ನೂ ದೇಹಾಂತಶಿಕ್ಷೆಯ ತೀರ್ಪು ಇದ್ದದ್ದರಿಂದ ಅವನು ಪ್ರಸಿದ್ಧವಾಗಿ ಇಟಲಿಗೆ ಬರುವಂತೆ ಇದ್ದಿಲ್ಲ. ನಾಲ್ವತ್ತುಸಾವಿರ ಜನರ ಸಹಿಗಳುಳ್ಳ ಒಂದು ಅರ್ಜಿಯು ಮ್ಯಾಝಿನಿಯ ಬಂಧಮುಕ್ತತೆಗಾಗಿ ಅರಸನ ಕಡೆಗೆ ಕಳಿಸಲ್ಪಟ್ಟಿತು. ಮೆಸಿನಾ ಪಟ್ಟಣದ ಜನರು ಮ್ಯಾಝಿನಿಯನ್ನು ಅನೇಕ ಸಾರೆ ತಮ್ಮ ಪಾರ್ಲಿಮೆಂಟಿನ ಪ್ರತಿನಿಧಿಯನ್ನಾಗಿ ಆರಿಸಿದರು. ಕಡೆಗೆ ಮ್ಯಾಝಿನಿಯ ಮೇಲಿನ ಶಿಕ್ಷೆಯು ರದ್ದಾಯಿತು. ಆದರೂ ಸರಕಾರದಿಂದ ಉಪಕಾರವನ್ನು ಸ್ವೀಕರಿಸಲು ಮನಸ್ಸಿಲ್ಲದವನಾಗಿ ಮ್ಯಾಝಿನಿಯು ಸ್ವಾತಂತ್ರ್ಯವನ್ನು ಸ್ವೀಕರಿಸದೆ ಇಟಲಿಗೆ ಬಂದಾಗೆಲ್ಲ ವೇಷಧಾರಿಯಾಗಿಯೇ ಸಂಚರಿಸುತ್ತಿದ್ದನು.

೧೮೬೭ರಲ್ಲಿ ಇಟಲೀ ಸರಕಾರದವರು ಗ್ಯಾರಿಬಾಲ್ಡಿಗೆ ಮತ್ತೊಮ್ಮೆ ರೋಮದ ಮೇಲೆ ದಂಡೆತ್ತಿ ಹೋಗಲಿಕ್ಕೆ ಹೇಳಿದರು. ನೆಪೋಲಿಯನ್ನನು ನಗರರಕ್ಷಣೆಗೆ ಮತ್ತೆ ತನ್ನ ಸೈನ್ಯವನ್ನು ಕಳುಹಿದನು. ಗ್ಯಾರಿಬಾಲ್ಡಿಯ ಸ್ವಯಂಸೈನಿಕರಿಗೂ ಫ್ರೆಂಚ್ ಸೈನ್ಯಕ್ಕೂ ಯುದ್ಧವಾಗಿ ಗ್ಯಾರಿಬಾಲ್ಡಿಯು ಸೋತನು. ಫ್ರಾನ್ಸದ ಅಂಜಿಕೆಯಿಂದ ಇಟಲಿಯ ಸರಕಾರದವರು ಗ್ಯಾರಿಬಾಲ್ಡಿಯನ್ನು ಹಿಡಿದು ಹದ್ದುಪಾರು ಮಾಡಿದರು. ಮೊದಲು ರೋಮದ ಮೇಲೆ ಸಾಗಿಹೋಗಲಿಕ್ಕೆ ತಾವೇ ಹೇಳಿದ ಸರಕಾರವು ಗ್ಯಾರಿಬಾಲ್ಡಿಗೆ ಈ ಪ್ರಕಾರ ದಂಡನೆಮಾಡಿದ್ದನ್ನು ನೋಡಿ ಜನರು ಸರಕಾರದ ಮೇಲೆ ರೋಷವುಳ್ಳವರಾದರು. ಕೆಲವು ಜನರು ಮ್ಯಾಝಿನಿಯ ಪ್ರಜಾಸತ್ತೆಯ ಚಳವಳಿಯಲ್ಲಿ ಕೂಡಿದರು. ರಾಜಪಕ್ಷದವರು ಫ್ರೆಂಚ ಸರಕಾರದ ಅಂಜಿಕೆಯಲ್ಲಿರುವರೆಂತಲೂ, ಅವರ ಕೈಯಿಂದ ರೋಮವನ್ನು ಪಾದಾಕ್ರಾಂತಮಾಡುವದು ಅಶಕ್ಯವೆಂತಲೂ ನಂಬಿ ಮ್ಯಾಝಿನಿಯು ಒಂದು ಸಂಚುಮಾಡಿದನು. ಈ

ಸಾರೆ ಸರಕಾರದ ಸೈನ್ಯ, ಹಡಗುಪಡೆ, ಆಯುಧಸಾಮಗ್ರಿ ಎಲ್ಲವನ್ನೂ ತಮ್ಮ ಕಡೆಗೆ ಮಾಡಿಕೊಂಡು ರೋಮದ ಮೇಲೆ ಸಾಗಿಹೋಗಿ ಅದನ್ನು ವಶಮಾಡಿಕೊಳ್ಳಬೇಕೆಂತಲೂ, ರೋಮ ಪಟ್ಟಣದಿಂದ ಪ್ರಜಾಸತ್ತೆಯ ಜಾಹೀರನಾಮೆಯನ್ನು ತೆಗೆಯಬೇಕೆಂತಲೂ ಮ್ಯಾಝಿನಿಯ ವಿಚಾರಗಳಿದ್ದವು. ಈ ಕೆಲಸಕ್ಕಾಗಿ ಅವನು ಸ್ವಿಡ್ಝರ್ಲಂಡದಲ್ಲಿದ್ದುಕೊಂಡು ಮೇಲಿಂದ ಮೇಲೆ ಗುಪ್ತವೇಷದಿಂದ ಜಿನೊವ್ಹಾ ಶಹರಕ್ಕೆ ಬರುತ್ತಿದ್ದನು.

೧೮೭೦ರಲ್ಲಿ ಉಳಿದ ಸಂಚುಗಳಂತೆ ಈ ಸಂಚಾದರೂ ಕೆಟ್ಟುಹೋಯಿತು ಅಷ್ಟರಲ್ಲಿ ಫ್ರಾನ್ಸಕ್ಕೂ ಜರ್ಮನಿಗೂ ಯುದ್ಧವು ಪ್ರಾರಂಭವಾಯಿತು. ಇಟಲಿಯು ಫ್ರಾನ್ಸದ ಕಡೆಗೆ ಆಗಬಾರದೆಂದು ಬಿಸ್ಮಾರ್ಕನು ಮ್ಯಾಝಿನಿಯ ಕೂಡ ಗುಪ್ತಸಂಧಿಯನ್ನು ಮಾಡಿಕೊಂಡನು. ಈ ಸ್ನೇಹದ ಪ್ರತಿಫಲವಾಗಿ ಬಿಸ್ಮಾರ್ಕನು ಮ್ಯಾಝಿನಿಯ ಪ್ರಜಾಸತ್ತೆಯ ಬಂಡಿಗೆ ಸೈನ್ಯವನ್ನೂ ದುಡ್ಡನ್ನೂ ಕಳಿಸಲು ವಚನಕೊಟ್ಟನು. ಆದರೆ ಇದು ಕಪಟ ವಚನವಾಗಿತ್ತು. ಮ್ಯಾಝಿನಿಯು ಬಿಸ್ಮಾರ್ಕನ ಮೇಲೆ ವಿಶ್ವಾಸವನಿಟ್ಟು ಬಂಡಿನ ಸಿದ್ಧತೆಗೆ ಸಿಸಿಲೀ ನಡುಗಡ್ಡೆಗೆ ಹೋದನು. ಅಲ್ಲಿ ಅವನು ಹಡಗದಿಂದ ಇಳಿದ ಕೂಡಲೇ ಇಟಲೀ ಸರಕಾರದವರು ಅವನನ್ನು ಹಿಡಿದು ಗೀಟಾ ಎಂಬಲ್ಲಿಗೆ ಒಯ್ದು ಸೆರೆಯಿಟ್ಟರು.

ಮುಂದೆ ಪ್ರಶಿಯಾದ ಕೂಡ ನಡೆದ ಯುದ್ಧಕ್ಕಾಗಿ ರೋಮದೊಳಗಿನ ತನ್ನ ಸೈನ್ಯವನ್ನು ಹಿಂದಕ್ಕೆ ತರಿಸಿಕೊಳ್ಳುವ ಪ್ರಸಂಗ ಬಿದ್ದದರಿಂದ ಆ ಸಂಧಿಯನ್ನು ಸಾಧಿಸಿ ವ್ಹಿಕ್ಟರ್ ಇಮ್ಯಾನ್ಯುಅಲ್ಲನು ಸುಲಭವಾಗಿ ರೋಮವನ್ನು ಹಸ್ತಗತಮಾಡಿಕೊಂಡನು. ರೋಮದ ಜನರೂ ಇಟಲಿಯ ರಾಜ್ಯಕ್ಕೆ ಕೂಡಲು ಒಪ್ಪಿದ್ದರಿಂದ ಅದು ಇಟಲಿಗೆ ಕೂಡಿ ಇನ್ನುಮುಂದೆ ಅದರ ರಾಜಧಾನಿಯಾಯಿತು. ಈ ಪ್ರಕಾರ ಇಟಲಿಯ ಏಕೀಕರಣವು ಪೂರ್ಣವಾಯಿತು.

---

## ೧೧ನೇ ಪ್ರಕರಣ.

## ಅಂತ್ಯಕಾಲವು.

ಗೀಟಾದ ಜೇಲಿನಲ್ಲಿ ಮ್ಯಾಝಿನಿಯು ಸುಮಾರು ಎರಡು ತಿಂಗಳು ಇದ್ದನು. ಅಲ್ಲಿ ಅವನಿಗೆ ಒಳ್ಳೇ ರೀತಿಯಿಂದ ನಡಿಸಿಕೊಂಡರು. ಸರಕಾರದ ರೋಷಕ್ಕೆ

ಪಾತ್ರನಾದರೂ ಅವನೊಬ್ಬ ಇಟಲಿಯ ಮಹಾತ್ಮನಾದ ದೇಶಭಕ್ತನೆಂಬದು ಜೇಲಿನ ಜನರಿಗೂ ತಿಳಿಯದೆ ಇರಲಿಲ್ಲ. ಮುಂದೆ ಅರಸನಿಗೆ ಪುತ್ರೋತ್ಸವವಾದದ್ದರಿಂದ ಅವನಿಗೆ ಬಂಧಮುಕ್ತತೆಯಾಯಿತು. ಆದರೂ ಅರಸನಿಂದ ಸಿಗುವ ಸ್ವಾತಂತ್ರ್ಯವನ್ನು ಸ್ವೀಕರಿಸಲಾರದೆ ಅವನು ಅಜ್ಞಾತವೇಷದಿಂದಲೇ ಇಟಲಿಯಲ್ಲಿ ತಿರುಗಿದನು. ಇದಲ್ಲದೆ ಜನರು ಮಾಡುವ ಸ್ವಾಗತಮಹೋತ್ಸವಗಳು ಅವನಿಗೆ ಬೇಡಾಗಿದ್ದವು. ಯಾವ ಉದ್ದಿಷ್ಟಗಳ ಪ್ರಾಪ್ತಿಗಾಗಿ ಅವನು ಅಖಂಡ ನಾಲ್ವತ್ತು ವರ್ಷಗಳ ವರೆಗೆ ಕಷ್ಟಗಳನ್ನು ಸಹಿಸಿದನೋ ಅಂಥ ಇಟಲಿಯ ಸ್ವಾತಂತ್ರ್ಯವು ತನ್ನ ಜೀವಮಾನದಲ್ಲಿಯೇ ಕೈಗೂಡಿದ್ದನ್ನು ನೋಡಿ ಅವನ ಅಂತಃಕರಣಕ್ಕೆ ಪರಮಾನಂದವೂ, ಕೃತಕೃತ್ಯತೆಯೂ ಅನಿಸಬಹುದಾಗಿತ್ತು. ಆದರೆ ರಾಜಸತ್ತೆಯು ರೋಮದಲ್ಲಿ ಭದ್ರವಾಗಿ ಪ್ರಸ್ಥಾಪಿತವಾಗಿದ್ದದರಿಂದಲೂ, ಪ್ರಜಾಸತ್ತೆಯು ತನ್ನ ಜೀವಮಾನದಲ್ಲಿ ಬರುವ ಆಶೆಯು ಕಾಣದ್ದರಿಂದಲೂ ಅವನ ಮನಸ್ಸಿಗೆ ಸಮಾಧಾನವಿದ್ದಿಲ್ಲ. "ಎಲೈ ಇಟಲಿಯೇ, ನನ್ನ ಅಂತಃಕರಣದ ಆಕಾಂಕ್ಷಾರೂಪವಾದ ಇಟಲಿಯೇ, ಜಗತ್ತಿಗೆ ವಿಶ್ವಬಂಧುತ್ವದ ಪವಿತ್ರಧರ್ಮವನ್ನು ಸಾರಿಹೇಳುವ ನನ್ನ ಮೋಹಕ ಇಟಲಿಯೇ, ನೀನು ಇನ್ನೂ ಎಷ್ಟು ದೂರ ಉಳಿದಿದ್ದಿ! ಇವತ್ತಿನ ಇಟಲಿಯಲ್ಲಿ ಪರರಾಜರ ಇಚ್ಛೆಯಂತೆ ಕುಣಿಯುವವರೂ, ಸ್ವಾರ್ಥಸಾಧುಗಳೂ, ಕುಟಿಲನೀತಿಜ್ಞರೂ, ಹೇಡಿಗಳೂ ಆದ ಕುತಂತ್ರಗಾರರು ರಾಜ್ಯದ ಸೂತ್ರಧಾರರಾಗಿದ್ದಾರೆ. ಇದೇನೋ ನನ್ನ ಆಕಾಂಕ್ಷೆಯ ಆ ಇಟಲಿಯು? ಛೇ, ಅಲ್ಲ. ಇದು ಇಟಲಿಯ ಆತ್ಮವಲ್ಲ ; ಪ್ರೇತವು ! " ಎಂದು ಮ್ಯಾಝಿನಿಯ ಬಾಯಿಂದ ಉದ್ಗಾರ ಹೊರಟಿತು.

ಇನ್ನು ಮುಂದೆ ಮ್ಯಾಝಿನಿಯು ಬಂಡುಮಾಡುವ ಸಂಚುಗಳನ್ನು ಬಿಟ್ಟು ಕೊಟ್ಟನು. ಕೇವಲ ಲೋಕಶಿಕ್ಷಣದಲ್ಲಿಯೂ, ಸಮಾಜಸುಧಾರಣೆಯಲ್ಲಿಯೂ ತನ್ನ ಕಾಲಕಳೆದನು. ಕೂಲಿಕಾರರಿಗೆ ಸಾಯಂಕಾಲದ ವರ್ಗಗಳನ್ನೂ, ಸಾರ್ವಜನಿಕ ಪುಸ್ತಕಾಲಯಗಳನ್ನೂ ತೆಗೆಯಬೇಕೆಂತಲೂ, ಸಹಕಾರಿತ್ವದ ತತ್ತ್ವದ ಪ್ರಕಾರ ಉದ್ಯೋಗಗಳನ್ನೂ ಕಾರಖಾನೆಗಳನ್ನೂ ತೆಗೆಯಬೇಕೆಂತಲೂ ಅವನು ಬೋಧಿಸಿದನು. ತನ್ನ ವಿಚಾರಗಳ ಪ್ರಸಾರಕ್ಕಾಗಿ ಒಂದು ವೃತ್ತಪತ್ರವನ್ನೂ ಹೊರಡಿಸಿದನು.

ಕರ್ಮವೀರನಾದ ಮ್ಯಾಝಿನಿಯ ಜೀವನಯಾತ್ರೆಯು ಮುಗಿಯುತ್ತ ಬಂದಿತ್ತು. ಮುಪ್ಪಿನಿಂದ ಇವನ ದೇಹವು ಜರ್ಜರವಾಗಿತ್ತು. ಇಷ್ಟಾದರೂ ಇವನು

ಅಜ್ಞಾತವಾಸದಲ್ಲಿಯೇ ಇರುತ್ತಿದ್ದನು. ಜಿನೋವ್ಹಾ, ಫ್ಲಾರೆನ್ಸ್, ಪಿಸಾ ಮುಂತಾದ ಪಟ್ಟಣಗಳಿಗೆ ಹೋಗಿ ತನ್ನ ಸ್ನೇಹಿತರ ಭೆಟ್ಟಿಯನ್ನು ತಕ್ಕೊಂಡನು. ತನ್ನ ಗುರುವಾದ 'ಫಾಸ್ಕೋಲೋ' ನ ಗೋರಿಗೆ ಹೋಗಿ ಭಕ್ತಿಯಿಂದ ಅವನಿಗೆ ಪುಷ್ಪಾಂಜಲಿಯನ್ನು ಸಮರ್ಪಿಸಿದನು. ೧೮೭೨ನೇ ಇಸ್ವಿಯ ವಸಂತಕಾಲದಲ್ಲಿ ಇವನು ಪಿಸಾಪಟ್ಟಣದಲ್ಲಿ ಇರುತ್ತಿದ್ದನು. ಅಲ್ಲಿ ಇವನಿಗೆ ಅಸ್ವಸ್ಥತೆಯಾಗಿ ಮಾರ್ಚ ೧೦ನೇ ತಾರೀಖಿನ ದಿವಸ ತನ್ನ ಪುಣ್ಯಕರ ಇಹಲೋಕಯಾತ್ರೆಯನ್ನು ಮುಗಿಸಿ ದಿವಂಗತನಾದನು. ಅವನ ಶರೀರವನ್ನು ಜಿನೋವ್ಹಾ ಶಹರಕ್ಕೆ ಒಯ್ದು ಅಲ್ಲಿ ಅವನ ತಾಯಿಯ ಬಳಿಯಲ್ಲಿ ಅವನ ಸಮಾಧಿಯನ್ನು ಮಾಡಿದರು. ಅವನು ಸ್ವರ್ಗಸ್ಥನಾದ ದಿವಸ ಇಟಲಿಯ ಪಾರ್ಲಮೆಂಟಿನವರು ಸೂತಕವನ್ನು ಪಾಲಿಸಿದರು; ಪ್ರಧಾನನು ಅವನ ಅಪರಿಮಿತ ಸ್ವಾರ್ಥತ್ಯಾಗದ ಮತ್ತು ಅನವರತದ ದೇಶಸೇವೆಯ ಬಗ್ಗೆ ಪಾರ್ಲಮೆಂಟ ಸಭೆಯಲ್ಲಿ ಅವನಿಗೆ ಸ್ತೋತ್ರಾಂಜಲಿಯನ್ನು ಸಮರ್ಪಿಸಿದನು. ಇಡೀ ಇಟಲೀ ರಾಷ್ಟ್ರವು ತನ್ನ ಉದ್ಧಾರಕನ ನಿಧನದಿಂದ ದುಃಖಸಾಗರದಲ್ಲಿ ಮುಳುಗಿತು.

ಮರಣಕ್ಕೆ ಸ್ವಲ್ಪ ದಿವಸಗಳ ಪೂರ್ವದಲ್ಲಿ, ಮ್ಯಾಝಿನಿಯು ಇಟಲಿಯ ಜನರನ್ನು ಉದ್ದೇಶಿಸಿ ಅಂದದ್ದು:— "ನಾನು ಇನ್ನು ಕೆಲವು ದಿವಸ ಬಾಳಿದರೇನು ಅಥವಾ ತೀವ್ರವೇ ಮರಣಹೊಂದಿದರೇನು? ನಾನು ನಿಮ್ಮಿಂದ ದೂರ ಹೋಗುವೆನೆಂದು ನಿಮ್ಮ ಮೇಲಿರುವ ನನ್ನ ಪ್ರೇಮವು ಕಡಿಮೆಯಾಗುವದೋ? ಅಥವಾ ನೀವಾದರೂ ನನ್ನ ಕಾರ್ಯವನ್ನು ಹಾಗೇ ಮುಂದಕ್ಕೆ ಸಾಗಿಸಿ ನನ್ನ ಮೇಲಿನ ಪ್ರೇಮವನ್ನು ವ್ಯಕ್ತಮಾಡುವದಿಲ್ಲವೋ? ನಾನು ಈ ಜಗತ್ತನ್ನು ಬಿಟ್ಟುಹೋದ ಮೇಲೆ ನನ್ನ ಆಯುಷ್ಯದ ಕಾರ್ಯಭಾಗವು ನಷ್ಟವಾಗದ ಹಾಗೆ ನೀವೆಲ್ಲರೂ ಹೆಚ್ಚು ಆಸ್ಥೆಯಿಂದಲೂ, ಆತ್ಮವಿಶ್ವಾಸದಿಂದಲೂ ಕೆಲಸಮಾಡುವಿರೆಂದು ನನಗೆ ಆಶೆಯಿದೆ."

## ೧೨ನೇ ಪ್ರಕರಣ.

## ಜೋಸೆಫ್ ಮ್ಯಾಝಿನಿಯ ವಿಚಾರಗಳು.

ಕೆಳಗೆ ಕೊಟ್ಟ ಮ್ಯಾಝಿನಿಯ ವಿಚಾರಗಳು ಅವನ ಸುಪ್ರಸಿದ್ಧ ನೀತಿ ಗ್ರಂಥವಾದ "ಮನುಷ್ಯನ ಕರ್ತವ್ಯಗಳು" ಎಂಬ ಪುಸ್ತಕದೊಳಗಿಂದ ಉದ್ಧೃತವಾಗಿವೆ. ಈ ಪುಸ್ತಕವು ಇಟಲಿಯ ಕೂಲಿಕಾರರಿಗೆ ಉದ್ದೇಶಿಸಿ ಬರೆಯಲ್ಪಟ್ಟಿದೆ.

## ದೇವರು.

ದೇವರು ನಿಮ್ಮ ಕರ್ತವ್ಯಗಳ ಉಗಮಸ್ಥಾನವು. ಅವನು ವಿಧಿಸಿದ ಜಗತ್ತಿನ ನಿಯಮವನ್ನು ನೀವು ಗೊತ್ತುಮಾಡಿಕೊಂಡರೆ, ನಿಮ್ಮ ಕರ್ತವ್ಯಗಳು ಯಾವವು ಎಂಬದು ನಿಮಗೆ ಸ್ಪಷ್ಟವಾಗಿ ತಿಳಿಯುವವು. ಅವನ ಸೃಷ್ಟಿಸಿಯಮವನ್ನು ತಿಳಿದಷ್ಟು ಗೊತ್ತುಹಚ್ಚುವದೂ, ಅದರಂತೆ ನಿತ್ಯವ್ಯವಹಾರವನ್ನು ಮಾಡುವದೂ ಮಾನವ ಜಾತಿಯ ಇತಿಕರ್ತವ್ಯತೆಯಾಗಿದೆ.

* * * *

ಈ ಜಗತ್ತು ನಿರರ್ಥಕವಾದದ್ದೆಂದು ನೀವು ತಿಳಿಯಬೇಡಿರಿ. ಜಗತ್ತು ದೇವರದು. ದೇವರ ಉಚ್ಚಸ್ಥಾನಕ್ಕೆ ಹತ್ತಿಹೋಗಲು, ಅದೊಂದು ನಮ್ಮ ನಿಚ್ಚಣಿಕೆಯು. ನಮ್ಮನ್ನು ಪಾಪವೆಂಬ ಒಲೆಯಲ್ಲಿ ಹಾಕಲಿಕ್ಕಾಗಲಿ, ಮಾಡಿದ ಪಾಪಗಳ ದೆಶೆಯಿಂದ ಶಿಕ್ಷೆಯನ್ನು ಅನುಭವಿಸುವದಕ್ಕಾಗಲೀ ಈ ಜಗತ್ತಿನ ನಿರ್ಮಾಣವಾಗಿಲ್ಲ. ಆತ್ಮೋನ್ನತಿಯನ್ನು ಮಾಡಿಕೊಳ್ಳಲಿಕ್ಕೂ ಇದಕ್ಕೂ ಹೆಚ್ಚಿನ ಜನ್ಮವನ್ನು ಪಡೆಯಲಿಕ್ಕೂ ಇದೊಂದು ಈಶ್ವರನಿರ್ಮಿತವಾದ ಕರ್ಮಭೂಮಿಯು. ದೇವರು ನಮ್ಮನ್ನು ಕೇವಲ ಧ್ಯಾನದಲ್ಲಿ ಮಗ್ನರಾಗಿ ಆಯುಷ್ಯಕಳೆಯಲಿಕ್ಕೆ ಹುಟ್ಟಿಸಿಲ್ಲ; ಕರ್ಮಗಳನ್ನು ಮಾಡಲಿಕ್ಕೆ ಹುಟ್ಟಿಸಿರುತ್ತಾನೆ. ಸಕಲ ಐಹಿಕ ವಿಷಯಗಳನ್ನು ಬಿಟ್ಟುಕೊಟ್ಟು ಸಂಸಾರವನ್ನು ಧಿಕ್ಕರಿಸಿ ಕೇವಲ ಪಲಮಾರ್ಥ ವಿಚಾರದಲ್ಲಿ ಆಯುಷ್ಯಕಳೆಯಿರೆಂದು ಕೆಲವರು ಬೋಧಿಸುತ್ತಾರೆ. ಆದರೆ ಇಹಲೋಕ ಯಾತ್ರೆಯೆಂದರೇನು? ಅದು ಸ್ವರ್ಗಕ್ಕೆ ಏರಿಹೋಗುವ ಸೋಪಾನವಲ್ಲವೋ? ಸ್ವರ್ಗವು ಪರಮಪವಿತ್ರವಾದದ್ದೆಂದು ಒಪ್ಪಿಕೊಂಡು ಅದಕ್ಕೆ ಹತ್ತಿಹೋಗುವ ಸೋಪಾನದ ಪಙ್ಕ್ತಿಯು ಮಾತ್ರ ಅಪವಿತ್ರವೂ ತ್ಯಾಜ್ಯವೂ ಎಂದು ಅಂದರೆ, ನೀವು ಕಾಲೂರಿರುವ ಭೂಮಿಯನ್ನೇ ಕಡಿದುಹಾಕಿದಂತೆ ಆಗುವದಿಲ್ಲವೇ?

* * * *

## ಭಗವಂತನ ಸಂಕಲ್ಪವು ಅಥವಾ ನಿಯಮವು.

ನಿಮ್ಮನ್ನು ಹುಟ್ಟಿಸಿದವನು ದೇವರು; ನೀವು ಪಾಲಿಸತಕ್ಕ ಪ್ರಪಂಚದ ನಿಯಮಗಳನ್ನೂ ಅವನೇ ಹುಟ್ಟಿಸಿದನು. ಮಾನವಜಾತಿಗೆ ಶಾಶ್ವತವಾದ ಕಟ್ಟಳೆ

ಗಳನ್ನು ಹಾಕಿಕೊಡುವವನು ದೇವರಲ್ಲದೆ ಇನ್ನೊಬ್ಬರಿಲ್ಲ. ಅವನ ಕಾನೂನುಗಳನ್ನು ನೀವು ಸರ್ವಥಾ ಉಲ್ಲಂಘಿಸಲಾರದು. ಮಾನವೀ ಕಾಯದೆಗಳು ದೇವರ ಕಾಯದೆಗಳನ್ನು ಎಷ್ಟರಮಟ್ಟಿಗೆ ಅನುಸರಿಸುವವೋ ಅಷ್ಟರಮಟ್ಟಿಗೆ ಮಾತ್ರ ಅವು ನಿಮಗೆ ಮಾನ್ಯವಾಗಿವೆ. ಅವು ದೇವರ ಕಾಯದೆಗಳಿಗೆ ವಿರುದ್ಧವಾಗಿ ಇದ್ದರೆ ಅಂಥಾ ಮಾನವೀ ಕಾಯದೆಗಳನ್ನು ಉಲ್ಲಂಘಿಸುವದೂ, ಅವುಗಳನ್ನು ಕಿತ್ತಿಹಾಕುವದೂ ನಿಮ್ಮ ಹಕ್ಕು— ಅದೇಕೆ—ನಿಮ್ಮ ಧರ್ಮವಾಗಿರುತ್ತದೆ. ಯಾವನು ದೇವರ ಕಾಯದೆಗಳನ್ನು ನಿಮಗೆ ಸ್ಪಷ್ಟೀಕರಿಸಿ ಅವುಗಳನ್ನು ನಿತ್ಯ ವ್ಯವಹಾರದಲ್ಲಿ ಅನುಸರಿಸಲಿಕೆ ನಿಮಗೆ ಕಲಿಸುವನೋ, ಅವನೇ ನಿಮ್ಮ ಅಧಿಪತಿಯು; ಅವನನ್ನು ಭಕ್ತಿಯಿಂದ ನೀವು ಹಿಂಬಾಲಿಸಿರಿ.

* * * *

ಇವತ್ತಿನ ಮಿತಿಗೆ ನಮಗೆ ತಿಳಿದಿರುವದೇನಂದರೆ—ಪ್ರಗತಿಯೇ ನಮ್ಮ ಜೀವಿತದ ನಿಯಮವು; ವ್ಯಕ್ತಿಯ ಪ್ರಗತಿಯೇ ಮಾನವ ಕುಟುಂಬದ ಪ್ರಗತಿಯು. ಮಾನವ ಜಾತಿಯು ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಇದೇ ನಿಯಮದಿಂದ ಬದ್ಧವಾಗಿದೆ; ವ್ಯಕ್ತಿಯು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಇದೇ ನಿಯಮದಿಂದ ಬದ್ಧನಾಗಿದ್ದಾನೆ. ದೇವರು ಒಬ್ಬನೇ; ಅದರಂತೆ ಅವನ ಕಾಯದೆಯು ಒಂದೇ. ಜಗತ್ತಿನ ಆರಂಭದಿಂದ ಮಾನವ ಜಾತಿಯ ಇತಿಹಾಸದಲ್ಲಿ ಇದೇ ನಿಯಮವು ಕಂಡುಬರುತ್ತದೆ. ಜಗತ್ತಿನ ಸ್ವರೂಪಜ್ಞಾನವು ಒಂದೇ ವೇಳೆಗೆ ಅಥವಾ ಸಂಪೂರ್ಣವಾಗಿ ಎಂದೂ ಯಾರಿಗೂ ಆಗಿರುವದಿಲ್ಲ. ಪ್ರಪಂಚತತ್ವದ ಜ್ಞಾನವು ಬೇರೆಬೇರೆ ಕಾಲಗಳಲ್ಲಿ, ಅಲ್ಪಸ್ವಲ್ಪವಾಗಿ ಆಗುತ್ತ ಹೋಗುತ್ತದೆ. ಧಾರ್ಮಿಕ ಭಾವನೆಯು ಯಾವಾಗಲೂ ಪ್ರಗಮನಶೀಲವಾದದ್ದು, ಅಂದರೆ ಬೆಳೆಯುತ್ತ ಹೋಗುವಂಥಾದ್ದು.

* * * *

## ಮಾನವ ಕುಟುಂಬ.

ಬಾಂಧವರೇ, ನಿಮ್ಮ ಆದ್ಯಕರ್ತವ್ಯಗಳು ಮಾನವ ಕುಟುಂಬವನ್ನು ಅನುಲಕ್ಷಿಸಿರುತ್ತವೆ. ಮಾತಿನಿಂದಲೂ, ಕೃತಿಯಿಂದಲೂ ನೀವು ಲೋಕಕಲ್ಯಾಣಕ್ಕೆ ಸಹಾಯಕರಾಗಬೇಕು. ನೀವು ಯಾವದೇ ದೇಶದವರಾಗಲಿ, ಜಗತ್ತಿನ ಯಾವದೇ ಮೂಲೆಯಲ್ಲಿ ಸತ್ಯಕ್ಕಾಗಿ, ಅಥವಾ ನ್ಯಾಯಕ್ಕಾಗಿ ಯಾವನೊಬ್ಬ ಮನುಷ್ಯನು

ಹೋರಾಡುತ್ತಿದ್ದರೆ, ಅವನು ನಿಮ್ಮ ಬಂಧುವೆಂದು ತಿಳಿಯಿರಿ; ಯಾವನಾದರೂ ಮೂಢರಾದಂಥ, ಅನ್ಯಾಯಿಗಳಾದಂಥ, ಅಧಿಕಾರಮದಾಂಧರಾದಂಥ ಜನರ ಕೈಯಲ್ಲಿ ಸಿಕ್ಕು ಒದ್ದಾಡುತ್ತಿದ್ದರೆ, ಅವನು ನಿಮ್ಮ ಬಂಧುವೆಂದು ತಿಳಿಯಿರಿ. ಸ್ವತಂತ್ರ ದೇಶಗಳ ಜನರೂ, ಗುಲಾಮ ದೇಶಗಳ ಜನರೂ, ನೀವೆಲ್ಲರೂ ಅಣ್ಣ ತಮ್ಮಂದಿರು. ನಿಮ್ಮ ಉತ್ಪತ್ತಿಯು ಒಬ್ಬನೇ ಈಶ್ವರನಿಂದ ಆಗಿದೆ. ನಿಮ್ಮ ಜೀವನಕ್ರಮವು ಒಂದೇ ನಿಯಮದಿಂದ ಬದ್ಧವಾಗಿದೆ. ನಿಮ್ಮೆಲ್ಲರ ಅಂತಿಮ ಧ್ಯೇಯವು ಒಂದೇ. ನಿಮ್ಮ ತಿಳುವಳಿಕೆಗಳೂ, ಉದ್ಯೋಗಗಳೂ, ಏಕರೂಪ ವಾಗಲಿ. ನೀವೆಲ್ಲರೂ ಒಂದೇ ನಿಶಾನೆಯ ಕೆಳಗೆ ಹೋರಾಡಿರಿ. 'ನಮ್ಮ ಭಾಷೆಯು ಬೇರೆ, ಅವರ ಭಾಷೆಯು ಬೇರೆ' ಹೀಗೆ ಅನ್ನುತ್ತ ಸುಮ್ಮನೇ ಕೂಡ್ರಬೇಡಿರಿ. ಜನರ ಕಣ್ಣೀರುಗಳು, ಅವರ ಕೃತಿಗಳು, ಅವರು ಸತ್ಯಕ್ಕಾಗಿ ಮಾಡುವ ಪ್ರಾಣ ತ್ಯಾಗವು—ಇವು ಎಲ್ಲರಿಗೂ ತಿಳಿಯುವಂಥ ಭಾಷೆಯೊಳಗಿನ ಮಾತುಗಳು. ನಿಮ್ಮ ಕುಟುಂಬದ ದೆಸೆಯಿಂದ ಅಥವಾ ನಿಮ್ಮ ದೇಶದ ಸಲುವಾಗಿ ಯಾವದೊಂದು ಕೆಲಸವನ್ನು ಮಾಡಬೇಕೆನ್ನುವಾಗ "ನಾನು ಮಾಡಿದಂತೆ ಎಲ್ಲರೂ, ಸರ್ವರ ಉದ್ದಿಶ್ಯವಾಗಿ ಮಾಡಹತ್ತಿದರೆ, ಮಾನವಕುಟುಂಬದ ಕಲ್ಯಾಣವಾಗುವದೋ ಅಥವಾ ಅಕಲ್ಯಾಣವಾಗುವದೋ," ಎಂದು ನಿಮ್ಮ ಮನೋದೇವತೆಗೆ ಪ್ರಶ್ನೆ ಮಾಡಿರಿ. ನಿಮ್ಮ ವರ್ತನದಿಂದ ಮಾನವ್ಯದ ಅಕಲ್ಯಾಣವಾಗುತ್ತಿದ್ದರೆ, ಅದು ನಿಮ್ಮ ಕುಟುಂಬಕ್ಕೆ ಅಥವಾ ದೇಶಕ್ಕೆ ಎಷ್ಟೇ ಲಾಭಕರವಾದದ್ದಾದರೂ, ಅಂಥ ವರ್ತನದಿಂದ ನೀವು ನಿವೃತ್ತರಾಗಿರಿ. "ನಾವೆಲ್ಲರೂ ಒಂದೇ ಮಾನವ ಕುಟುಂಬ ದೊಳಗಿನ ಜನರು," ಎಂಬ ವಿಶ್ವಕುಟುಂಬ ಧರ್ಮವನ್ನು ಜಗತ್ತಿಗೆ ಸಾರಿ ಹೇಳುವ ದೇವದೂತರಾಗಿರಿ.

* * * *

## ಸ್ವದೇಶ.

ನೀವು ಸ್ವತಂತ್ರ ದೇಶದ ಮಕ್ಕಳಾಗಿರದಿದ್ದರೆ, ಜಗತ್ತಿನಲ್ಲಿ ನಿಮಗೆ ಹೆಸರು ಇಲ್ಲ; ಚಿಹ್ನವಿಲ್ಲ; ಮತವಿಲ್ಲ; ಹಕ್ಕುಗಳಿಲ್ಲ; ರಾಷ್ಟ್ರಸಂಘದಲ್ಲಿ ಸಮಾನಸ್ಕಂಧ ರಂತೆ ನಿಮಗೆ ಪ್ರವೇಶವೂ ಇಲ್ಲ. ಜಗತ್ತಿನ ಜನರಲ್ಲಿ ತುಚ್ಛರಂತೆ ನಿಮ್ಮ ಹಾಡಾ ಗುವದು. ನಿಮಗೆ ರಾಷ್ಟ್ರೀಯ ನಿಶಾನೆಯಿಲ್ಲ; ಯಾವರಾಷ್ಟ್ರವೂ ನಿಮ್ಮ ಮೇಲೆ ವಿಶ್ವಾಸವಿಡುವದಿಲ್ಲ; ನಿಮ್ಮ ಸಂರಕ್ಷಣೆಯನ್ನು ಮಾಡಲು ಯಾರೂ ಮುಂದೆ

ಬರುವದಿಲ್ಲ; ಯಾರೂ ನಿಮಗೆ ಹೊಣೆಗಾರರು ಆಗುವದಿಲ್ಲ. ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆಯದೆ, ಸಮಾಜಸುಧಾರಣೆಯನ್ನು ಮಾಡಿಕೊಳ್ಳಬಹುದೆಂಬ ಭ್ರಮೆಗೆ ಬೀಳಬೇಡಿರಿ. ದೇಶವು ಸ್ವತಂತ್ರವಿರದಿದ್ದರೂ, ನಿಮ್ಮ ಐಹಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಬಹುದೆಂಬ ಹುಚ್ಚುಕಲ್ಪನೆಗೆ ನೀವು ಇಂಬುಗೊಡಬೇಡಿರಿ. ನಿಮ್ಮ ಉದ್ಯೋಗಸಂಘಗಳೂ, ಪರಸ್ಪರ ಸಹಾಯಕಾರೀ ಸಂಘಗಳೂ, ಲೋಕಶಿಕ್ಷಣಕ್ಕೂ, ಜನತೆಯ ಸುವ್ಯವಸ್ಥೆಗೂ ಸಹಾಯಕಾರಿಯಾಗಬಹುದು. ಆದರೆ ಇಟಲಿಯು ಸ್ವತಂತ್ರವಾಗದೆ, ಅಂಥ ಸಂಸ್ಥೆಗಳಿಂದ ಆರ್ಥಿಕ ಸುಧಾರಣೆಯು ಯೋಗ್ಯವಾಗಿ ಆದೀತೆಂದು ನೀವು ಸರ್ವಥಾ ತಿಳಿಯಬೇಡಿರಿ.

* * * *

ಒಂದೇ ಧ್ಯೇಯವನ್ನು ಮುಂದಿಟ್ಟುಕೊಂಡು ಸ್ನೇಹಭಾವದಿಂದ ಕೆಲಸ ಮಾಡುವ ಸ್ವತಂತ್ರರಾದ ಮತ್ತು ಸರ್ವಸಮಾನ ಹಕ್ಕುಗಳುಳ್ಳ ಜನರ ಸಂಘಕ್ಕೆ 'ರಾಷ್ಟ್ರ' ವೆನ್ನುವರು. ಒಂದು ವೇಳೆ ನಿಮ್ಮ ರಾಷ್ಟ್ರವು ಇದರಂತೆ ಇರದಿದ್ದರೆ, ಅದನ್ನು ಹೊಸದಾಗಿ ಈ ಪ್ರಕಾರ ನಿರ್ಮಾಣಮಾಡುವದೂ, ಈ ಸ್ಥಿತಿಯಲ್ಲಿ ಅದನ್ನು ಕಾದುಕೊಳ್ಳುವದೂ ನಿಮ್ಮ ಕರ್ತವ್ಯವು. ರಾಷ್ಟ್ರವೆಂದರೆ ಕೇವಲ ಜನರ ಸಮುದಾಯವಲ್ಲ, ಜನರ ಸಂಘವು. ಎಲ್ಲರಿಗೂ ಸರ್ವಸಮಾನ ಹಕ್ಕುಗಳಿರದಿದ್ದರೆ ರಾಷ್ಟ್ರವು ಆಗಲಾರದು. ಯಾವ ದೇಶದಲ್ಲಿ ಜಾತಿಗಳೂ, ವಿಶಿಷ್ಟ ಹಕ್ಕುಗಳೂ, ವಿಷಮತೆಯೂ, ಇರುವವೋ ಆ ದೇಶವು ರಾಷ್ಟ್ರವೆನಿಸಲಾರದು. ಅದು ಕೇವಲ ಜನರ ಸಂದಣಿಯು. ಆ ಜನರು ಆಕಸ್ಮಿಕ ಕಾರಣಗಳಿಂದ ಬಂದು ಕೂಡಿದ್ದು ಆಕಸ್ಮಿಕ ಕಾರಣಗಳಿಂದಲೇ ಅವರು ಬೇರೆಬೇರೆಯಾಗಬಹುದು. ನಿಮ್ಮಲ್ಲಿ ನಿಜವಾದ ದೇಶಪ್ರೀತಿಯು ವಾಸಮಾಡುತ್ತಿದ್ದರೆ, ನೀವು ನಿಮ್ಮ ಜನ್ಮಭೂಮಿಯಲ್ಲಿ ಇಂಥ ವಿಷಮಹಕ್ಕುಗಳ ವಿರುದ್ಧವಾಗಿ ಯುದ್ಧವನ್ನು ಹೂಡಿರಿ.

* * * *

## ಕುಟುಂಬ.

ನೀವು ನಿಮ್ಮ ಮಕ್ಕಳಿಗೆ ಪ್ರತ್ಯಕ್ಷ ಉದಾಹರಣೆಯಿಂದ ಕಲಿಸಿರಿ. ಯಾಕಂದರೆ ನಿಮ್ಮ ಮಕ್ಕಳು ನಿಮ್ಮಂತೆ ಆಗುವರು. ನೀವು ಶೀಲವಂತರಾದರೆ, ಅವರೂ ಶೀಲವಂತರಾಗುವರು; ನೀವು ಶೀಲಭ್ರಷ್ಟರಾದರೆ, ಅವರೂ ಶೀಲಭ್ರಷ್ಟರಾಗುವರು.

ನಿಮ್ಮಲ್ಲಿ ಸರಳತನವೂ, ಬಂಧುಪ್ರೀತಿಯೂ ಇರದಿದ್ದರೆ, ನಿಮ್ಮ ಮಕ್ಕಳು ಸರಳರೂ, ಪ್ರಿಯಾಳುಗಳೂ ಹ್ಯಾಗೆ ಆಗಬೇಕು? ನೀವು ನಿಮ್ಮ ಆಹಾರವಿಹಾರಾದಿಗಳಲ್ಲಿ ತಾಳಬಿಟ್ಟರೆ, ಅವರು ತಮ್ಮ ವಿಷಯವಾಸನೆಗಳನ್ನು ಬಿಗಿಹಿಡಿಯಲಿಕ್ಕೆ ಹ್ಯಾಗೆ ಕಲಿಯಬೇಕು? ನೀವು ಅವರ ಎದುರಿಗೆ ಅವಾಚ್ಯ ಶಬ್ದಗಳನ್ನು ಉಚ್ಚರಿಸುತ್ತ, ದುಷ್ಕೃತ್ಯಗಳನ್ನು ಮಾಡಹತ್ತಿದರೆ, ಆ ಚಿಕ್ಕಮಕ್ಕಳು ತಮ್ಮ ನೈಸರ್ಗಿಕ ಚಿತ್ತಶುದ್ಧಿಯನ್ನು ಹ್ಯಾಗೆ ಕಾಯ್ದುಕೊಳ್ಳಬೇಕು? ಮಕ್ಕಳ ಕೋಮಲಾಂತಃಕರಣದ ಮೇಲೆ ತಂದೆತಾಯಿಗಳ ಜೀವನಕ್ರಮವು ಮುದ್ರೆಯಂತೆ ಮೂಡುವದು. ನಿಮ್ಮ ಮಕ್ಕಳು ಮನುಷ್ಯರಾಗುವದೂ, ಪಶುಗಳಾಗುವದೂ ನಿಮ್ಮನ್ನೇ ಕೂಡಿದೆ.

ಮಕ್ಕಳಿಗೆ ಬಾಯಿಮಾತಿನಿಂದಲೂ ಶಿಕ್ಷಣ ಕೊಡಬಹುದು. ನಿಮ್ಮ ದೇಶವು ಹಿಂದಕ್ಕೆ ಹ್ಯಾಗೆ ಇತ್ತು? ಈಗ ಯಾವ ಸ್ಥಿತಿಯಲ್ಲಿದೆ? ಮುಂದೆ ಹ್ಯಾಗೆ ಆಗಬೇಕು? ಇವೆಲ್ಲ ಸಂಗತಿಗಳನ್ನು ನೀವು ಅವರಿಗೆ ತಿಳಿಹೇಳಿರಿ. ನೀವು ಸಂಜೆಯ ಮುಂದೆ ಮನೆಗೆ ಬಂದ ಮೇಲೆ, ಸ್ತ್ರೀಯರ ಮಂದಸ್ಮಿತಗಳಿಂದಲೂ, ಚಿಕ್ಕಮಕ್ಕಳ ಮುದ್ದು ಮಾತುಗಳಿಂದಲೂ ನಿಮ್ಮ ಶ್ರಮಪರಿಹಾರವಾದನಂತರ ನೀವು ನಿಮ್ಮ ಮಕ್ಕಳಿಗೆ— ಪ್ರಾಚೀನಕಾಲದ ಲೋಕಸತ್ತಾತ್ಮಕರಾಜ್ಯಗಳಲ್ಲಿ ಸಾಮಾನ್ಯ ಜನರು ಯಾವ ಯಾವ ಮಹತ್ಕೃತ್ಯಗಳನ್ನು ಮಾಡಿದರು? ಯಾವ ಯಾವ ಮಹಾಪುರುಷರು ಇಟಲಿಯ ಮೇಲಿನ ಪ್ರೇಮದಿಂದ, ಬಂದ ಬವಣೆಗಳನ್ನೂ, ಲೋಕನಿಂದೆಯನ್ನೂ, ರಾಜಪೀಡೆಯನ್ನೂ ಲೆಕ್ಕಿಸದೆ, ದೇಶೋದ್ಧಾರಕ್ಕಾಗಿ ಹೆಣಗಿದರು? ಎಂಬ ಮಾತುಗಳನ್ನು ಅವರಿಗೆ ಹೇಳಿರಿ. ಪ್ರಜಾಪೀಡೆಯನ್ನು ಮಾಡಿದ ವ್ಯಕ್ತಿಗಳ ಬಗ್ಗೆ ದ್ವೇಷವನ್ನು ಹುಟ್ಟಿಸದೆ, ಪ್ರಜಾಪೀಡೆಯನ್ನು ತಮ್ಮ ಎಲ್ಲ ಶಕ್ತಿಯಿಂದ ವಿರೋಧಿಸಲಿಕ್ಕೆ ಅವರು ಕೃತನಿಶ್ಚಯರಾಗುವಂತೆ ಮಾಡಿರಿ. ಸದಾಚರಣೆಯ ಮಾರ್ಗವು ಬಹು ಮನೋಹರವಾದದ್ದು; ಸತ್ಯಪ್ರತಿಪಾದನೆಯಲ್ಲಿ ಆಯುಷ್ಯವನ್ನು ಕಳೆಯುವದು ಬಹು ಗೌರವದ ಕೆಲಸವು; ಪ್ರಸಂಗಬಂದಾಗ್ಗೆ ತನ್ನ ಬಾಂಧವರಿಗಾಗಿ ತನ್ನ ಜೀವದ ಮೇಲೆ ತಿಲಾಂಜಲಿಯನ್ನು ಬಿಡುವದು ಅತ್ಯಂತ ಪುಣ್ಯಕರವಾದ ಕೆಲಸವು; ಇಂಥ ಮಾತುಗಳ ಸತ್ಯತೆಯು ಅವರ ಮನಸ್ಸಿನಲ್ಲಿ ನಡುವಂತೆ ನೀವು ಮಾಡಿರಿ.

## ಸಮಾಪ್ತ.

Printed by M. K. Joshi, at the Karnatak Printing Works, Dharwar.

ಖಾತ್ರೀ ಮಾಲು ! ಸೋವೀ ದರ !! ತ್ವರೆಮಾಡಿ !!!

## ಜವಳೀ ಅಂಗಡಿಯು.

ಈ ಅಂಗಡಿಯಲ್ಲಿ ಧಾರವಾಡದಲ್ಲಿ ತಯಾರಾಗುವ ಇಳಕಲ್ಲ ನಮೂನೆ ಮಾಶೀರೆಗಳೂ, ಕಿರಗೆಗಳೂ, ಖಣಗಳೂ, ಶರ್ಟಿನ-ಕೋಟಿನ ಅರಿವೆಗಳೂ, ಉಡುವ ಧೋತರಗಳೂ, ಅಚ್ಚಿನ ಬಟ್ಟೆಗಳೂ ಯೋಗ್ಯ ದರಕ್ಕೆ ದೊರೆಯುವವು. ಮಾಲು ತೆಗೆದುಕೊಂಡು ಖಾತ್ರಿಮಾಡಿಕೊಳ್ಳಿರಿ. ಇವುಗಳನ್ನು ಠೋಕ ತೆಗೆದುಕೊಂಡರೆ ಭರಪೂರ ಕಮೀಶನ್ ಸಿಗುವದು.

ನಮ್ಮ ವಿಳಾಸ:— ಎಫ್. ಎಮ್. ಕುದರಿ,
ಜವಳೀ ದುಕಾನ, ದತ್ತಮಂದಿರದ ಹತ್ತರ,
ಧಾರವಾಡ.

---

ಗ್ರಾಹಕರು ತ್ವರೆಮಾಡಬೇಕು ! ಪ್ರತಿಗಳು ಮುಗಿಯಲಿಕ್ಕೆ ಬಂದವು !!

## ಸರಸ್ವತೀ ಭಾರತ ಭಕ್ತಗ್ರಂಥಮಾಲೆ.

ನಮ್ಮ ಮಾಲೆಯು ಸರ್ ಜಗದೀಶಚಂದ್ರ ಬೋಸ ಮೊದಲಾದ ಪುಸ್ತಕಗಳನ್ನು ಒಳ್ಳೇ ಅಭಿಪ್ರಾಯದಿಂದ ಮುಂಬಯಿ ಸರಕಾರದ ದಕ್ಷಿಣಭಾಗದ ವಿದ್ಯಾಖಾತೆಯವರು ಇನಾಮಿನ ಪುಸ್ತಕಗಳಾಗಿ ಮಂಜೂರ ಮಾಡಿರುವರು. ಮದ್ರಾಸ ಹಾಗೂ ಮೈಸೂರು ಸರಕಾರಗಳಿಂದ ಇದೇಪ್ರಕಾರ ಪ್ರೋತ್ಸಾಹವು ದೊರಕಬಹುದೆಂದು ತೋರುತ್ತದೆ. ಕನ್ನಡಿಗರು ಅಭಿಮಾನದಿಂದ ನಮ್ಮ ಪುಸ್ತಕಗಳನ್ನು ಕೊಂಡು ಇದಕ್ಕೂ ಹೆಚ್ಚಿಗೆ ನಮ್ಮಿಂದ ಕೆಲಸವಾಗುವಂತೆ ಉತ್ತೇಜನ ಕೊಡುವರೆಂದು ನೆರೆನಂಬುವ.

ಕೃಷ್ಣ ಗುರು ಸಂಗಮ,
ಸಂಪಾದಕ,
ಸ. ಭಾ. ಭ. ಗ್ರಂಥಮಾಲಾ, ಧಾರವಾಡ.

MEDICINES.

## ೧೦೦೦ ರೂಪಾಯಿ ಬಹುಮಾನಗಳು.

# ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ರಜಿಸ್ಟರ್ಡ್ ಟ್ರೇಡ ಮಾರ್ಕವನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ; ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯಾದರೂ, ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ

ರಜಿಸ್ಟರ್ಡ




ಉಂಟುಮಾಡುವದು. ಅಜೀರ್ಣ ಮಲಬದ್ಧತೆ ಮೊಣಕಾಲಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ದಿವ್ಯ ಔಷಧವು, ಈ ಸಾಲಂಮಿಸ್ರಿ ಎಂಬುವದು ಕಾಬೂಲ ಕಂದಾಹಾರ ಪ್ರಾಂತಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿನೋಡಬಹುದು ಇವುಗಳು ಸುಳ್ಳು ಎಂತ ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟ ಮೂಲಕ ಅವನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣ ಖಂಡಿತವಾಗಿ ತೋರುವುದು. ೨ ಯಾ ೩ ಡಬ್ಬಿಗಳು ಪೂರ್ಣವಾಗಿ ಗುಣವನ್ನುಂಟು ಮಾಡುವವು.

ಕ್ರಯ ಡಬ್ಬಿ ೧ಕ್ಕೆ ರೂ. ೨-೦-೦ ಟಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳವರೆಗೆ ೦-೮-೦ ಆಣೆ.

ಟೆಲಿಗ್ರಾಫ್ ಎಡ್ರೆಸ್—"ಮಿಸ್ರಿ" ಬೆಂಗಳೂರು

ಡಾ|| ಮುನ್ನಾಲಾಲ್, ದಿಲ್ಲಿ ವೈದ್ಯರು,

ಸಾಲಂಮಿಶ್ರಿ ಮುರಬ್ಬಾ ಡಿಪೋ, ಬೆಂಗಳೂರ ಸಿಟಿ.

## ಯಲ್ಲಪ್ಪಾ ಬೆನಕಪ್ಪಾ ಸಾಂಬ್ರಾಣಿ, ಧಾರವಾಡ.

ನಮ್ಮಲ್ಲಿ ನಿಪ್ಪಾಣಿ, ಕೊಲ್ಹಾಪೂರ ನಮೂನೆ, ಆಜರೆ, ವೆಂಗುರ್ಲೆ, ರತ್ನಾಗಿರಿ, ಧಾರವಾಡ ಮುಂತಾದ ಕೆರಗಳು; (ಸಂಟಿಮುರಿ ಚಿಕ್ಕೋಡಿ), [ವಿಜಾಪೂರ, ಬಾಗಲಕೋಟೆ] ಸವದತ್ತಿ ಮುಚ್ಚಿಗಳೂ; ಕ್ರೋಮಚರ್ಮದ ಕೆರ ಮತ್ತು ಬ್ರೌನ ಬಣ್ಣದ ಫುಲ್‌ಬೂಟ್ಸ್, ಲೇಸಿಂಗ ಮತ್ತು ಕ್ಲಿಪ್‌ಶೂಜೂ; ಸ್ಲಿಪರುಗಳೂ ಮಾರಲಿಕ್ಕೆ ಸಿಗುವವು. ಹೊಸದಾಗಿಯೂ ತಯಾರಾಗುತ್ತವೆ. ಜೋಡುಗಳನ್ನು ವ್ಹಿ. ಪಿ. ಪಾರ್ಸಲದಿಂದಲೂ ಕಳಿಸುವೆವು. ವಿಶೇಷ ಮಾಹಿತಿಯನ್ನು ಪತ್ರದಿಂದ ತಿಳಕೊಳ್ಳಬಹುದು. ಸಣ್ಣ ದೊಡ್ಡ ಸಾಯಿಜಿನಂತೆ ಕಿಮ್ಮತ್ತಾದರೂ ಹೆಚ್ಚು ಕಡಿಮೆಯುಂಟು. ೫ ರೂಪಾಯಿಯಿಂದ ಹೆಚ್ಚಿನ ರಕಮಿನ ವ್ಹಿ. ಪಿ. ತರಿಸುವದಿದ್ದಲ್ಲಿ ನಮಗೆ ೧। ರೂಪಾಯಿ ಅಗಾವು ಕಳಿಸತಕ್ಕದ್ದು. ವ್ಹಿ. ಪಿ. ಪರತ ಮಾಡಿದಲ್ಲಿ ವ್ಹಿ. ಪಿ. ಖರ್ಚು ವಸೂಲಮಾಡಲಾದೀತು. ಜೋಡುಗಳನ್ನು ಉಪಯೋಗಿಸದೆ ಇದ್ದಲ್ಲಿ ಗಿರಾಕಿಕಡಿಂದ ಜೋಡುಗಳನ್ನು ಪರತ ತೆಗೆದುಕೊಳ್ಳುವೆವು. ಜೋಡುಗಳನ್ನು ಕೊಂಡುಕೊಂಡು ನೋಡಿರಿ! ಖಾತ್ರಿಯಾಗಲಿ.

ಬೆನಕಪ್ಪಾ ಭರಮಪ್ಪಾ ಸಾಮ್ರಾಣಿ ಆ್ಯಂಡ ಸನ್ಸ,
ಧಾರವಾಡ.

---

## ವ್ಯಾಯಿಕರ ಆ್ಯಂಡ ಕಂಪನಿ,

### ಲಿಮಿಟೆಡ್, ಬ್ಯಾಂಕರ್ಸ, ಹುಬ್ಬಳ್ಳಿ.

ಇಂಡಿಯನ್ ಕಂಪನಿಗಳ ೧೯೧೩ನೇ ಇಸ್ವಿಯ ೭ನೇ ಆಕ್ಟದನ್ವಯ ರಜಿಸ್ಟರ ಆಗಿರುತ್ತದೆ. ಈ ಬ್ಯಾಂಕಿನಲ್ಲಿ ಇತರ ಬ್ಯಾಂಕುಗಳಂತೆ ಗವ್ಹರ್ನಮೆಂಟ ಬಾಂಡ, ಚಕ್, ಮತ್ತು ಹುಂಡಿ ವಗೈರೆ ತಕ್ಕೊಳ್ಳುವದಲ್ಲದೆ ಯೋಗ್ಯ ಸವಲತ್ತಿನಿಂದ ಡಿಪಾಜಿಟ ಹಣವನ್ನು ಇಟ್ಟುಕೊಳ್ಳಲಾಗುವದು. ಮತ್ತು ಪ್ರಾಮಿಸರಿ ನೋಟು, ಯೋಗ್ಯ ಜಾಮೀನು ಅಥವಾ ದಾಗೀನೆಗಳ ಮೇಲಿಂದ ಸಾಲಾ ಸಹಾ ಕೊಡುವದಲ್ಲದೆ ವ್ಯಾಪಾರಸ್ಥರಿಗೂ ಮತ್ತೂ ವಿಶೇಷ ವ್ಯವಹಾರ ಮಾಡುವವರಿಗೂ ಯೋಗ್ಯ ಸವಲತ್ತು ಕೊಡಲಾಗುವದು. ವಿಶೇಷ ಮಾಹಿತಿ ರೂಲ್ಸ ಪುಸ್ತಕದಿಂದ ಅಥವಾ ಬ್ಯಾಂಕ ಸೆಕ್ರೆಟರಿಗಳ ಕಡಿಯಿಂದಾ ತಿಳಕೊಳ್ಳಬೇಕು. ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ.

# ಪ್ರತಿಯೊಬ್ಬರಿಂದ ಸಂಗ್ರಹಣೀಯ ಪುಸ್ತಕಗಳು.

| | | |
|---|---|---|
| | | ರೂ. ಆ. ಪೈ. |
| ೧. | ಜ್ಞಾನಸಿಂಧು ವಚನರೂಪ ( ಲೇ. ಗುಂಡಪ್ಪ ಶಾಸ್ತ್ರಿ ಕವಿ. ) | ೩—೮—೦ |
| ೨. | ಶ್ರೀ ಸಿದ್ಧಾರೂಢಸ್ವಾಮಿ ಚರಿತ್ರೆ. | ೧—೦—೦ |
| ೩. | ಹಾತಿಮತಾಯಿ (ಮನೋಹರವಾದ ಕಥೆಗಳಿಂದ ಯುಕ್ತವು) | ೧—೧೨—೦ |
| ೪. | ಸಂತಾನದೀಪಿಕಾ | ೧—೦—೦ |
| ೫. | ಅಡವಿಯ ಹುಡಿಗೆ | ೦—೧೩—೦ |
| ೬. | ಪ್ರಬುದ್ಧ ಪದ್ಮನಯನೆ | ೧—೦—೦ |
| ೭. | ದಮಯಂತೀ ಕಲ್ಯಾಣ | ೦—೧೨—೦ |
| ೮. | ಖಿಲಾಫತವೂ, ಇಂಗ್ಲಂಡವೂ | ೧—೪—೦ |
| ೯. | ಧಾತುರಂಜಿತ ವೈದ್ಯರತ್ನ | ೧—೮—೦ |
| ೧೦. | ಆರೋಗ್ಯಜೀವನ ( ಹರಡೇಕರ ) | ೦—೮—೦ |
| ೧೧. | ಗರ್ಭಿಣೀ ಶಿಶುರಕ್ಷಕ | ೧—೩—೦ |
| ೧೨. | ಪ್ರಭುಲಿಂಗಲೀಲೆ ವಚನ ( ಬಿಳೇಅಂಗಡಿ ಕೃತ ) | ೧—೦—೦ |
| ೧೩. | ವೀರಶೈವರ ಜೋಗಳಪದ | ೦—೪—೦ |
| ೧೪. | ಸ್ತ್ರೀ ಧರ್ಮನೀತಿ | ೦—೧೨—೦ |
| ೧೫. | ದೇವೀಪುರಾಣ ವಾಲಿಗಳು | ೪—೦—೦ |
| ೧೬. | ಪುರಂದರದಾಸರ ಪದಗಳು ೩ ಭಾಗಗಳು ಕೂಡಿ (ಬೇರೆ ಬೇರೆ) | ೧—೧೪—೦ |
| ೧೭. | ಭೋಜಪ್ರಬಂಧ ನಾಟಕ | ೧—೪—೦ |
| ೧೮. | ಕಬೀರದಾಸರ ನಾಟಕ | ೧—೦—೦ |
| ೧೯. | ಪಶ್ಚಾತ್ತಾಪ | ೧—೦—೦ |
| ೨೦. | ಸಂಗೀತ ಸ್ವರಬೋಧಿನೀ | ೦—೧೨—೦ |
| ೨೧. | ಇಂಡಿಯನ್ ಪಿನಲ್‌ಕೋಡ | ೩—೮—೦ |
| ೨೨. | ಕನ್ನಡ ಇಂಗ್ಲೀಷ ಸ್ವಯಂಶಿಕ್ಷಕ | ೧—೮—೦ |

ನಮ್ಮ ಡಿಪೋದಲ್ಲಿ ಎಲ್ಲ ತರದ ಪುಸ್ತಕಗಳು ಸಿಗುತ್ತವೆ. ವ್ಹಿ. ಪೀ. ಯಿಂದ ತರಿಸಿಕೊಳ್ಳಿರಿ.

ಎ. ಆರ್. ವಿರುಪಾಕ್ಷಪ್ಪಾ, ವಾಗ್ವಿಲಾಸ ಬುಕ್‌ಡಿಪೋ,

ಪಬ್ಲಿಶರ, ಧಾರವಾಡ.

## ಇದುವರೆಗೆ ಅರಳಿದ ನವ್ಯ ಮಾಲೆಯ

## ಕುಸುಮ ಗುಚ್ಛಗಳು.

ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಷಣ್ಮಾಸದಲ್ಲಿ ಅರಳಿದವುಗಳು.

(೧) ಲೋಕಮಾನ್ಯವಿಜಯ. (೨) ಸರೋಜಿನಿ ದೇವಿ. (೩) ಮಹಾತ್ಮಾ ಗಾಂಧಿ (೪) ಲಾಲಾಲಜಪತರಾಯ. (೫) ದೇಶಬಂಧು ಚಿತ್ತರಂಜನದಾಸ. (೬) ರವೀಂದ್ರನಾಥ ಠಾಕೂರ. (೭) ಅರವಿಂದ ಘೋಷ. (೮) ಪಂಡಿತ ಮದನಮೋಹನ ಮಾಲವೀಯ. (೯) ಪಂಡಿತ ಮೋತೀಲಾಲ ನೆಹರು. (೧೦) ವೀರ ಅಲ್ಲೀ ಬಂಧುಗಳು. (೧೧) ದಾದಾಭಾಯಿ ನವರೋಜಿ. (೧೨) ಕೈ॥ ಗೋಪಾಳಕೃಷ್ಣ ಗೋಖಲೆ (೧೩) ಜಗದೀಶ ಚಂದ್ರ ಬೋಸ. (೧೪) ಸಾಧ್ವೀ ಅಹಲ್ಯಾದೇವಿ ಹೊಳ್ಕರ. (೧೫) ಲಕ್ಷ್ಮೀಬಾಯಿ ಝಾಂಸಿ. (೧೬) ಮ್ಯಾಝಿನಿ. (೧೭) ನೆಪೋಲಿಯನ್. (೧೮) ಕೌಂಟ ಲಿಓ ಟಾಲ್‌ಸ್ಟಾಯ್. (೧೯) ಲೆನಿನ್. (೨೦) ಮ್ಯಾಕ್ಸ್ವಿನಿ.

---

## ಜಾಹೀರಾತಿನ ದರವು

| | | | | | | |
|---|---|---|---|---|---|---|
| | | | ರೂ. ಆ. ಪೈ. | | | ರೂ. ಆ. ಪೈ. |
| ಸಾ. ಬಾ | ಒಂದು | ಪುಟವು | ೬೦—೯—೦ | ವರ್ಷಕ್ಕೆ | ಮೇಲ್ಪುಟದ ಹಿಂಬದಿಯಲ್ಲಿ | ೪೦—೦—೦ |
| ,, | ೧/೨ | ,, | ೩೨—೦—೦ | ,, | ಕೊನೆಯ ಮೇಲ್ಪುಟದಲ್ಲಿ | ೭೨—೦—೦ |
| ,, | ೧/೪ | ,, | ೧೮—೦—೦ | ,, | ,, ಹಿಂಬದಿಯಲ್ಲಿ | ೪೦—೦—೦ |
| ,, | ೧/೮ | ,, | ೧೧—೦—೦ | ,, | ಗ್ರಂಥದ ಸಮಾಪ್ತಿಯ ಬದಿಯಲ್ಲಿ | ೭೨—೦—೦ |

**ಕೃಷ್ಣ ಗುರು ಸಂಗಮ,**

ಸಂಪಾದಕ ಸ. ಭಾ. ಭ. ಗ್ರ. ಹುಬ್ಬಳ್ಳಿ.

ಸುಪ್ರಸಿದ್ಧ] ಶಾಂತವೀರ [ಸುವಾಸಿಕ

| | | | | ರೂ. | ಆ. | ಪೈ. |
|---|---|---|---|---|---|---|
| ೧. | ಹುರುಕಿನ ಔಷಧ | ಚೀಟು | ೧೦೦ಕ್ಕೆ | ೪ | ೮ | ೦ |
| ೨. | ಹೇನು ಶೀರುನಾಶಕ | ,, | ,, | ೧ | ೧೨ | ೦ |
| ೩. | ಕಣ್ಣುಬೇನೆಯ ಔಷಧ | ,, | ,, | ೧ | ೦ | ೦ |
| ೪. | ಜ್ವರಹರಚೂರ್ಣ | ,, | ,, | ೧ | ೦ | ೦ |
| ೫. | ನೀಲೀಕಸ್ತ್ರ್ಯಾನುಸಿ ಪುಡಿ | ,, | ,, | ೧ | ೦ | ೦ |
| ೬. | ಪಿತ್ತಶಾಂತಿಸೂಗುಣದಕ್ಕಿ | ,, | ,, | ೪ | ೦ | ೦ |
| ೭. | ಕ್ರಿಮಿನಾಶಕ (ಜಂತಿನಪುಡಿ) | ,, | ,, | ೪ | ೮ | ೦ |
| ೮. | ದಂತಮಂಜನ | ,, | ,, | ೪ | ೮ | ೦ |
| ೯. | ರೋಗಮಸಂಹಾರಿ | ,, | ,, | ೪ | ೮ | ೦ |
| ೧೦. | ಹಲ್ಲುಶೂಲಿಯ ಔಷಧ | ಬಾಟ್ಲಿ | ೧ಕ್ಕೆ | ೦ | ೪ | ೦ |
| ೧೧. | ತಲಿಶೂಲಿಯ ,, | ,, | ,, | ೦ | ೪ | ೦ |
| ೧೨. | ಕಿವಿಶೂಲಿಯ ,, | ,, | ,, | ೦ | ೪ | ೦ |
| ೧೩. | ವ್ರಣನಾಶಕ ತೈಲ | ,, | ,, | ೦ | ೪ | ೦ |
| ೧೪. | ನೇತ್ರಬಿಂದು | ,, | ,, | ೦ | ೪ | ೦ |
| ೧೫. | ಗಜಕರ್ಣನುಲಾಮು | ಡಬ್ಬಿ | ,, | ೦ | ೪ | ೦ |
| ೧೬. | ಇಸಬಿನ ,, | ,, | ,, | ೦ | ೪ | ೦ |
| ೧೭. | ಖುಜ್ಜಿ ,, | ,, | ,, | ೦ | ೪ | ೦ |
| ೧೮. | ರತಿಸಂಜೀವಿನಿ | ,, | ,, | ೧ | ೦ | ೦ |
| ೧೯. | ಬಾಲಶಾಂತೀಗುಳಿಗೆಗಳು | ,, | ,, | ೬ | ೦ | ೦ |
| ೨೦. | ಚಳಿಜ್ವರದ ,, | | ೨೫ಕ್ಕೆ | ೦ | ೧೨ | ೦ |

ಇವುಗಳೆಲ್ಲ ಟಪಾಲು ಖರ್ಚು ಬೇರೆ. ೧ ರೂ. ಕ್ಕಿಂತ ಕಡಿಮೆ ವ್ಹೀ. ಪಿ. ಬೇಡಬಾರದು.

ಡಾಕ್ಟರ—ಎಸ್. ಆರ್. ಕಿತ್ತೂರ. (S. B. B. G.)

ಶಾಂತೀವಿಳಾಸ, "ಶಾಂತವೀರ" ಧಾರವಾಡ. } "ಪಶುಸಂಜೀವಿನಿ" ಶೋಧಕ, ಧಾರವಾಡ.